ಶ್ರೀ ಎನ್. ಹುಚ್ಚಮಾಸ್ತಿಗೌಡ:—ಸೆಕ್ಷನ್ ೮೦(ಎ) ಪ್ರಕಾರ ಯಾವ ರೀತಿಯಾದ ನೀತಿ ನಿಯಮಗಳಿವೆಯೋ ಅವನ್ನು ಸಾಕಾದಷ್ಟು ಎಚ್ಚರಿಕೆಯಿಂದ ನೋಡಿ ಮಾಡಲಾಗಿದೆಯೆಂದು ನಾನು ಈ ಸಭೆಗೆ ಭರವಸೆ ಕೊಡುತ್ತೇನೆ.

MADAM SPEAKER.—The question is :

"That the Registration (Karnataka Amendment) Bill, 1976, as passed by the Legislative Council be taken into consideration."

The motion was aodpted.

CLAUSE 2 TO 19

MADAM SPEAKER.—The question is:

"That clauses 2 to 19, both inclusive and the Schedule do stand part of the Bill."

The motion was adopted

Clauses 2 to 19 both inclusive, were added to the Bill

CLAUSES 1 ETC

MADAM SPEAKER.—The question is:

"That Clause I, the long Title, the Preamble and the Enacting formula do stand part of the Bill."

The motion was adopted.

Clause 1, the long title, the preamble and the Enacting formula were added to the Bill.

Motion to pass.

SRI N HUTCHMASTHY GOWDA.—(Minister for Revenue.) I beg to move.—

"The the Registration (Karnataka Amendment) Bill, 1976, as passed by the Legislative Council, be passed,"

MADAM SPEAKER.—The question is:

"That the Registration (Karnataka Amendment) Bill, 1976, as passed by the Legislative Council, be passed."

The motion was adopted and the Bill was passed.

KARNATAKA STATE UNIVERSITIES BILL, 1976.

Motion to Consider

SRI M. MALLIKARJUNA SWAMY (Minister for Education).—I beg to move:

"That the Karnataka State Universities Bill, 1976 be taken into consideration"

MADAM SPEAKER.— Motion moved.

'That the Karnataka State Universities Bill, 1976 be taken into consideration"

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಧ್ಯಕ್ಷರೇ, ನಮ್ಮ ರಾಜ್ಯದ ವಿಶ್ವವಿದ್ಯಾನಿಲಯಗಳ ಆಡಳಿತಕ್ಕೆ ಸಂಬಂಧಪಟ್ಟಂಥ ಈ ಒಂದು ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ನಾವು ಈ ಸಭೆಯಲ್ಲಿ ತೆಗೆದುಕೊಂಡು ಬಂದಿದ್ದೇವೆ. ಈಗ ಆ ಸುಗ್ರೀವಾಜ್ಞೆಗೆ ಬದಲು ಈ ಒಂದು ಮಸೂದೆಯನ್ನು ಏನು ನಾವು ತಂದಿದ್ದೇವೋ ಇದರ ಪೂರ್ವ ಇತಿಹಾಸ ಸನ್ಮಾನ್ಯ ಸದಸ್ಯರೆಲ್ಲರಿಗೂ ಕೂಡ ತಿಳಿದಿದೆ. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಮೂರು ವಿಶ್ವವಿದ್ಯಾನಿಲಯಗಳಿಗೆ ಒಂದು ಏಕರೂಪವಾದ ಕಾನೂನನ್ನು ನಾವು ತೆಗೆದುಕೊಂಡು ಬಂದಂಥ ಇತಿಹಾಸದ ಪ್ರಕಾರ ಮತ್ತೆ ಈ ಸಭೆಯಲ್ಲಿ ಚರ್ಚೆಯಾಗಿ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಒಪ್ಪಿಸಲಾಯಿತು. ಆದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರ ವರದಿ ಪ್ರಕಾರ ಯಾವ ಒಂದು ಮಸೂದೆಯನ್ನು ತೆಗೆದುಕೊಂಡು ಬಂದಿದ್ದೇವೋ ಅದನ್ನು ಕಳೆದ ಅಧಿವೇಶನದಲ್ಲಿ ಕಾಲಾಭಾವದಿಂದ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಕೊನೇಪಕ್ಷ ಹೊಸ ಅಕಾಡೆಮಿಕ್ ಇಯರ್ ಪ್ರಾರಂಭವಾದ ದಿನದಿಂದಲೂ ಕೂಡ ಈ ಒಂದು ಮಸೂದೆ ಜಾರಿಗೆ ಬರಬೇಕು. ಮತ್ತೆ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಪಟ್ಟಂಥ ಎಲ್ಲಾ ಅಂಗಸಂಸ್ಥೆಗಳೂ ಕೂಡ ಅಸ್ತಿತ್ವಕ್ಕೆ ಬರಬೇಕೆಂಬ ದೃಷ್ಟಿಯಿಂದ ಈ ಒಂದು ಸುಗ್ರೀವಾಜ್ಞೆಯನ್ನು ನಾವು ಹೊರಡಿಸಿದ್ದೇವೆ. ಸಾಮಾನ್ಯವಾಗಿ ಜಾಯಿಂಟ್ ಸೆಲೆಕ್ಟ್ ಕಮಿಟಿಯಿಂದ ಏನೊಂದು ಮಸೂದೆ ಬಂದಿದೆಯೋ ಅದರಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ನಾವು ಮಾಡಿದ್ದೇವೆ. ಮೂರು ವಿಶ್ವವಿದ್ಯಾನಿಲಯಗಳ ಪ್ರತಿನಿಧಿಗಳು ಹಾಗೂ ವಿಶ್ವವಿದ್ಯಾನಿಲಯದ ಒಂದು ಅನುಭವ ಇವೆಲ್ಲವನ್ನೂ ಸಹ ಗಮನಕ್ಕೆ ತೆಗೆದುಕೊಂಡು ಈ ಒಂದು ಮಸೂದೆಯಲ್ಲಿ ಎಲ್ಲದಕ್ಕೂ ಬದಲಾವಣೆಗಳನ್ನು ನಾವು ಮಾಡಿದ್ದೇವೆ. ಅದಾದಮೇಲೆ ಕೇಂದ್ರಸರ್ಕಾರದ ವಿದ್ಯಾಸಚಿವರು ವಿಶ್ವವಿದ್ಯಾನಿಲಯದ ಅನುದಾನ ಮಂಡಲಿಯವರೂ ಕೂಡ ನನ್ನನ್ನು ಮತ್ತು ನಮ್ಮ ಅಧಿಕಾರಿಗಳನ್ನು ಚರ್ಚೆಗಾಗಿ ಕರೆದಿದ್ದರು. ಅಲ್ಲಿಯೂ ಕೂಡ ಇದರ ಬಗ್ಗೆ ಉಪಯುಕ್ತವಾದ ಚರ್ಚೆಯೂ ಸಹ ನಡೆಯಿತು.

ಚರ್ಚೆಯಾಗಿ ಕೆಲವು ಬದಲಾವಣೆಗಳನ್ನೂ ಕೂಡ ತೆಗೆದುಕೊಂಡು ಬಂದಿದ್ದೇವೆ. ಮತ್ತೆ ಈ ಒಂದು ಮಸೂದೆಯನ್ನು ಇವತ್ತಿನ ದಿವಸ ಈ ಸಭೆಯ ಮುಂದೆ ಒಪ್ಪಿಗೆಗಾಗಿ ಇಡುತ್ತಿದ್ದೇನೆ. ಈ ಒಂದು ಘಟ್ಟದಲ್ಲಿ ನಾನು ಮಸೂದೆಯಲ್ಲಿರತಕ್ಕಂಥ ಎಲ್ಲಾ ಕ್ಲಾಜ್‌ಗಳ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಈಗ ಪರ್ಯಾಲೋಚನೆಗೋಸ್ಕರ ಬಂದಂಥ ಸಂಧರ್ಭದಲ್ಲಿ ಕೆಲವು ಬದಲಾವಣೆಯಾಗಿರತಕ್ಕಂಥ ಪ್ರಾವಿಜೋಗಳು ಹೇಗೆ ಬಂತು ಎನ್ನುವುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅದರಲ್ಲೂ ಮುಖ್ಯವಾಗಿರತಕ್ಕಂಥ ೪-೫ ಬದಲಾವಣೆಗಳ ಬಗ್ಗೆ ಮಾತ್ರ ನಾನು ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದಾಗಿ ಕ್ಲಾಜ್ (೩) ಏನಿದೆ, ಅದರಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕಾದರೆ ಈ ಎರಡೂ ಸದನಗಳಲ್ಲಿ ಠರಾವು ಆಗಬೇಕು, ಅನಂತರ ನೋಟಿಫಿಕೇಷನ್ ಮುಖೇನ ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು ಎಂದು ಅದರಲ್ಲಿತ್ತು. ನಾವು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲೂ ಕೂಡ ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೆವು. ಕೇಂದ್ರ ಸರ್ಕಾರದ ವಿದ್ಯಾಸಚಿವರ ಮತ್ತು ಯು ಜಿ ಸಿ. ಸದಸ್ಯರ ಜೊತೆಗೆ ಚರ್ಚೆಯಾದ ಮೇಲೆ ಒಂದು ಹೊಸ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಒಂದು ಅಮೆಂಡ್‌ಮೆಂಟ್ ಬಿಲ್ಲನ್ನು ತೆಗೆದುಕೊಂಡು ಬರತಕ್ಕಂಥದ್ದು

ಮತ್ತೆ ಆದರ ಮೇಲೆ ಒಳ್ಳೆಯ ರೀತಿಯ ಚರ್ಚೆಯಾಗಿ ಹೊಸದಾಗಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡತಕ್ಕಂಥದ್ದು ಸೂಕ್ತವೆಂದು ಹೇಳಿ ಈ ಒಂದು ಬದಲಾವಣೆಯನ್ನು ಮಾಡಿದ್ದೇವೆ. ಮತ್ತೆ ಕ್ಲಾಜ್ (೪)ರಲ್ಲಿ ವಿಶ್ವವಿದ್ಯಾನಿಲಯಗಳು ಹಣ ಬೇಕಾದರೆ ಸಾಲ ತೆಗೆದುಕೊಳ್ಳುವುದಕ್ಕೆ ಒಂದು ಅವಕಾಶ ವನ್ನು ಮಾಡಿದ್ದೆವು. ಆದರೆ ವಿಶ್ವವಿದ್ಯಾನಿಲಯಕ್ಕೆ ತಮ್ಮದೇ ಒಂದು ರಿಸೋರ್ಸ್‌ಸ್ ಇಲ್ಲದೇ ಇರುವುದರಿಂದ ಸಾಲ ತೆಗೆದುಕೊಂಡರೆ ಅವು ವಾಪಸ್ಸು ಕೊಡುವುದಕ್ಕೆ ಕಷ್ಟವಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ಮತ್ತೆ ಸಾಮಾನ್ಯವಾಗಿ ಅವುಗಳ ವೆಚ್ಚವನ್ನೂ ಸರ್ಕಾರದವರೇ ಪೂರ್ಣವಾಗಿ ನಿರ್ವಹಿಸುತ್ತಾ ಇರುವುದರಿಂದ ಅವರಿಗೆ ಕೊಟ್ಟಿರತಕ್ಕಂಥ ಬಾರೋಯಿಂಗ್ ಪವರ್ಸ್ ಅನಾವಶ್ಯಕವೆಂದು ಹೇಳಿ ತೀರ್ಮಾನ ತೆಗೆದು ಕೊಂಡಿದ್ದೇವೆ.

ಮತ್ತೆ ಕ್ಲಾಜ್(೪)ರಲ್ಲಿ ಕೊಟ್ಟಿರತಕ್ಕಂಥ ಬಾರೊಯಿಂಗ್ ಪವರ್ಸ್‌ನ್ನು ಡಿಲೀಟ್ ಮಾಡಿದ್ದೇವೆ. ಮತ್ತೆ ಸೆಕ್ಷನ್ ೧೦(೨)ರಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ವೈಸ್ ಚಾನ್ಸಲರ್ ಹುದ್ದೆ ಖಾಲಿ ಬಂದಂಥ ಸಂದರ್ಭದಲ್ಲಿ ಯಾವ ಕ್ರಮವನ್ನು ಅನುಸರಿಸಬೇಕು ಎನ್ನತಕ್ಕಂಥದ್ದಕ್ಕೆ ಒಂದು ಕಮಿಟಿ ಮಾಡಿದ್ದೆವು. ಅದು ೩ ಜನರ ಪೇನಲ್ ಇರಬೇಕೆಂದು ಮಾಡಿದ್ದೆವು. ಆ ಮೇಲೆ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಒಂದು ತೀರ್ಮಾನ ವನ್ನು ತೆಗೆದುಕೊಂಡು ಆದರಲ್ಲಿ ಸರ್ಕಾರದ ಒಬ್ಬ ಪ್ರತಿನಿಧಿಯೂ ಕೂಡ ಇರತಕ್ಕಂಥದ್ದು ಸೂಕ್ತವೆಂದು ಸೇರಿಸಿದ್ದೇವೆ. ವೈಸ್ ಚಾನ್ಸಲರ್ ನಿರ್ವಹಿಸತಕ್ಕಂಥ ಕಾರ್ಯ ಬಹಳ ಜವಾಬ್ದಾರಿಯುತವಾದದ್ದು ಎಂದು ಗಮನದಲ್ಲಿಟ್ಟುಕೊಂಡು, ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರದಿಂದ ನೇಮಕವಾಗಿರುವ ಒಬ್ಬ ಸದಸ್ಯರೂ ಇರಬೇಕೆಂದು ಹೇಳಿ ಈ ಬದಲಾವಣೆಯನ್ನು ಮಾಡಿದ್ದೇವೆ ಮತ್ತೆ ವೈಸ್ ಚಾನ್ಸಲರ್‌ರವರು ಎರಡು ಟರ್ಮ್‌ಗಳಿಗಿಂತಲೂ ಹೆಚ್ಚಾಗಿ ಇರಬಹುದೆಂದು ಮಾಡಿದ್ದೆವು. ಆದರೆ ಈಗ ಎರಡು ಸಾರಿಗಿಂತಲೂ ಹೆಚ್ಚಾಗಿ ಇರಕೂಡದೆಂದು ಬದಲಾವಣೆಯನ್ನು ಮಾಡಿದ್ದೇವೆ. ಮತ್ತೆ ಸೆಕ್ಷನ್ ೩೩ ರಿಂದ ೪೦ನೇ ಸೆಕ್ಷನ್ ವರೆಗೆ ೫ನೇ ಚಾಪ್ಟರ್ ಏನಿದೆ ಇದು ಎಲ್ಲಿವೂ ಕೂಡ ಸ್ಟ್ಯಾಚ್ಯುಟರಿ ಆರ್ಡರ್ಸ್ ರೆಗ್ಯುಲೇಷನ್ ರೂಲ್ಸ್ ಮಾಡತಕ್ಕಂಥದ್ದು, ಇವೆಲ್ಲವನ್ನೂ ಚಾನ್ಸಲರ್ ಸ್ಟೇಟ್ ಗೌವರ್ನ್‌ಮೆಂಟ್ ಮುಖೇನ ಇದನ್ನು ಸಬ್‌ಮಿಟ್ ಮಾಡಬೇಕೆಂದು ಹೇಳಿದ್ದೆವೆ. ಅದಕ್ಕೆ ಕಾರಣವಾದರೂ ಇಷ್ಟೆ ಒಂದು ಯೂನಿಫಾರ್ಮಿಟಿ ಇರಬೇಕೆಂದು ಹೇಳಿ ಮಾಡಿರತಕ್ಕಂಥದ್ದು. ನಮ್ಮ ರಾಜ್ಯದಲ್ಲಿರತಕ್ಕಂಥ ೩ ವಿಶ್ವವಿದ್ಯಾನಿಲಯಗಳಿಗೂ ಒಂದೇ ಯೂನಿ ಫಾರ್ಮಿಟಿ ಸಾಧಿಸತಕ್ಕಂಥ ದೃಷ್ಟಿಯಿಂದ ಇವನ್ನು ಬದಲಾವಣೆ ಮಾಡಿದ್ದೇವೆ ಇದರ ಜೊತೆಗೆ ವಿಶ್ವವಿದ್ಯಾ ನಿಲಯಗಳಿಗೆ ನಾವು ಕೊಡತಕ್ಕಂಥ ಬ್ಲಾಕ್ ಗ್ರಾಂಟ್ಸ್, ಇದರ ಜೊತೆಗೆ ಅಭಿವೃದ್ಧಿಗೆ ಸಂಭಂದಪಟ್ಟಂತೆ ಗ್ರಾಂಟ್ಸ್ ಏನು ಕೊಡುತ್ತೇವೆ ಅವುಗಳನ್ನೂ ಕೂಡ ಕೊಟ್ಟಿದ್ದೇವೆ. ಆಗ ಇದೆಲ್ಲಾ ಸರಿಹೋಗುತ್ತದೆಂದು ಹೇಳಿ ಇದನ್ನೂ ಬದಲಾವಣೆ ಮಾಡಿ ತೆಗೆದುಕೊಂಡು ಬಂದಿದ್ದೇವೆ. ಮತ್ತೆ ವಿಶ್ವವಿದ್ಯಾನಿಲಯದಲ್ಲಿ ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಯಬೇಕು ಎನ್ನತಕ್ಕಂಥ ದೃಷ್ಟಿಯಿಂದ ಮತ್ತೆ ಯಾವ ಒಂದು ಉದ್ದೇಶ ಕ್ಕೋಸ್ಕರ ವಿಶ್ವವಿದ್ಯಾನಿಲಯಗಳು ಸ್ಥಾಪಿಸಲ್ಪಟ್ಟವು ಹಾಗೂ ಸಮಾಜದ ಅವಶ್ಯಕತೆಗಳನ್ನು ಪೂರ್ಣಗೊಳಿ ಸಬೇಕಾದರೆ ವಿಶ್ವವಿದ್ಯಾನಿಲಯಗಳ ಪಾತ್ರವೇನಿರಬೇಕು ಎಂಬ ಬಗ್ಗೆ ದಿವಂಗತ ಪಂಡಿತ ಜವಾಹರ್‌ಲಾಲ್ ನೆಹರೂರವರು ಅಲಹಾಬಾದ್ ಯೂನಿವರ್ಸಿಟಿಯ ಒಂದು ಘಟಕೋತ್ಸವದ ಸಂದರ್ಭದಲ್ಲಿ ಪದವೀದರ ರನ್ನುದ್ದೇಶಿಸಿ ಈ ರೀತಿ ಹೇಳಿದ್ದಾರೆ.—

> "The University stands for humanity, for tolerence, for reasons, for the adventure of ideas and search for truth. It stands for onward march of human race, towards vision. If the University discharges its duties adequately then it is a wealth to the nation and the people."

ಎಂದು ಹೇಳಿದ್ದಾರೆ. ಅವರು ವಿಶ್ವವಿದ್ಯಾನಿಲಯಗಳ ಜವಾಬ್ದಾರಿ ಏನು ಅವರ ಕರ್ತವ್ಯವು ಏನು ಎಂಬು ದನ್ನು ಹೇಳಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಪಡೆಯತಕ್ಕಂಥದ್ದು ಬಹಳ ಮುಖ್ಯ ಅದನ್ನು ಒದಗಿಸತಕ್ಕಂಥದ್ದು ವಿಶ್ವವಿದ್ಯಾನಿಲಯಗಳ ಗುರುತರವಾದಂಥ ಜವಾಬ್ದಾರಿ. ಇದರ ಜೊತೆಗೆ ರಾಷ್ಟ್ರಮ ಟ್ಟದಲ್ಲಿ ಸಮಾಜದ ಬೆಳವಣಿಗೆ ಮತ್ತೆ ಅಭಿವೃದ್ಧಿ ಮಾಡತಕ್ಕಂಥದ್ದು ಕೂಡ ವಿಶ್ವವಿದ್ಯಾನಿಲಯದ ಜವಾ ಬ್ದಾರಿ. ವಿಶ್ವವಿದ್ಯಾನಿಲಯದಲ್ಲಿ ಪ್ರಧ್ಯಾಪಕರಾಗಿರತಕ್ಕಂಥವರು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿರತಕ್ಕಂಥ

ಎಲ್ಲಾ ಉಪಾಧ್ಯಾಯರುಗಳೇನಿದ್ದಾರೆ ಅವರು ಒಳ್ಳೆಯ ರೀತಿಯಲ್ಲಿ ಬೇರೆಯವರಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಡಬೇಕು. ಹಾಗೂ ವಿದ್ಯಾರ್ಥಿಗಳು ಒಂದು ಒಳ್ಳೆಯ ರೀತಿಯಲ್ಲಿ ನಡೆಯುವಂತೆ ಮಾರ್ಗದರ್ಶನ ಹಾಕಿಕೊಟ್ಟು, ಒಂದು ಒಳ್ಳೆಯ ಆದರ್ಶಗಳನ್ನು ಅನುಸರಿಸುವಂತೆ ಮಾಡತಕ್ಕಂಥದ್ದು ಅಲ್ಲಿನ ಪ್ರಾಧ್ಯಾಪಕರುಗಳ ಕರ್ತವ್ಯ.

ಇದರ ಜೊತೆಗೆ ಅಲ್ಲಿ ಪಾಠ ಬೋಧಿಸುವುದೇ ಅಲ್ಲ ಅನುಸಂಧಾನ ಕೂಡ ಬಹಳ ಮುಖ್ಯ. ಇವೆಲ್ಲಾ ವಿಶ್ವವಿದ್ಯಾನಿಲಯದ ಮೇಲೆ ಬಿದ್ದಿರತಕ್ಕ ಜವಾಬ್ದಾರಿ ಈಗ ಕ್ಲಾಸ್ ೭ರಲ್ಲಿ ಹೇಳಿರತಕ್ಕ ಬಗ್ಗೆ ಮಾನ್ಯ ಸಭೆಯ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಟೀಚಿಂಗ್ ಮತ್ತು ರಿಸರ್ಚ್‌ಗೆ ಸಂಬಂಧಪಟ್ಟಂತ, ಈ ಒಂದು ಕ್ಲಾಸ್ ಇದೆ. ಜ್ಞಾನ ಸಂಪತ್ತನ್ನು ಹೆಚ್ಚು ಮಾಡಿಕೊಂಡು ಆ ಜ್ಞಾನ ಸಂಪತ್ತಿನಿಂದ ಸ್ವಲ್ಪ ಮಟ್ಟಿಗೆ ನಾವು ನಮ್ಮ ಪದ್ಧತಿಯನ್ನು ನೋಡಿಕೊಂಡು ಹೋಗಬಹುದು, ಅನುಸಂಧಾನ ಮುಖಾಂತರ ಹೊಸ ಜ್ಞಾನವನ್ನು ಸಂಪಾದನೆ ಮಾಡಬೇಕು, ಸಮಾಜದ ಬೆಳವಣಿಗೆಗೆ ಅದರಿಂದ ಒಳ್ಳೆಯ ರೀತಿಯಲ್ಲಿ ಸಹಕಾರವಾಗಬೇಕು ಎನ್ನುವ ದೃಷ್ಟಿಯಿಂದ ಈ ರಿಸರ್ಚ್‌ಗೆ ಹೆಚ್ಚಿಗೆ ಅವಕಾಶವನ್ನು ಮಾಡಲಾಗಿದೆ, ಇದರ ಜೊತೆಗೆ ಒಂದು ಸೆಲ್ಫ್ ಎಜುಕೇಷನ್ ಎನ್ನತಕ್ಕದ್ದು ಕೂಡ ವಿದ್ಯಾರ್ಥಿಗಳಿಗೆ ಬರಬೇಕು ಎನ್ನುವ ದೃಷ್ಟಿ ಇದರಲ್ಲಿ ಅಡಕವಾಗಿದೆ. ವಿಶ್ವವಿದ್ಯಾನಿಲಯ ಎಂದರೆ ಬರೀ ತರಗತಿಗಳು ಅಥವಾ ಅಲ್ಲಿ ಇರತಕ್ಕ ಪ್ರಯೋಗಶಾಲೆಯೇ ಅಲ್ಲ ಅದರ ಒಂದು ಸುಪ್ರೀಂ ಪರಪಸ್ ಏನು ಇದೆ ಎಂದರೆ ಜ್ಞಾನಾರ್ಜನೆ ಮಾಡತಕ್ಕದ್ದು ಅದನ್ನು ಪ್ರಸಾರ ಮಾಡತಕ್ಕದ್ದು ಎನ್ನತಕ್ಕದ್ದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ವಿದ್ಯಾರ್ಥಿಗಳ ಸರ್ವತೋಮುಖವಾದ ಒಂದು ಪ್ರಗತಿಯೂ ಕೂಡ ಇದರಲ್ಲಿ ಅಡಕವಾಗಿದೆ. ವಿಶ್ವವಿದ್ಯಾನಿಲಯಗಳು ತಮ್ಮ ಮೇಲೆ ಬಿದ್ದಿರತಕ್ಕ ಈ ಒಂದು ಜವಾಬ್ದಾರಿಯನ್ನು ಮರೆತರೆ ಸಮಾಜಕ್ಕೆ ಇದರಿಂದ ಬಹಳ ಹಾನಿಯಾಗುತ್ತದೆ ಮತ್ತೆ ಸಮಾಜದ ಅಭಿವೃದ್ಧಿಗೆ ಹಾನಿ ತಟ್ಟುತ್ತದೆ. ಇವೊತ್ತಿನ ದಿವಸ ಈ ಒಂದು ಮಸೂದೆ ಏನಿದೆ, ನಮ್ಮ ಕರ್ನಾಟಕದಲ್ಲಿ ಈಗಾಗಲೇ ಸ್ಥಾಪಿಸಲ್ಪಟ್ಟಿರುವ ಮೂರು ವಿಶ್ವವಿದ್ಯಾನಿಲಯಗಳು ಏನು ಇವೆ ಅವು ಒಳ್ಳೆಯ ರೀತಿಯಲ್ಲಿ ಮುಂದೆ ಕೆಲಸ ಮಾಡಬೇಕು, ಅವರ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ಹೇಳುತ್ತೇನೆ. ಈ ಒಂದು ಯೂನಿಫಾರಂ ಬಿಲ್ಲನ್ನು ಈ ವಿಶ್ವವಿದ್ಯಾನಿಲಯಗಳ ಒಂದು ಗೌವರ್ನೆನ್ಸ್‌ಗೋಸ್ಕರ ತಂದಿರತಕ್ಕದ್ದು ಆಗಿಗೆ ಅಷ್ಟರಿಂದ ಘನ ಹೊಂದಿದಂತಹ ಈ ಸಭೆಯ ಮಾನ್ಯಸದಸ್ಯರು ಇದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು ಮತ್ತು ಈ ಒಂದು ಮಸೂದೆಗೆ ಒಪ್ಪಿಗೆ ಕೊಡಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

(Mr. Deputy Speaker in the Chair.)

†ಶ್ರೀ ಎಂ. ಎಸ್. ಕೃಷ್ಣನ್(ಮಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷರೆ, ಅತಿಮುಖ್ಯವಾದ ಒಂದು ಮಸೂದೆಯನ್ನು ಮಾನ್ಯ ವಿದ್ಯಾ ಸಚಿವರು ಈ ದಿವಸ ನಮ್ಮ ಮುಂದೆ ಇಟ್ಟಿದ್ದಾರೆ. ಈ ಒಂದು ಮಸೂದೆ ಮಾನ್ಯ ಸಚಿವರೆಲ್ಲ ಹೇಳಿದ ಹಾಗೆ ೧೯೭೩ರಲ್ಲಿ ಇದೇ ಸದನದಲ್ಲಿ ಮಂಡಿಸಿದರು ಎಂದು ಕಾಣುತ್ತದೆ, ಆಗಲೂ ಈ ಮಸೂದೆ ಬಗ್ಗೆ ಅನೇಕ ಚರ್ಚೆಗಳಾದುದರಿಂದ ಅದನ್ನು ಮತ್ತೆ ಪುನಃ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕೆಂದು ಹೇಳಿ ಕಳುಹಿಸಿ ಅವರು ಸುಮಾರು ಒಂದು ವರ್ಷ ಕಾಲ ತೆಗೆದುಕೊಂಡು ನಂತರ ೧೯೭೪ನೇ ಇಸವಿಯಲ್ಲಿ ಅವರು ವರದಿ ಕೊಟ್ಟಿದ್ದಾರೆ. ಈಗ ಅದು ತಮ್ಮ ಮುಂದಿದೆ. ನಾನು ಯೋಚನೆ ಮಾಡುವುದಾದರೂ ಇಷ್ಟೇ, ಈ ತರಹ ಒಂದು ಮಸೂದೆ ತೆಗೆದುಕೊಂಡು ಬಂದಾಗ ಅದರಲ್ಲೂ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಸಹ ಪರಿಶೀಲನೆ ಮಾಡಿದ್ದಾರೆ ಮತ್ತೆ ಈ ಸಮಿತಿಯವರು ಪರಿಶೀಲನೆ ಮಾಡುವಾಗ ಎಲ್ಲಾ ಅಭಿಪ್ರಾಯಗಳನ್ನು ಸಹ ತೆಗೆದುಕೊಂಡಿರುತ್ತಾರೆ, ಮತ್ತೆ ಅವರ ಅನುಭವದ ಆಧಾರದ ಮೇಲೆ ಸರಿಯಾದಂತ ಮತ್ತು ಈಗಿನ ಪರಿಸ್ಥಿತಿಗನುಗುಣವಾದಂತೆ ವಿದ್ಯಾಭ್ಯಾಸ ಪದ್ಧತಿ ಯೂನಿವರ್ಸಿಟಿ ಮಟ್ಟದಲ್ಲಿ ಯಾವರೀತಿ ಇರಬೇಕು ಅನ್ನತಕ್ಕದನ್ನು ಗಣನೆಗೆ ತೆಗೆದುಕೊಂಡು ಅದರ ಆಧಾರದ ಮೇಲೆ ಈ ಮಸೂದೆಯನ್ನು ತೆಗೆದುಕೊಂಡು ಬರುತ್ತಾರೆ ಎಂಬುದನ್ನು ನಂಬಿಕೊಂಡಿದ್ದೆ. ಆದರೆ ಈ ದಿವಸ ಈ ಒಂದು ಮಸೂದೆ ನೋಡಿದ ಮೇಲೆ ನನಗೆ ಅನಿಸುವುದು ಇಷ್ಟೇ, ಇದರಲ್ಲಿ ಇನ್ನೂ ಅನೇಕ ಮೂಲಭೂತವಾದ ನ್ಯೂನತೆಗಳು ಇವೆ ಎಂದು ನನ್ನ ಅಭಿಪ್ರಾಯ. ಈಗ ನನ್ನ ಪಕ್ಷದ ಸದಸ್ಯರು ಯಾರೇ ಆಗಲಿ ಅಥವಾ ನಾನಾಗಲಿ ಆ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಇರಲಿಲ್ಲವಾದ್ದರಿಂದ ನಾವು ನಮ್ಮ ಅಭಿಪ್ರಾಯವನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಈ ಮಸೂದೆ ಬಹಳ ಮುಖ್ಯವಾದುದು, ಏಕೆಂದರೆ ಈ ಯೂನಿವರ್ಸಿಟಿ ಮಟ್ಟದಲ್ಲಿ ವಿದ್ಯಾಭ್ಯಾಸ ಕ್ರಮ ಯಾವರೀತಿ ಇರಬೇಕು

ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ, ಅಲ್ಲದೇ ಅದಕ್ಕನುಗುಣವಾಗಿ ಯೂನಿವರ್ಸಿಟಿ ರಚನೆಯಾಗಬೇಕಾಗುತ್ತದೆ. ಈ ಮಸೂದೆಯಲ್ಲಿ ಸಿಂಡಿಕೇಟ್‌ನಲ್ಲಿ ಎಷ್ಟು ಜನರು ಇರಬೇಕು, ಸೆನೆಟ್‌ಗೆ ಎಷ್ಟು ಜನರು ಇರಬೇಕು ಅಷ್ಟನ್ನು ಮಾತ್ರ ಈಹೊತ್ತಿನ ದಿವಸ ಹೇಳಿ ಅವರ ಬಗ್ಗೆ ಒಂದು ಟೀಕೆಯನ್ನು ಅಥವಾ ಒಂದು ಸಲಹೆಯನ್ನು ಕೊಟ್ಟರೆ ಸಮಂಜಸವಾಗಲಾರದು. ಇವೊತ್ತಿನ ದಿವಸ ಈ ಸಿಂಡಿಕೇಟ್ ಆಗಲಿ, ಸೆನೆಟ್ ಆಗಲಿ, ಅದು ಯಾವ ಆಧಾರದ ಮೇಲೆ ಇರಬೇಕು ಎಂದರೆ ನಮ್ಮ ದೇಶದ ವಿದ್ಯಾಭ್ಯಾಸ ಪದ್ಧತಿ ಆಧಾರದ ಮೇಲೆ ಒಂದು ಅಂಗರಚನೆ ಇರಬೇಕು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆ ರೀತಿ ವಿದ್ಯಾಭ್ಯಾಸ ಪದ್ಧತಿ ಬಗ್ಗೆ ಯೋಚನೆ ಮಾಡಿದರೆ ತಮಗೆಲ್ಲ ಗೊತ್ತಿರುವ ಹಾಗೆ ಮಾನ್ಯ ವಿದ್ಯಾ ಸಚಿವರು ಬಹಳ ಓದಿ ತಿಳಿದುಕೊಂಡಿರುವವರು, ಆದ್ದರಿಂದ ತಮಗೆ ಗೊತ್ತಿರುವ ಹಾಗೆ ಒಂದು ಕಾಲಕ್ಕೆ ನಮ್ಮ ದೇಶದಲ್ಲಿ ನಮಗೆ ಸ್ವಾತಂತ್ರ ಬರುವುದಕ್ಕೆ ಮುಂಚೆ ಹೇಗೆ ಇತ್ತು ಎಂದರೆ ಬ್ರಿಟಿಷ್ ಸಾಮ್ರಾಜ್ಯವಾದಿಗಳು ತಮ್ಮ ಹಿಡಿತದಲ್ಲೇ ಇಟ್ಟುಕೊಳ್ಳಲು ಎಷ್ಟು ಜನರಿಗೆ ವಿದ್ಯೆ ದೊರೆತರೆ ಅನುಕೂಲವಾಗುತ್ತದೆ ಅದಕ್ಕನುಗುಣವಾಗಿ ಅವರಿಗೆ ಬೇಕಾಗತಕ್ಕ ವಿದ್ಯಾಭ್ಯಾಸ ಕ್ರಮ ಇಟ್ಟುಕೊಂಡಿದ್ದರು. ಅಷ್ಟು ಮಾತ್ರವಲ್ಲ ಇವರು ಹೇಳಿದಂತಹ ಅಭಿಪ್ರಾಯಕ್ಕೆ ವಿರೋಧವಾಗಿ ಮಾತನಾಡುವುದಕ್ಕೆ ಹೋಗುವಂತಿರಲಿಲ್ಲ. ಹೇಳಿದಂತೆ ಕೇಳಬೇಕಾಗಿ ಇತ್ತು. ಅಲ್ಲದೇ ಅವರು ಬರೆದಿರತಕ್ಕಂತಹ ಚರಿತ್ರೆಯನ್ನು ಓದಿದ್ದೇವೆ. ಆ ಚರಿತ್ರೆಯಲ್ಲಿರತಕ್ಕ ಮುಕ್ಕಾಲು ಭಾಗ ವಿಷಯ ತೆಗೆದುಕೊಂಡರೆ ಇನ್ನು ಸಾಮ್ರಾಜ್ಯಶಾಲಿಗಳು ಇರಬೇಕು ಎನ್ನುವ ಚರಿತ್ರೆಯನ್ನು ಇಂಗ್ಲಿಷ್ ಲೇಖಕರು ಬರೆದಿದ್ದಾರೆ. ನಾನು ಅದರ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ, ಅದು ಆ ಕಾಲಕ್ಕೆ ಹೋಯಿತು. ನಾವು ಸ್ವಾತಂತ್ರ ಬಂದಮೇಲೆ ಯೋಚನೆ ಮಾಡಿದ್ದು 'ಏನು' ಅದರಲ್ಲೂ ನಮ್ಮ ದೇಶದಲ್ಲಿ ವಿದ್ಯಾತಜ್ಞರು ಇದ್ದಾರೆ ಡಾ. ಸರ್ವಪಲ್ಲಿ ರಾಧಕೃಷ್ಣ ಅದೇ ರೀತಿ ನಮ್ಮ ನೂರಲ್ ಹಸನ್ ಅವರು ಹೇಳುವುದು ನಮ್ಮ ದೇಶಕ್ಕೆ ಒಂದು ವಿದ್ಯಾಭ್ಯಾಸ ಪದ್ಧತಿ ಯಾವರೀತಿಯಲ್ಲಿ ಇರಬೇಕು ಎಂದರೆ ಮುಖ್ಯವಾಗಿ ಸಾಮ್ರಾಜ್ಯಶಾಹಿ ಅವಶೇಷಗಳು ಯಾವುದರಲ್ಲೂ ಇರಬಾರದು, ಅಂಗರಚನೆಯಲ್ಲೂ ಇರಬಾರದು ಎಂದು ಹೇಳಿದ್ದಾರೆ. ಒಂದು ಯೂನಿವರ್ಸಿಟಿ ಮಟ್ಟದಲ್ಲಿ ಯಾವ ರೀತಿ ಇರಬೇಕು ಎಂಬ ಪ್ರಶ್ನೆ ಈ ದಿನ ಬಂದಾಗ ಅದು ಒಂದು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆದುಕೊಳ್ಳಬೇಕು. ವಿಶ್ವವಿದ್ಯಾನಿಲಯಗಳು ಸಾಧ್ಯವಾದಷ್ಟು ಮಟ್ಟಿಗೆ ಸರ್ಕಾರದ ನಿಯಂತ್ರಣದಲ್ಲಿರಕೂಡದು. ವಿಶ್ವವಿದ್ಯಾನಿಲಯಗಳು ಸರ್ಕಾರದ ನಿಯಂತ್ರಣವಿಲ್ಲದೆ ಸ್ವಾಯತ್ತತೆಯಿಂದ ನಡೆದುಕೊಂಡು ಹೋಗುವಂಥ ವ್ಯವಸ್ಥೆ ಇರಬೇಕು ಮತ್ತು ವಿದ್ಯಾಭ್ಯಾಸ ಕ್ರಮದಲ್ಲಿ ಹೊಸ ಹೊಸ ವಿಚಾರಧಾರೆಗಳನ್ನು ಮಕ್ಕಳಿಗೆ ಹೇಳಿಕೊಡಬೇಕೆಂದೂ ಅವರು ಹೇಳಿದ್ದಾರೆ, ಇದರಲ್ಲಿ ಇನ್ನೂ ಬಹಳ ಮುಖ್ಯವಾದ ವಿಚಾರವೇನೆಂದರೆ, ಸ್ವಾತಂತ್ರ್ಯ ಬಂದನಂತರ, ನಮ್ಮ ದೇಶದ ವಿದ್ಯಾಭ್ಯಾಸದ ಕ್ರಮ ಯಾವರೀತಿ ಇರಬೇಕೆಂಬುದು ವಿದ್ಯಾಭ್ಯಾಸದ ಪದ್ಧತಿ ಕೇವಲ ಕ್ಲಾರ್ಕ್‌ಗಳನ್ನು ತಯಾರು ಮಾಡತಕ್ಕ ಪದ್ಧತಿಯಾಗಿರಬಾರದು. ದೇಶ ಮುಂದುವರಿಯಬೇಕಾದರೆ, ಕೈಗಾರಿಕೆ ಮುಂದುವರಿಯಬೇಕು, ಕೃಷಿ ವಿಧಾನ ಮುಂದುವರಿಯಬೇಕು. ಹೀಗೆ ಕೃಷಿ ಮತ್ತು ಕೈಗಾರಿಕೆಗಳು ಮುಂದುವರಿಯಬೇಕಾದರೆ, ಅದಕ್ಕೆ ಅನುಗುಣವಾದಂಥ ವಿದ್ಯಾಭ್ಯಾಸದ ಪದ್ಧತಿ ನಮ್ಮ ದೇಶದ ಮಕ್ಕಳಿಗೆ ಇರಬೇಕೆಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದ್ದಾರೆ. ಆದುದರಿಂದ, ಉತ್ಪನ್ನ ಮಾಡುವಂಥ ಕಾರ್ಯವಿಧಾನಗಳಿಗನುಗುಣವಾಗಿ ವಿದ್ಯಾಭ್ಯಾಸ ಮತ್ತು ಅದರ ಅಂಗರಚನೆ ಇರಬೇಕೆಂದು ಶಿಕ್ಷಣ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

3-00 P. M.

ಇನ್ನು ಶಿಕ್ಷಣ ಧ್ಯೇಯದ ಬಗ್ಗೆ ಹೇಳಬೇಕೆಂದರೆ ಇದರ ಬಗ್ಗೆ ಶಿಕ್ಷಣ ಆಯೋಗದವರು ಕೆಲವು ಶಿಫಾರಸುಗಳನ್ನು ಮಾಡಿದ್ದಾರೆ ಅವುಗಳು ಯಾವುವೆಂದರೆ :—

> To seek and cultivate new knowledge, to engage vigorously and fearlessly in the pursuit of truth and intrepret old knowledge and values in the light of new needs and discoveries,
>
> To provide the right kind of leadership in all walks of life to identify gifted youth and help them develop their potential to the full by cultivating physical fitness,

developing the powers to the mind and cultivating right interests, attitudes and moral and intellectual values;
To provide society with compe ent men and women trained in agriculture, arts, medicine, science, and technology and various other professions, who will also be cultivated individuals imbued with a issue sence of social purpose.

To strive to promote equality and social' justice and to reduce the social and cultural differences through differences through diffusion of education and
To foster in the teachers and students and through them in society generally, the attitudes and values needed for developing the good life in individuals and society.

ಮುಖ್ಯವಾಗಿ ಇಷ್ಟು ಗುರಿಯನ್ನು ಇಟ್ಟುಕೊಳ್ಳಬೇಕೆಂದು ವಿಶ್ವವಿದ್ಯಾನಿಲಯದ ಶಿಕ್ಷಣ ಆಯೋಗದವರು ಶಿಫಾರಸು ಮಾಡಿದ್ದಾರೆ. ಅದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಇದರಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶಗಳಿವೆ. ಮೊದಲನೆಯದಾಗಿ ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಪದ್ಧತಿ ಪ್ರಜಾಪ್ರಭುತ್ವ ಪದ್ಧತಿ ರೀತಿಯಲ್ಲಿರಬೇಕೆಂದು ಸ್ಪಷ್ಟವಾಗುತ್ತದೆ. ಪ್ರಜಾಪ್ರಭುತ್ವ ಪದ್ಧತಿ ರೀತಿಯಲ್ಲಿರಬೇಕು ಎಂದರೆ ಅದರಲ್ಲಿ ಆದಷ್ಟು ಮಟ್ಟಿಗೆ ಅಧಿಕಾರಿಗಳ ಹಿಡಿತ, ಮತ್ತು ಸರ್ಕಾರದ ಹಿಡಿತ ಕಡಮೆ ಇರಬೇಕು ಆದುದರಿಂದ ಇದರಲ್ಲಿ ಯಾರು ಶಿಕ್ಷಣ ಕ್ಷೇತ್ರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ, ಯಾರು ವಿಶ್ವವಿದ್ಯಾನಿಲಯಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ, ಅಂಥವರಿಗೆ ಹೆಚ್ಚು ಅವಕಾಶ ಕೊಡಬೇಕೆಂದು ಹೇಳುತ್ತೇನೆ. ಆದರೆ ಈಗ ತಂದಿರುವ ಮಸೂದೆಯಲ್ಲಿ. ಹಾಗೆ ಅವರೆಲ್ಲಾ ಪಾಲ್ಗೊಳ್ಳುವ ಅಂಶ ಬಹಳ ಕಡಮೆ ಇದೆ. ಇದರಲ್ಲಿ ಶಿಕ್ಷಣ ಇಲಾಖೆಯ ನಿರ್ದೇಶಕರು... ...ಹೀಗೆ ನಿರ್ದೇಶಕರೇ ಇರಬೇಕೆಂದಲ್ಲ. ಅವರೂ ಇರಬೇಕು, ನಿಜ. ಆದರೆ, ಅದಕ್ಕಿಂತಲೂ ಮುಖ್ಯವಾಗಿ, ಚುನಾಯಿತ ಪ್ರತಿನಿಧಿಗಳು ಇರಬೇಕಾದ ಅಂಶವನ್ನು ಶಿಕ್ಷಣ ತಜ್ಞರು ಹೆಚ್ಚು ಒತ್ತಾಯ ಮಾಡಿದ್ದಾರೆ. ಸೆನೆಟ್ ಆಗಲೀ, ಸಿಂಡಿಕೇಟ್ ಆಗಲಿ— ಅಲ್ಲಿ ಚುನಾಯಿತ ಪ್ರತಿನಿಧಿಗಳು ಇರಬೇಕೆಂಬುದು ಅವರ ಅಭಿಪ್ರಾಯ. ಹೀಗೆ ಚುನಾಯಿತರಾಗುವ ಪ್ರತಿನಿಧಿಗಳಲ್ಲಿ, ಕಾಲೇಜಿನ ಉಪನ್ಯಾಸಕರೂ, ಪ್ರಾಧ್ಯಾಪಕರೂ, ಶಾಲಾ ಮಾಸ್ತರುಗಳೂ, ವಿದ್ಯಾರ್ಥಿಗಳೂ ಮತ್ತು ಬೋಧಕೇತರರೂ ಇರಬೇಕು. ಇದನ್ನು ಮಾನ್ಯ ಮಂತ್ರಿಗಳು ಮರೆತಿದ್ದಾರೆ ಅವರು ಇದನ್ನೇನೂ ತಿಳಿಯದೇ ಮರೆತಿಲ್ಲ, ತಿಳಿದೂ ತಿಳಿದೂ ಮರೆತಿದ್ದಾರೆ. ಅಷ್ಟೇ ಅಲ್ಲದೆ, ಹೊರಗಡೆ, ಸಾರ್ವಜನಿಕ ಕ್ಷೇತ್ರದಲ್ಲಿ ಯಾರು ಯಾರು ಈ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟವರಿದ್ದಾರೆ, ಅವರ ಪ್ರತಿನಿಧಿಗಳೂ ಇರಬೇಕೆಂಬುದೂ ನನ್ನ ಸ್ಪಷ್ಟ ಅಭಿಪ್ರಾಯ. ಈ ಅಭಿಪ್ರಾಯ ಕೆಲವರಿಗೆ ಇವತ್ತಿನ ದಿವಸ ಹಿಡಿಸಲಾರದು. ಹೊರಗಿನ ಪ್ರತಿನಿಧಿಗಳು ಯಾರು ಯಾರು ಎನ್ನುವ ಪ್ರಶ್ನೆ ಬಂದಾಗ ನನ್ನ ಅಭಿಪ್ರಾಯದಲ್ಲಿ ಬರೀ ವಿಧಾನ ಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರೇ ಅಲ್ಲ. ಇವರೆಲ್ಲಾ ಜನತಾ ಪ್ರತಿನಿಧಿಗಳು. ಆದರೆ, ರೈತರ ಸಮಸ್ಯೆಗಳನ್ನು ತಿಳಿದುಕೊಂಡಂಥ ಮತ್ತು ಅವರ ಸಂಘಟನೆಗೆ ಹೋರಾಡುವಂಥ ರೈತ ಮುಖಂಡರು, ಹಾಗೂ ನಗರಗಳಲ್ಲಿ ಕಾರ್ಮಿಕರ ವಿಷಯವನ್ನು ತಿಳಿದುಕೊಂಡು, ಅವರ ಪುರೋಭಿವೃದ್ಧಿಗೆ ಶ್ರಮಿಸುವ ಟ್ರೇಡ್ ಯೂನಿಯನ್ ಪ್ರತಿನಿಧಿಗಳು—ಇವರನ್ನು ಇದರಲ್ಲಿ ಸೇರಿಸಬೇಕು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯ. ಇದರಿಂದ, ಕಾರ್ಮಿಕರ ಹೆಸರು ಹೇಳಿಕೊಂಡು, ಕಾರ್ಮಿಕ ನಾಯಕರು ವಿಶ್ವವಿದ್ಯಾನಿಲಯಗಳಿಗೆ ನುಸುಳುವುದಕ್ಕೆ ನೋಡುತ್ತಿದ್ದಾರೆ ಎಂದು ಕೆಲವರು ತಿಳಿದುಕೊಳ್ಳಬಹುದು.

ಶ್ರೀ ಎಸ್. ಹಮೀದ್ ಷಾ.—ನಾವು ಹಾಗೆ ತಿಳಿದುಕೊಂಡಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣನ್.—ಇದು ಕಾರ್ಮಿಕರ ಪ್ರಶ್ನೆ ಅಲ್ಲ, ಒಂದು ವರ್ಗದ ಪ್ರಶ್ನೆಯಲ್ಲ. ವಿದ್ಯಾಭ್ಯಾಸ ಕ್ರಮ ಸಮತಾವಾದದ ಪದ್ಧತಿಗನುಗುಣವಾಗಿ ಹೋಗಬೇಕೆಂದು ಎಲ್ಲರೂ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಅಥವಾ ಸಮತಾವಾದ ತರುತ್ತೇವೆ ಎಂದು ಹೇಳುತ್ತಿದ್ದಾರೆ. ಸಮತಾವಾದವನ್ನು ಜಾರಿಗೆ ತರುತ್ತೇವೆ ಎಂದರೆ ಏನು ಅರ್ಥ? ಮಾನ್ಯ ಸದಸ್ಯರಾದ ಶ್ರೀ ಎಸ್ ಹಮೀದ್ ಷಾ ಅವರು ಇದನ್ನು

ತಿಳಿದುಕೊಂಡಿದ್ದರೆಬಹಳ ಸಂತೋಷ ತಿಳಿದುಕೊಳ್ಳದಿದ್ದರೆ ತಿಳಿದುಕೊಳ್ಳಬೇಕಾಗಿ ವಿನಂತಿ ಸಮತಾವಾದಗಳ ಬಗ್ಗೆ ತಿಳಿದುಕೊಂಡಿರುವವರು ಹಲವಾರು ಸಮತಾವಾದಗಳ ಬಗ್ಗೆ ಮಾತನಾಡುತ್ತಾರೆ ಹಿಂದೂ ಮಹಾಸಭೆ ಯವರು ಶ್ರೀಮತಿ ಇಂದಿರಾ ಗಾಂಧಿಯವರಿಗೆ ಒಂದು ಪತ್ರವನ್ನು ಬರೆದು, ತಾವು, ತಮ್ಮ ೨೦ ಅಂಶಗಳ ಕಾರ್ಯಕ್ರಮವನ್ನು 'ಸಮತಾವಾದ ಕಾರ್ಯಕ್ರಮ' ಎಂದು ಹೇಳಬಾರದು, 'ಹಿಂದೂ ಸಮತಾವಾದ ಕಾರ್ಯಕ್ರಮ' ಎಂದು ಹೇಳಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಆದುದರಿಂದ ಸಮತಾವಾದದ ತಿರುಳೇನು ಎನ್ನುವುದು ಬಹಳ ಮುಖ್ಯ. ಯಾರು ಉತ್ಪನ್ನ ಮಾಡುತ್ತಾರೆ, ಅವರ ಕೈಯಲ್ಲಿ ಉತ್ಪಾದನಾ ಶಕ್ತಿಗಳು ಇರಬೇಕೆನ್ನುವುದು. ಆಗ ಉತ್ಪನ್ನ ಮಾಡುವವರು ಯಾರು ಎಂಬ ಪ್ರಶ್ನೆ ಸಕಾಲಕ್ಕೆ ಉದ್ಭವ ವಾಗುತ್ತದೆ, ನಗರಗಳಲ್ಲಿ ದುಡಿಯುವ ಕಾರ್ಮಿಕರು, ಮಧ್ಯಮ ವರ್ಗದ ನೌಕರರು, ರೈತರು ಇವರೆಲ್ಲಾ ಉತ್ಪನ್ನ ಮಾಡುವವರೆ. ಆದುದರಿಂದ ಕಾರ್ಮಿಕರ, ಮಧ್ಯಮ ವರ್ಗದ ಜನರ ಹಾಗೂ ರೈತಾಪಿ ಜನರ ಪ್ರತಿನಿಧಿಗಳನ್ನೂ ವಿಶ್ವವಿದ್ಯಾನಿಲಯಗಳಲ್ಲಿ ಸೇರಿಸಿಕೊಳ್ಳಬೇಕೆಂಬುದೇ ನನ್ನ ಅಭಿಪ್ರಾಯ ಇದರಿಂದ, ನಿಜವಾಗಿಯೂ ಸಮತಾವಾದದ ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗುತ್ತದೆ. ಮತ್ತು ಪ್ರೊಡಕ್ಷನ್ ಪ್ರೊಸೆಸ್‌ನಲ್ಲೂ ಕೂಡ ಜಾಸ್ತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ ನಾನೇನಾದರೂ ಉದಾಹರಣೆಗೆ ಇಲ್ಲಿ ಸೋವಿಯತ್ ರಷ್ಯಾವನ್ನು ಹೇಳಿದರೆ ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರು ರಷ್ಯಾದಲ್ಲಿ ಮಳೆ ಬಿದ್ದರೆ, ಮಲ್ಲೇಶ್ವರದಲ್ಲಿ ಕೊಡೆ ಹಿಡಿಯುವ ಜನ ಇದ್ದಾರೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಅವರು ಆ ಮಾತನ್ನು ಒಂದು ಪರಂಪರೆಯಾಗಿ ಹೇಳಿಕೊಳ್ಳುತ್ತಾ ಬಂದಿದ್ದಾರೆ. They will go down into the dust bin of history. They have already gone down and will further go down.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಡಸ್ಟ್‌ಬಿನ್‌ನಲ್ಲಿದ್ದರೆ, ತಾವು ಕೊಳಚೆಯಲ್ಲಿರುತ್ತೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಸೋವಿಯತ್ ರಷ್ಯದ ವಿಶ್ವವಿದ್ಯಾನಿಲಯಗಳಲ್ಲಿ ಕಾರ್ಮಿಕ ಪ್ರತಿನಿಧಿಗಳಿಗೆ ಬುದ್ಧಿಜೀವಿಗಳ ಪ್ರತಿನಿಧಿಗಳಿಗೆ ಮತ್ತು ರೈತರ ಪ್ರತಿನಿಧಿಗಳಿಗೆ ಆಧ್ಯತೆ ಕೊಡಲಾಗಿದೆ. ಯಾರು ಯಾರು ಇದನ್ನು ತಿಳಿದುಕೊಂಡಿದ್ದಾರೆ, ಅವರಿಗೆ ಇದು ಗೊತ್ತಿರುತ್ತದೆ. ತಿಳಿಯದೇ ಇರುವವರು, ಅದನ್ನು ಅಪಪ್ರಚಾರಕ್ಕೆ ಉಪಯೋಗಿಸಿಕೊಳ್ಳುತ್ತಾರೆ.

ಬಂಡವಾಳಷಾಹಿ ರಾಷ್ಟ್ರಗಳಾದ ಫ್ರಾನ್ಸ್, ಇಟಲಿ ಮತ್ತು ಪಶ್ಚಿಮ ಜರ್ಮನಿ ದೇಶಗಳನ್ನು ತೆಗೆದುಕೊಳ್ಳಿ, ನನಗೆ ತಿಳಿದ ಮಟ್ಟಿಗೆ ಇವತ್ತಿನ ದಿವಸ ಉತ್ಪಾದನಾ ಸಾಧನಗಳಿಗೆ ಅನುಕೂಲವಾಗುವಂತಹ ಪ್ರತಿನಿಧಿಗಳನ್ನು ಈ ವಿದ್ಯಾಭ್ಯಾಸಮಟ್ಟದಲ್ಲಿ ತರಲು ಒಪ್ಪಿಕೊಳ್ಳುವಂತಹ ಪರಿಸ್ಥಿತಿ ಇದೆ. ಸಿಂಡಿಕೇಟ ಮತ್ತು ಸೆನೇಟ್‌ನಲ್ಲಿ ಈ ರೀತಿಯ ಪ್ರತಿನಿಧಿಗಳನ್ನು ಸೇರಿಸಿಕೊಂಡಿದ್ದಾರೆ. ಇವತ್ತು ಬೆಂಗಳೂರು ಕೈಗಾರಿಕಾ ನಗರ, ದುಡಿಯುವವರ ನಗರ, ಒಂದು ಕಾಲಕ್ಕೆ ಕೈಗಾರಿಕೆಗಳು ಬಂದಿರಲಿಲ್ಲ. ಇವತ್ತು ದೊಡ್ಡ ದೊಡ್ಡ ಕೈಗಾರಿಕೆಗಳು ಬಂದಿವೆ. ಹೆಚ್.ಎ.ಎಲ್., ಹೆಚ್ ಎಂ.ಟಿ., ಬಿ.ಇ.ಎಲ್. ಇನ್ನೂ ಮುಂತಾದ ಕಾರ್ಖಾನೆಗಳು ಬಂದಿವೆ. ಈ ಕಾರ್ಖಾನೆಯಲ್ಲಿ ದುಡಿಯುವವರು ಕೆಲಸ ಮಾಡುತ್ತಿದ್ದಾರೆ, ಅಂತಹವರ ಮಕ್ಕಳು ಶಾಲಾಕಾಲೇಜುಗಳಿಗೆ ಹೋಗುತ್ತಿದ್ದಾರೆ. ನನಗೆ ತಿಳಿದ ಮಟ್ಟಿಗೆ ಪೌರಕಾರ್ಮಿಕನ ಮಗ, ಮಾನ್ಯ ಬಸವಲಿಂಗಪ್ಪನವರು ಒಳ್ಳೆಯ ಹೆಸರನ್ನು ಕೊಟ್ಟಿದ್ದಾರೆ. ಇವತ್ತು ಇಂಜಿನಿಯರಿಂಗ್ ಕಾಲೇಜಿನ ಮೆಟ್ಟಲು ಹತ್ತಿದ್ದಾನೆ, ಎಷ್ಟೋ ಜನ ಇಂಜಿನಿಯರ್ಸ್‌ಗಳೂ ಆಗಿದ್ದಾರೆ, ಇದು ಬಹಳ ಸಂತೋಷದ ವಿಚಾರ. ಆದರೆ ವಿದ್ಯಾಭ್ಯಾಸದ ಮಟ್ಟ ಎಷ್ಟು ಮಟ್ಟಿಗೆ ಬರಬೇಕೋ ಅಷ್ಟು ಮಟ್ಟಿಗೆ ಬಂದಿಲ್ಲ. ಟೆಕ್ನಾಲಾಜಿಕಲ್ ವಿದ್ಯಾಭ್ಯಾಸದಲ್ಲಿ ಮುಂದೆ ಬರಬೇಕಾಗಿತ್ತು ಬಂದಿಲ್ಲ, ಬಂದಿರುವುದನ್ನು ನೋಡಿದರೆ ತೀರಾ ಅಲ್ಪ, ಇದನ್ನು ಬಗೆಹರಿಸುವ ಹಾಗೆ ಮಾಡಬೇಕೆಂದು ನನ್ನ ಸ್ಪಷ್ಟ ಅಭಿಪ್ರಾಯ. ನಮ್ಮ ದೇಶದಲ್ಲಿ ಏನಾಗಿದೆ, ಕೇರಳದಲ್ಲಿ ಒಂದು ಯೂನಿವರ್ಸಿಟಿ ಅಕ್ಟ್ ಮಾಡಿದ್ದಾರೆ, ನಮ್ಮ ಪಕ್ಷ ಮತ್ತು ತಮ್ಮ ಪಕ್ಷ ಎರಡೂ ಸೇರಿ ರಾಜ್ಯ ಆಳುತ್ತಿವೆ, ಕೇರಳ ಯೂನಿವರ್ಸಿಟಿ ಆಕ್ಟ್‌ನಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅವರು ಯಾರು ಯಾರನ್ನು ಸೇರಿಸಿಕೊಂಡಿದ್ದಾರೆ ಎನ್ನುವುದು ಮೊದಲ ಪ್ರಶ್ನೆಯಾಗಿ ಹೇಳುತ್ತೇನೆ. ಸೆನೆಟ್‌ನಲ್ಲಿ ಎರಡು ವಿಭಾಗ ಮಾಡಿದ್ದಾರೆ. ಎಕ್ಸ್ ಅಫಿಷಿಯೋ ಮೆಂಬರ್ ಮತ್ತು ಎಲೆಕ್ಟೆಡ್ ಮೆಂಬರ್ಸ್‌ನ್ನು ಕೆಲವರನ್ನು ಸೆನೆಟ್‌ನಲ್ಲಿ ಸೇರಿಸಿದ್ದಾರೆ. ಎಲೆಕ್ಟೆಡ್ ಮೆಂಬರ್ಸ್‌ಗಳನ್ನು ಜಾಸ್ತಿ ಮಾಡಿದ್ದಾರೆ, Chancellor, Vice Chancellor, Pro-Chancellor, Pro-Vice Chancellor, 12 member from the Accadamic Council, 5 other members nominated by

the Government, 2 members of the Colleges, 20 members elected by the Graduates, 6 members elected by the Legislative Assembly, 2 members elected from the Trade Union University area, one member elected from employees other than the teachers of Universities, one members elected from the Non-teaching staff. ಟೀಚರ್ಸ್ ರೆಪ್ರೆಸೆಂಟೇಷನ್‌ಗೆ ಅವಕಾಶ ಕೊಟ್ಟಿದ್ದಾರೆ. ಅಫಿಲಿಯೇಟೆಡ್ ಕಾಲೇಜುಗಳಿಗೆ ಲೋಕಲ್ ಅಥಾರಿಟೀಸ್‌ಗೆ ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ. ಇಂಥ ಪ್ರತಿನಿಧಿಗಳಿಗೆ ಕೊಡಬೇಕೆಂದು ಅವರ ಆಕ್ಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮೂರು ಮುಖ್ಯವಾದ ಅಂಶಗಳಿಗೆ ಅವರು ಅವಕಾಶ ಕೊಟ್ಟಿದ್ದಾರೆ. ನಾನು ಅಲ್ಲಿ ಮಾಡಿದ್ದಾರೆ, ಇಲ್ಲಿ ತಾವು ಮಾಡಿ ಎಂದು ಹೇಳುವುದಿಲ್ಲ.

SRI KAGODU THIMMAPPA.—In what way they are helpful to achive objectives which have been envisaged ?

ಶ್ರೀ ಎಂ.ಎಸ್ ಕೃಷ್ಣನ್.— ನಾನ್‌ಟೀಚಿಂಗ್ ಸ್ಟಾಫ್ ಯಾರು ಯಾರು ಬರುತ್ತಾರೆ ಎಂದರೆ ನನ್ನ ದೃಷ್ಟಿಯಲ್ಲಿ ಕ್ಲಾರ್ಕ್ಸ್, ಅಟೆಂಡರ್ಸ್, ಪ್ಯೂನ್ಸ್ ಬರಬಹುದು, ಇವರೆಲ್ಲರೂ ಯೂನಿವರ್ಸಿಟಿಯಲ್ಲಿ ಇರುತ್ತಾರೆ. ಪ್ರೆಸ್‌ನಿಂದಲೂ ಬರುತ್ತಾರೆ. ಎಜುಕೇಷನ್ ಕಮೀಷನ್‌ನವರು ಹೇಳಿರುವಂತಾದ್ದು, ಯಾವ ರೀತಿ ಜಾರಿಗೆ ತರುತ್ತಾರೋ ? ಸೆನೆಟ್ ಕರ್ತವ್ಯ ಏನು ? ಸಿಂಡಿಕೇಟ್ ಕರ್ತವ್ಯ ಏನು ? ಬರೀ ಪ್ರೊಫೆಸರುಗಳನ್ನು ನೇಮಿಸುವುದು, ಯಾವ ಯಾವ ಫ್ಯಾಕಲ್ಟೀಸ್‌ಗಳು ಇರಬೇಕು ಎನ್ನುವುದು ಮಾತ್ರವಲ್ಲ. ಅದಕ್ಕಿಂತ ಹೆಚ್ಚಾಗಿ ಅಡ್ಮಿನಿಸ್ಟ್ರೇಷನ್ ಯಾವ ರೀತಿ ಇರಬೇಕು, ಮತ್ತೆ ಅಡ್ಮಿನಿಸ್ಟ್ರೇಷನಲ್ಲಿ ಯಾವ ರೀತಿ ಕಂಡೀಷನ್ಸ್ ಇರಬೇಕು, ಇದು ಬಹಳ ಮುಖ್ಯವಾದ ವಿಷಯ. ಇವತ್ತು ಇದನ್ನು ಹೇಳಬೇಕಾದರೆ, ಇದಕ್ಕೆ ಸಂಬಂಧಪಟ್ಟ ಜನ ಅಲ್ಲಿ ಇದ್ದರೆ ಮಾತ್ರ ಹೇಳುವುದಕ್ಕೆ ಸಾಧ್ಯ, ಇಲ್ಲದೇ ಹೋದರೆ ಹೇಳುವುದಕ್ಕೆ ಆಗುವುದಿಲ್ಲ. ಯೂನಿವರ್ಸಿಟಿಯಲ್ಲಿ ಏನೇನು ನಡೆಯುತ್ತದೆ ? ಯಾವರೀತಿ ವ್ಯವಹಾರ ನಡೆಯುತ್ತದೆ ? ಉಪನ್ಯಾಸಕರು ಮತ್ತು ಪ್ರಾಧ್ಯಾಪಕರು ಮಾತ್ರ ಮೇಧಾವಿಗಳು, ಬೇರೆಯವರು ಮೇದಾವಿಗಳಾಗುವುದಿಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದರೆ, ನಾನ್ ಟೀಚಿಂಗ್ ಸ್ಟಾಫ್‌ಗೆ ಅವಕಾಶ ಸಿಗುವುದಿಲ್ಲ. ಇವರು ಕೂಡ ಯೂನಿವರ್ಸಿಟಿಯೊಂದಿಗೆ ಒಳ್ಳೆಯ ಸಂಬಂಧ ಇಟ್ಟುಕೊಂಡು, ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾರೆ. ಉದಾಹರಣೆಗೆ ಯೂನಿವರ್ಸಿಟಿ ಪ್ರೆಸ್ ತೆಗೆದುಕೊಳ್ಳಿ, ಇವರು ಯೂನಿವರ್ಸಿಟಿಯ ಎಲ್ಲಾ ವಿಷಯಗಳನ್ನು ಪ್ರಿಂಟ್ ಮಾಡುತ್ತಾರೆ ಅಲ್ಲದೆ ಪಬ್ಲಿಕೇಷನ್ ಕೂಡ ನಡೆಯುತ್ತದೆ, ಇದು ಬಹಳ ಮುಖ್ಯವಾದ ಅಂಗ. ಹೀಗಿರಬೇಕಾದರೆ ಅದರಲ್ಲಿ ಅವರು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರೆ, ಅದನ್ನು ನಾನು ಒಪ್ಪುವುದಿಲ್ಲ. ಆದಾದರಿಂದ ನಾನ್ ಟೀಚಿಂಗ್ ಸ್ಟಾಫ್‌ನ್ನು ಹಾಕಲೇಬೇಕೆಂದು ನನ್ನ ಸ್ಪಷ್ಟ ಅಭಿಪ್ರಾಯ.

ಇನ್ನು ಕ್ಲಾಸ್ (23)ರಲ್ಲಿ Fifteen persons nominated by the Chancellor in consultation with the Vice-Chancellor from among persons having special knowledge of Literature, Science, Arts, Co-operation and Social service of whom — ಎಂದು ಇದೆ. ಸೋಷಿಯಲ್ ಸರ್ವೀಸ್ ಎಂದರೆ ಏನು ? ಮಾನ್ಯ ನಾಯ್ಡುರವರು ಕೂಡ ಸೋಷಿಯಲ್ ಸರ್ವೀಸ್‌ನಲ್ಲಿ ಬಂದಿದ್ದಾರೆ. ಈ ಹೆಸರಿನಲ್ಲಿ ಯಾರನ್ನು ಬೇಕಾದರೂ ಸೇರಿಸುವುದಕ್ಕೆ ಅವಕಾಶ ಇದೆ. 23 (iii) five of whom at least one is a woman belonging to any of the classes declared by the State Government from time to time to be Socially and Educationally backward ; ಎಂದು ಇದೆ.

ಅಂತರರಾಷ್ಟ್ರೀಯ ಮಹಿಳಾ ವರ್ಷ ಎಂದು ಹೆಂಗಸರಿಗೂ ಕೂಡ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಇವರಿಗೆ ಏತಕ್ಕೆ ಪ್ರಾತಿನಿಧ್ಯ ಕೊಡಬೇಕೆನ್ನುವುದರ ಬಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಮಕ್ಕಳಿಗೆ ಹೇಳಿದ್ದಾರೆ.

ಇನ್ನು ಕ್ಲಾಸ್ 6 (2) (v)ರಲ್ಲಿ Reservation of seats for children of freedom fighters ಎಂದು ಹೇಳಿದ್ದಾರೆ. ನಾನು ಅದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ.

ಇಲ್ಲಿ ಹೆಂಗಸರಿಗೆ ಒಂದು ಪ್ರಾತಿನಿಧ್ಯ ಕೊಟ್ಟಿದ್ದೀರಿ. ಬಹಳ ಸಂತೋಷ. ಆದರೆ ಇನ್ನು ಮಿಕ್ಕವರು 4 ಜನ ಯಾರು ಇರಬೇಕು, ಯಾರು ಆಗಬೇಕು ಅನ್ನುವುದು ಒಂದು ಪ್ರಶ್ನೆ ಇದೆ. ಅದಕ್ಕೆ ನನಗೆ ತಿಳಿದ ಹಾಗೆ ಹೇಳುವುದಾದರೆ 3-4 ಕಾಸಿನ ಪೇಪರ್ ಮಾರುವ ಜನ ಇದ್ದರೂ ಪರವಾಯಿಲ್ಲ, ಅವನಿಗೆ ಯಾವ ರೀತಿ ವಿಧ್ಯಾಭ್ಯಾಸ ಇಲ್ಲದೇ ಇದ್ದರೂ ಸರಿ, ಅವನಿಗೆ ಸರಿಯಾದ ಒಂದು ತಿಳುವಳಿಕೆ ಮಟ್ಟ ಇಲ್ಲದೇ ಇದ್ದರೂ ಕೂಡ ಬರಬಹುದು ಅಂದರೆ ಈಪ್ರೊತು ಒಂದು ರೈತರ ಪ್ರತಿನಿಧಿಗೆ ಆಗಲಿ ಅಥವಾ ಒಂದು ನಾನ್ ಟೀಚಿಂಗ್ ಸ್ಟಾಫ್‌ಗೆ ಆಗಲಿ ಪ್ರಾತಿನಿಧ್ಯ ಕೊಟ್ಟರೆ ತಪ್ಪಾಗುವುದಿಲ್ಲ. ಇದು ಅತಿ ಮುಖ್ಯವಾದುದು ಎಂದು ಹೇಳುತ್ತೇನೆ. ಇದನ್ನು ಇದರಲ್ಲಿ ಮಾಡದೇ ಇರುವುದು ಬಹಳ ವಿಷಾದದ ಸಂಗತಿ ಎಂದು ಹೇಳುತ್ತೇನೆ.

ಇದರಲ್ಲಿ ಇನ್ನೊಂದು ಅಂಶ ಏನೆಂದರೆ ಇದು ಪ್ರಜಾಪ್ರಭುತ್ವದ ರೀತಿಯಲ್ಲಿ ಇರಬೇಕೆ ಹೊರತು ಬ್ಯೂರಾಕ್ರಸಿ ರೀತಿಯಲ್ಲಿ ಇರಕೂಡದು. ಹಾಗೆ ಇದ್ದರೆ ಆ ಯೂನಿವರ್ಸಿಟಿ ಸರಿಯಾಗಿ ನಡೆಯುವುದಿಲ್ಲ. ಇದರ ಬಗ್ಗೆ ತಜ್ಞರು ಕೂಡ ಅಭಿಪ್ರಾಯಪಟ್ಟಿದ್ದಾರೆ. ಈ ಸೆನೇಟ್‌ನಲ್ಲಿ 45 ಜನ ನಾನ್ ಅಫಿಷಿಯಲ್ಸ್ ಏನು ಇದ್ದಾರೆ ಅವರಲ್ಲಿ 20 ಜನ ನಾಮಿನೇಟೆಡ್ ಮೆಂಬರ್ಸ್ ಇನ್ನು 12 ಜನ ಡೀನ್ಸ್ ಆಫ್ ಫಾಕಲ್ಟೀಸ್ ಇನ್ನು 12 ಜನ ಇತರರು ಇದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಇದರಲ್ಲಿ ಅಫಿಷಿಯಲ್ಸ್ ಜಾಸ್ತಿ ಇದ್ದರೂ ಕೂಡ 20 ಜನ ನಾಮಿನೇಟೆಡ್ ಮೆಂಬರ್ಸ್ ಇದರಲ್ಲಿ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ಇದರಲ್ಲಿ ನಾನ್ ಅಫಿಷಿಯಲ್ಸ್ ಕಡಿಮೆ. ಇದರಲ್ಲಿ ಅಫಿಷಿಯಲ್ಸ್ ಜಾಸ್ತಿ ಇದ್ದರೂ ಕೂಡ ನಾನ್ ಅಫಿಷಿಯಲ್ಸ್‌ನಲ್ಲಿ ಎಲೆಕ್ಟೆಡ್ ರೆಪ್ರಸೆಂಟೆಟೀವ್ಸ್ ಇರುವುದು ಕಡಿಮೆ.

ಇನ್ನು ಸಿಂಡಿಕೇಟ್ ವಿಚಾರ ಹೇಳುವುದಾದರೆ ಒಟ್ಟು 50 ಜನರಲ್ಲಿ 4 ಜನ ಎಲೆಕ್ಟೆಡ್ ಮೆಂಬರ್ಸ್ ಇದ್ದಾರೆ. ಇದು ಸರಿಯೇ. ಇದು ಸರಿಯಾದುದಲ್ಲ ಎಂದು ನನಗೆ ಅನಿಸುತ್ತದೆ. ಈಗ ಯೂನಿವರ್ಸಿಟಿಯನ್ನು ಯಾವರೀತಿ ರಚನೆ ಮಾಡಬೇಕು ಅಂತ ಇದ್ದೀರೋ, ಪ್ರಜಾಪ್ರಭುತ್ವದಲ್ಲಿ ಇದು ಯಾವರೀತಿ ಬೆಳೆಯಬೇಕು ಅಂತ ಇದ್ದೀರೋ ಅದಕ್ಕೆ ಇದು ತಿಲಾಂಜಲಿ ಕೊಟ್ಟಂತಾಗುತ್ತದೆ. ಇದರಲ್ಲಿರುವ ಸಮ್ಮರಿ ಆಫ್ ರೆಕಮೆಂಡೇಷನ್‌ನಲ್ಲಿ ಹೇಳಿದ್ದೀರಿ. ಬೇರೆ ಸ್ನೇಹಿತರೂ ಕೂಡ ಹೇಳಿದ್ದಾರೆ. ಇದು ಹಿಂದೆ ಇದ್ದ ಹಾಗೆ ಆಗುತ್ತದೆ ಎಂದು. ಇದಕ್ಕೆ ಗಾಢವಾದ ಕಾರಣ ಏನು ? ಇದು ಸರ್ಕಾರದ ಕಂಟ್ರೋಲ್ ಇರಬೇಕು ಎನ್ನುವುದೇ ಒಂದು ಕಾರಣವೇ ಅಥವಾ ಇನ್ನೇನು ಕಾರಣ ಇದೆ ಹೇಳಿ. ಯೂನಿವರ್ಸಿಟಿ ಮೇಲೆ ಸರ್ಕಾರದ ಕಂಟ್ರೋಲ್ ಇರಬೇಕು ಎನ್ನುವುದು ಒಂದೇ ಕಾರಣ ಕೊಟ್ಟರೆ ಅದು ನನಗೆ ಸಮಂಜಸವಾಗಿ ಕಾಣುವುದಿಲ್ಲ. ಯೂನಿವರ್ಸಿಟಿ ಆದಷ್ಟು ಮಟ್ಟಿಗೆ ಅಟಾನಮಸ್ ಬಾಡಿಯಾಗಿ ಇರಬೇಕು. ತಾವು ಕೂಡ ಒಂದು ಸಾರಿ ಹೇಳಿದ್ದೀರಿ. ತಮ್ಮ ಭಾಷಣದಲ್ಲಿ ಕೇಳಿದ್ದೇನೆ. ಹಿಂದೆ ವಿದ್ಯಾಭ್ಯಾಸದ ಬಗ್ಗೆ ಮಾತನಾಡುವಾಗ ಹಾಗೆ ಹೇಳಿದ್ದೀರಿ. ಈಗ ತಾವು ಅದರ ಬಗ್ಗೆ ಒಂದು ಬಿಲ್ ತೆಗೆದುಕೊಂಡು ಬಂದಿದ್ದೀರಿ. ಈ ರೀತಿ ಮಾಡಿದರೆ ಈ ಯೂನಿವರ್ಸಿಟಿಯ ಸ್ವಾಯತ್ತತೆಗೆ ತಿಲಾಂಜಲಿ ಕೊಟ್ಟಂತಾಗುತ್ತದೆ. ಇದರಲ್ಲಿ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಇನ್ನು ಈ ಯೂನಿವರ್ಸಿಟಿ ಸರ್ಕಾರದ ಕಂಟ್ರೋಲ್‌ನಲ್ಲಿ ಇರಬೇಕೇ ಬೇಡವೇ ಎನ್ನುವ ಒಂದು ವಿಷಯ ಇದೆ. ಮುಖ್ಯವಾಗಿ ಹೇಳುವುದಾದರೆ ಎಜುಕೇಷನ್ ಇನ್ಸ್ಟಿಟ್ಯೂಷನ್ಸ್ ಸರ್ಕಾರದ ಕಂಟ್ರೋಲ್‌ನಲ್ಲಿ ಬರುತ್ತದೆ ಮತ್ತು ಯೂನಿವರ್ಸಿಟಿಯೂ ಕೂಡ ಸರ್ಕಾರದ ಕಂಟ್ರೋಲ್‌ನಲ್ಲಿ ಬರುತ್ತದೆ. ಇದು ಗೌರ್ನಮೆಂಟ್ ಕಂಟ್ರೋಲ್‌ನಲ್ಲಿ ಇರಕೂಡದು ಅಂತ ನಾನು ಹೇಳುವುದಿಲ್ಲ. ಏತಕ್ಕೆಂದರೆ ಸರ್ಕಾರ ಈ ಯೂನಿವರ್ಸಿಟಿ ಎಷ್ಟು ಹಣ ಕೊಡುತ್ತಾರೆ, ಎಷ್ಟು ಇದಕ್ಕೆ ಖರ್ಚು ಮಾಡುತ್ತಾರೆ ಅದಕ್ಕೆ ಸರ್ಕಾರದ ಕಂಟ್ರೋಲ್ ಇರಕೂಡದು ಎಂದು ನಾನು ಹೇಳುವುದಿಲ್ಲ. ಆದರೆ ಸರ್ಕಾರದ ಕಂಟ್ರೋಲ್ ಇದರಲ್ಲಿ ಸ್ವಲ್ಪ ಮಟ್ಟಿಗೆ ಇರಬೇಕು ಎಂದು ಹೇಳುತ್ತೇನೆ. ಆದರೆ ಇದು ಎಷ್ಟು ದೂರ ಇದೆ, ಯಾವ ಮಟ್ಟದಲ್ಲಿ ಇದೆ ಅನ್ನುವುದನ್ನು ಈ ಬಿಲ್‌ನಲ್ಲಿರುವ ರನ್ನಿಂಗ್ ಥ್ರೆಡ್ ಮೇಲಿನಿಂದ ಕಡೆಯುವರಿಗೂ ಹಿಡಿ ನೋಡಿದರೆ ನಮಗೆ ಗೊತ್ತಾಗುವುದು ಯಾವುದಕ್ಕಾದರೂ ಕೂಡ ಸರ್ಕಾರದ ಒಪ್ಪಿಗೆಯನ್ನು ತೆಗೆದುಕೊಂಡು ಕೆಲಸ ಮಾಡಬೇಕಾಗುತ್ತದೆ. ಸರ್ಕಾರದ ಈ ಒಂದು ಕಂಟ್ರೋಲನ್ನು ಕಡಿಮೆ ಮಾಡಬೇಕು ಎಂದು ಹೇಳುತ್ತೇನೆ. ಜಾಸ್ತಿ ಇರಕೂಡದು. ಸರ್ಕಾರದ

ಕಂಟ್ರೋಲ್ ಇರಲೇಬೇಕಾಗುತ್ತದೆ ಏತಕ್ಕೆಂದರೆ ಹಣಕಾಸಿನ ವ್ಯವಹಾರದಲ್ಲಿ ಸರ್ಕಾರ ನೋಡಿಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಆಡಿಟರು ಸರಿಯಾಗಿ ರಿಪೋರ್ಟ್ ಕೊಡಬೇಕು, ಅದನ್ನು ಲೆಜಿಸ್ಲೇಚರ್ ಮುಂದೆ ಇಡಬೇಕು ಇದೆಲ್ಲಾ ಸರಿ. ಆದರೆ ಆಡಳಿತ ಯಂತ್ರವನ್ನು ನೇಮಕ ಮಾಡಿಕೊಳ್ಳಬೇಕಾದರೆ, ಕೆಲವು ಸರ್ಕಾರಿ ಪ್ರತಿನಿಧಿಗಳನ್ನು ನೇಮಕ ಮಾಡಬೇಕಾದರೆ ಎಲ್ಲವನ್ನು ಅವರೇ ನೇಮಕ ಮಾಡಿಕೊಳ್ಳಲಿ. ಬೇಡ ಅಂತ ಹೇಳುವುದಿಲ್ಲ. ಆದರೆ ಸಣ್ಣ ಸಣ್ಣ ವಿಷಯಗಳಿಗೂ ಕೂಡ ಸರ್ಕಾರದ ಕಂಟ್ರೋಲ್ ಅವಶ್ಯಕತೆ ಇದೆ ಅಂತ ಕಂಡುಬಂದರೆ ಅದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ಅದನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡಿ ಈ ಸೆನೆಟ್ ಮತ್ತು ಸಿಂಡಿಕೇಟ್‌ಗೆ ಆದಷ್ಟು ಮಟ್ಟಿಗೆ ಸ್ವಾಯತ್ತತೆಯನ್ನು ಕೊಡಬೇಕು ಎಂದು ನನ್ನ ಸ್ಪಷ್ಟ ಅಭಿಪ್ರಾಯ.

ಇನ್ನು ಅಕಾಡಮಿಕ್ ಕೌನ್ಸಿಲ್ ವಿಚಾರ ಹೇಳುವುದಾದರೆ ಅಲ್ಲಿ ಒಂದು ಪ್ರಶ್ನೆ ಬರುತ್ತದೆ. ಕ್ಲಾಸ್ 26ರಲ್ಲಿ ಈ ರೀತಿ ಇದೆ.—

Clause 26 reads as follows.—

"26. ACADAMIC COUNCIL.— The Academic Council shall consists of the following members namely —

(i) The Vice-Chancellor;

(ii) Three members of the Syndicate nominated by the Chancellor;

(iii) One member of the Senate elected by its members;

(iv) The deans of Faculties;

(v) The professors of Post Graduate Departments of Studies;

(vi) Twenty-five per cent of the Principals of Colleges nominated by the Vice-Chancellor by rotation according to seniority, for a period of one year;

(vii) Eight lecturers and two readers who are not Deans of Faculties or Heads of Post Graduate Departments Studies or Principals of Colleges elected by the teachers.

(viii) six persons nominated by the Chancellor, from amongst eminent educationists, of whom not less than two shall be persons belonging to the Scheduled Castes or the Scheduled Tribes and not less than two shall be persons belonging to such socially and educationally backward classes of citizes specified by the State Government from time to time;...........

Excepting for the 6 persons nominated by the Council, it is purely a Government body ಮತ್ತು Clause 27 deals with powers of the Academic Council.

I feel that student representatives must also be in the Academic Council. That is the thinking now. ಏತಕ್ಕೆಂದರೆ ಕೆಲವರು ಮೈ ಪರಚಿಕೊಳ್ಳುತ್ತಾರೆ; ಇನ್ನು ಕೆಲವರಿಗೆ ತಲೆನೋವು ಬರುತ್ತದೆ. ಅವರು ಯಾವಾಗ ಸ್ಟ್ರೈಕ್ ಮಾಡುತ್ತಾರೋ ಅಂತ ಬೇರೆ ಇರುತ್ತೆ. ಈವಾಗ ಅವರೇನೂ ಸ್ಟ್ರೈಕ್ ವಗೈರೆ ಮಾಡುತ್ತಿಲ್ಲ, ಇಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಅವರನ್ನು ಕೈಬಿಡಬಾರದು, ಅವರನ್ನು ಸೇರಿಸಬೇಕು.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಈ ಅಕಾಡಮಿಕ್ ಕೌನ್ಸಿಲ್‌ನಲ್ಲಿ ಆ ವಿದ್ಯಾರ್ಥಿಗಳು ಇರಬೇಕು ಎಂದು ಹೇಳುತ್ತಿದ್ದೀರಲ್ಲಾ ಅದಕ್ಕೆ ಕಾರಣ ಏನು ಎಂದು ಹೇಳುತ್ತೀರಾ ?

ಶ್ರೀ ಎಂ.ಎಸ್. ಕೃಷ್ಣನ್.—ನನಗೆ ಗೊತ್ತು ಈ ವಿಚಾರಧಾರೆಯನ್ನು ಅವರು ಒಪ್ಪಿಕೊಳ್ಳುವುದಿಲ್ಲ ಎಂದು. ಈ ಪ್ರಶ್ನೆ ಅವರು ಏತಕ್ಕೋಸ್ಕರ ಕೇಳಿದರು ಎಂದರೆ ವಿದ್ಯಾರ್ಥಿಗಳ ಗಮನ ವಿದ್ಯೆ ಕಡೆಗೆ ಇರಬೇಕೆ ಹೊರತು ಅದರಿಂದ ಹೊರಗೆ ಇರಕೂಡದು ಅನ್ನುವಅಭಿಪ್ರಾಯ ಸೂಚಿಸಿದರೆ ಅದನ್ನು ನಾನು ಈಗಲೇ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರೂ ಸೆನೆಟ್ ಮೆಂಬರ್. ನಾನು ಜನರಲ್ ಆಗಿ ಯಾರ ಮೇಲೆ ಆಗಲಿ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ.

4-00 P.M.

ಇವರ ಒಂದು ಅಭಿಪ್ರಾಯ ಏನಿದೆಯೆಂದರೆ, ವಿದ್ಯಾರ್ಥಿಗಳಿಗೆ ಏನಾದರು ಅಕ್ಯಾಡಮಿಕ್ ಕೌನ್ಸಿಲ್‌ನಲ್ಲಿ ಪ್ರಾತಿನಿಧ್ಯ ಕೊಟ್ಟುಬಿಟ್ಟರೆ ಅವರು ಅಲ್ಲಿ ಏನಾದರು ತಕರಾರೂ ಮಾಡಬಹುದೆಂದು ಕೊಟ್ಟಿಲ್ಲವೆಂದು ಕಾಣುತ್ತದೆ. ಈಗ ಸೆನೆಟ್ ಮತ್ತು ಸಿಂಡಿಕೇಟ್‌ನಲ್ಲಿ ಇವರಿಗೆ ಪ್ರಾತಿಧ್ಯ ಕೊಟ್ಟಿದ್ದೀರಿ ಎಂದರೆ, ಅದು ಶ್ಲಾಘನೀಯವಾದದು; ಅಲ್ಲಿಯೂ ಸಹ ಯಾವ ರೀತಿ ಕೊಟ್ಟಿದ್ದೀರಿ ಎಂದರೆ, ಅಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ತಮಗೆ ಎಲ್ಲ ಕಡೆಯಿಂದಲೂ ಒತ್ತಾಯ ಬಂತು, ಮೇಲಿನಿಂದ ರೆಕಮೆಂಡೇಷನ್ ಬಂತು, ಅದಕ್ಕಾಗಿ ಕೊಟ್ಟಿದ್ದೀರಿ. ಆದರೆ ಅಕ್ಯಾಡಮಿಕ್ ಕೌನ್ಸಿಲ್ ಅವರಿಗೆ ಪ್ರಾತಿನಿಧ್ಯ ಕೊಟ್ಟರೆ, ಅಲ್ಲಿ ಪರೀಕ್ಷೆಗಳು, ಸಿಲಬಸ್ ಮುಂತಾದ ವಿಚಾರಗಳನ್ನು ಚರ್ಚೆ ಮಾಡುವಾಗ ವಿದ್ಯಾರ್ಥಿಗಳು ತಕರಾರು ಮಾಡಬಹುದೆಂದು ನೀವು ಕೊಡುತ್ತಿಲ್ಲ, ವಿದ್ಯಾರ್ಥಿಗಳು ಚಳುವಳಿ ಮಾಡುತ್ತಾರೆ, ಮುಷ್ಕರ ಹೂಡುತ್ತಾರೆ ಆದಕಾರಣ ಅವರನ್ನು ಅದಷ್ಟು ದೂರಇಡೋಣವೆಂದು ಈ ರೀತಿ ಮಾಡಿರಬಹುದೆಂದು ಕಾಣುತ್ತಿದೆ. ಈ ಹಿಂದೆ ವಿದ್ಯಾಮಂತ್ರಿಗಳೊಬ್ಬರು ವಿದ್ಯಾರ್ಥಿಗಳ ಬಗ್ಗೆ ಇಲ್ಲಿ ಮಾತನಾಡುತ್ತಾ, ಇವರು ತೊಂದರೆ ಕೊಡುವ ಜನರು, ಚಳುವಳಿ ಮಾಡುತ್ತಾರೆ, ಅದು ಸರಿಯಲ್ಲ, ಅವರಲ್ಲಿ ಮುಖ್ಯವಾಗಿ ಡಿಸಿಪ್ಲಿನ್ ಇರಬೇಕೆಂದು ಹೇಳಿದರು ವಿಶ್ವವಿದ್ಯಾನಿಲಯಗಳಲ್ಲಿಯೇ ಆಗಲೀ, ಕಾಲೇಜುಗಳಲ್ಲಿಯೇ ಆಗಲೀ ವಿದ್ಯಾರ್ಥಿಗಳಲ್ಲಿ ಡಿಸಿಪ್ಲಿನ್ ನಾನೂ ಸಹ ಹೇಳುತ್ತೇನೆ ಅದು ಇರುವುದು ಬೇಡ ಎಂದು ನಾನು ಹೇಳುವುದಿಲ್ಲ, ಈಗ ತುರ್ತುಪರಿಸ್ಥಿತಿ ಜಾರಿಯಲ್ಲಿರುವುದರಿಂದ ವಿದ್ಯಾರ್ಥಿಗಳು ಯಾವ ಚಳುವಳಿಯನ್ನೂ ನಡೆಸುತ್ತಿಲ್ಲ ಇದಕ್ಕೆ ಮೊದಲು ವಿದ್ಯಾರ್ಥಿಗಳು ಏತಕ್ಕೆ ಮುಷ್ಕರ ಮಾಡುತ್ತಿದ್ದರೆಂದರೆ It is an expression of the revolt against the socio-economic system in our country. The students are part of our socio-economic system. He seems the p or side on the one hand and the richer side on the other Colonialism, religionalism, communism-all these things taught by the teachers. Therefore students are not outside the seciety, but they are part of the society. ಇದರಿಂದ ಏನಾಗುತ್ತದೆಂದರೆ, ಅವರು ರಿವೊಲ್ಟ್ ಮಾಡುತ್ತಾರೆ ಅವರು ಏತಕ್ಕೋಸ್ಕರ ರಿವೊಲ್ಟ್ ಮಾಡುತ್ತಾರೆಂದರೆ, ಈಗಿನ ವಿದ್ಯಾಭ್ಯಾಸದ ಪದ್ಧತಿ ಚೆನ್ನಾಗಿಲ್ಲ, ವಿದ್ಯಾಭ್ಯಾಸ ಮುಗಿಸಿದ ಮೇಲೆ ಕೆಲಸ ಸಿಗದೆ ಅಲೆದಾಡ ಬೇಕಾಗುತ್ತದೆ ಈ ಕಾರಣದಿಂದ ಹೊಸ ವಿದ್ಯಾಭಾಸ ಪದ್ಧತಿಯನ್ನು ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಮಾಡುತ್ತಾರೆ. ಕೆಲವು ಸಲ ಅವರು ಹೇಳತಕ್ಕಂಥ ವಿಷಯಗಳಲ್ಲಿ ಮೂಲಭೂತವಾದಂಥ ತಿರುಳು ಏನಿದೆ ಎಂಬುದನ್ನು ನಾವು ಅರ್ಥ ಮಾಡಿಕೊಂಡರೆ ಆಗ ಅವರು ಹೇಳುತ್ತಿರುವುದು ಸರಿ ಎಂದು ನಮಗೇ ತಿಳಿಯುತ್ತದೆ.

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್.—ಅಕ್ಯಾಡಮಿಕ್ ಕೌನ್ಸಿಲ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಕೊಡಬೇಕೆಂದು ತಾವು ಹೇಳುತ್ತಿದ್ದೀರಿ, ಯಾವ ಕಾರಣಕ್ಕಾಗಿ ಕೊಡಬೇಕೆಂದು ತಾವು ಹೇಳಿದರೆ ಚೆನ್ನಾಗಿರುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಇಂದು ನಮ್ಮ ದೇಶದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರಿಂದ ಹಿಡಿದು ಎಲ್ಲರೂ ಒಂದು ಘೋಷಣೆ ಏನು ಮಾಡುತ್ತಿದ್ದಾರೆಂದರೆ, ಆಡಳಿತಲ್ಲಿ ಕಾರ್ಮಿಕರೂ ಭಾಗವಹಿಸುವುದಕ್ಕೆ ಅವಕಾಶವಿರಬೇಕು ಎಂದು ಮುಖ್ಯವಾಗಿ ಪಬ್ಲಿಕ್ ಸೆಕ್ಟರ್‌ನಲ್ಲಿ ಆಡಳಿತದಲ್ಲಿ ಕಾರ್ಮಿಕರು ಭಾಗವಹಿಸುವುದಕ್ಕೆ ಅವಕಾಶ ಕೊಡಬೇಕೆಂದು ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ರಘುನಾಥರೆಡ್ಡಿಯವರು ಒಂದು ಸರ್ಕುಲ್ಯರ್ ಹೊರಡಿಸಿದರು. ಆದರಂತೆ ನಮ್ಮ ರಾಜ್ಯದಲ್ಲಿಯೂ ಮಾನ್ಯ ಮಂತ್ರಿಗಳಾದ ಶ್ರೀ

ಎಸ್. ಎಂ. ಕೃಷ್ಣ ಅವರು ಸಹ ಒಂದು ಸರ್ಕ್ಯುಲರ್ ಹೊರಡಿಸಿದರು ಆದರೆ ಇಲ್ಲಿಯವರೆಗೆ ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡಲಿಲ್ಲ. ಕಾರಣ ಕೇಳಿದರೆ ಕಾರ್ಮಿಕರಿಗೆ ಪ್ರೊಡಕ್ಷನ್ ಬಗ್ಗೆಯಾಗಲೀ, ಫೈನಾನ್ಸ್ ಬಗ್ಗೆಯಾಗಲೀ ಪರಚೇಸ್ ಬಗ್ಗೆಯಾಗಲೀ, ಕಾಸ್ಟಿಂಗ್ ವಿಷಯವಾಗಲೀ ಏನು ಗೊತ್ತು ಎಂದು ಹೇಳುತ್ತಾರೆ. ಅದೇ ರೀತಿಯ ಮನೋಭಾವದಿಂದ ನಮ್ಮ ಮಾನ್ಯ ಸ್ನೇಹಿತರು ಆ ಪ್ರಶ್ನೆ ಕೇಳಿದರೆಂದು ಕಾಣುತ್ತಿದೆ.

ಶ್ರೀ ಎಸ್. ಎ. ಶೀರಾಳಿ ಚಂದ್ರಶೇಖರ್.—ಈಗ ಸೆನೆಟ್ ಮತ್ತು ಸಿಂಡಿಕೇಟ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಕೊಡಲಾಗಿದೆ. ಆದರೆ ಅಕ್ಯಾಡಮಿಕ್ ಕೌನ್ಸಿಲ್‌ನಲ್ಲಿಯೂ ಪ್ರಾತಿನಿಧ್ಯ ಕೊಡಬೇಕೆಂದು ತಾವು ಕೇಳುತ್ತಿರುವುದು ಯಾವ ಕಾರಣಕ್ಕಾಗಿ ಎಂದು ಹೇಳಬೇಕು ? ಆ ಕೌನ್ಸಿಲ್‌ಗೂ ವಿದ್ಯಾರ್ಥಿಗಳಿಗೂ ಯಾವ ಸಂಬಂಧವೂ ಇಲ್ಲ ಗೋಕಲಾಷ್ಟಮಿಗೂ ಇಮಾಂಸಾಬಿಗೂ ಇರುವಷ್ಟೆ ಈ ವಿದ್ಯಾರ್ಥಿಗಳಿಗೂ ಅಕ್ಯಾಡಮಿಕ್ ಕೌನ್ಸಿಲಿಗೂ ಇದೆ ಎಂದು ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅಕ್ಯಾಡಮಿಕ್ ಕೌನ್ಸಿಲ್‌ನಲ್ಲಿ ವಿದ್ಯಾರ್ಥಿಗಳು ಏತಕ್ಕೆ ಇರಬೇಕೆಂದ ಅವರು ಕೇಳುತ್ತಿದ್ದಾರೆ ? ಆ ರೀತಿ ಏನಾದರು ಅವಕಾಶ ಕೊಟ್ಟರೆ ಅವರು ಅಲ್ಲಿ ಪರೀಕ್ಷಾ ಪದ್ಧತಿ ಬದಲಾವಣೆಯಾಗಬೇಕು, ಪರೀಕ್ಷೆಯಲ್ಲಿ ಕಾಪಿಹೊಡೆಯಲು ಅವಕಾಶವಿರಬೇಕೆಂದು ಕೇಳುತ್ತಾರೆಂದುಕೊಂಡು ಈ ರೀತಿ ಹೇಳುತ್ತಾ ಇದ್ದಾರೆ ಆದರೆ ಅಲ್ಲಿ ಅಕ್ಯಾಡಮಿಕ್ ಕೌನ್ಸಿಲ್‌ನ Powers and Functions ಬಗ್ಗೆ ಇಲ್ಲಿ ಹೇಳಿರುವುದನ್ನು ನೋಡುವುದಾದರೆ, "To make regulations regarding course of study, in so far they are not covered by the ordinances" I want to know why students should not be associated with that ? Then it is said —

> "To make regulations regarding the scheme of exminations and conditions on which the students shall be admitted to the examinations, degrees, diploms, certificates or other academic distinctions.'

I donot' know why the students should not be associated in this aspect ? ಒಂದು ಸಲ ತಾವು ವಿದ್ಯಾರ್ಥಿಗಳ ಪ್ರತಿನಿಧಿಗಳಿಗೆ ಅವಕಾಶ ಕೊಟ್ಟುನೋಡಿ ಏಕೆಂದರೆ ಪರಿಸ್ಥಿತಿ ಈಗ ಬದಲಾವಣೆಯಾಗಿದೆ. ಮೊದಲಿನ ಸ್ಥಿತಿ ಈಗ ಇಲ್ಲ. ಇಂದಿನ ವಿದ್ಯಾರ್ಥಿಗಳು, ನಮಗಿಂತ ಹೆಚ್ಚು ವಿಷಯಗಳನ್ನು ತಿಳಿದುಕೊಂಡಿರುತ್ತಾರೆ, ಈಗ ಉದಾಹರಣೆಗೆ ಹೇಳಬೇಕೆಂದರೆ, ನಾನು ಬಿ.ಇ ಪದವೀಧರನಾದರೂ ಸಹ ಎಲೆಕ್ಟ್ರಾನಿಕ್ ವಿಷಯದ ಬಗ್ಗೆ ನನ್ನ ಮಗ ನನಗಿಂತ ಹೆಚ್ಚು ತಿಳಿದುಕೊಂಡಿದ್ದಾನೆ. ವಿದ್ಯಾರ್ಥಿಗಳ ಒಂದು ಗುಣಮಟ್ಟ ಮತ್ತು ಕ್ವಾಲಿಟಿ ಇಂದು ಮೊದಲಿಗಿಂತ ಸುಧಾರಿಸಿದೆ. ಕೆಲವು ಸಂದರ್ಭಗಳಲ್ಲಿ ಅವರು ಮುಷ್ಕರ ನಡೆಸಿರಬಹುದು, ಆದರೆ ಯಾವಾಗಲೂ ಅವರು ಅದೇ ದೃಷ್ಟಿ ಇಟ್ಟುಕೊಂಡಿರುತ್ತಾರೆ ಹೇಳುವುದು ತಪ್ಪು, ಆದಕಾರಣ ಅವರಿಗೂ ಅಲ್ಲಿ ಪ್ರಾತಿನಿಧ್ಯ ಕೊಡಬೇಕು. ಆ ರೀತಿ ಕೊಟ್ಟಿದ್ದೇ ಆದರೆ ನಿಮ್ಮ ಕೆಲಸಕಾರ್ಯಗಳು ಇನ್ನೂ ಸುಸೂತ್ರವಾಗಿ ನಡೆಯುತ್ತವೆ. ಒಂದು ಪಕ್ಷ ನಿಮ್ಮ ಸಲಹೆಗಳನ್ನು ಅವರು ಒಪ್ಪದಿದ್ದರೂ ಸಹ ನಿಮಗೆ ಯಾವ ತೊಂದರೆಯೂ ಬರುವುದಿಲ್ಲ ಏಕೆಂದರೆ ನಿಮ್ಮವರೆ ಮೆಜಾರಿಟಿಯಲ್ಲಿರುತ್ತಾರೆ. ಈ ದೃಷ್ಟಿಯಿಂದಲಾದರೂ ಅವರಿಗೆ ಅಲ್ಲಿ ಪ್ರಾತಿನಿಧ್ಯ ಕೊಡಬೇಕು. ಯಾವುದೇ ನಿರ್ಣಯ ತೆಗೆದುಕೊಳ್ಳಬೇಕಾದರೂ ಸಹ ಉಪಾಧ್ಯಾಯರು ವಿದ್ಯಾರ್ಥಿಗಳು ಮತ್ತು ಇತರರು ಸೇರಿ ಅಂದರೆ ಮೂರು ವರ್ಗದವರೂ ಸೇರಿ ತೆಗೆದುಕೊಂಡರೆ ಮಾತ್ರ ನಮ್ಮ ವಿದ್ಯಾಭ್ಯಾಸದ ಪದ್ಧತಿ ಚೆನ್ನಾಗಿ ನಡೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆದಕಾರಣ ಅವರಲ್ಲಿ ಭಾಗವಹಿಸಬೇಕೆಂದು ನಾನು ಹೇಳುತ್ತಿರುವುದು ವಿದ್ಯಾರ್ಥಿಗಳಿಗೆ ಪರಿಣಿತರ ಮಾತನಾಡುವುದಕ್ಕೆ ಬಂದಿರಬಹುದು, ಮತ್ತು ಅವರಲ್ಲಿ ಕೆಲವು ನ್ಯೂನ್ಯತೆಗಳು ಇರಬಹುದು, ಆದರೆ ಅವರಿಗೆ ಅಲ್ಲಿ ಒಂದು ಅವಕಾಶ ಕೊಟ್ಟಿದ್ದೇ ಆದರೆ ಅವರಿಗೆ ಸೆನ್ಸ್ ಆಫ್ ಇನ್‌ವಾಲ್ವ್‌ಮೆಂಟ್ ಏನು ಇರುತ್ತದೆ ಅದನ್ನು ಕಡಿಮೆ ಮಾಡುವುದಕ್ಕೆ ಅವಕಾಶವಿರುತ್ತದೆ. ಮತ್ತು ಅವರನ್ನು ಮುಂದೆ ತೆಗೆದುಕೊಂಡು ಹೋಗುವುದಕ್ಕೂ ಒಂದು ಅವಕಾಶವಿರುತ್ತದೆ. ಈ ದೃಷ್ಟಿಯಿಂದ ಅಕ್ಯಾಡಮಿಕ್ ಕೌನ್ಸಿಲ್‌ನಲ್ಲಿ ಅವರಿಗೆ ಪ್ರಾತಿನಿಧ್ಯ ಇರಬೇಕೆಂದು ನಾನು ಹೇಳುತ್ತಿರುವುದು.

ಈ ದಿನ ನಾವು ಯೋಚನೆ ಮಾಡಿದರೆ ವಿದ್ಯಾರ್ಥಿಗಳಿಗೆ ಇದರಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟರೆ ತೊಂದರೆಯಾಗಬಹುದು ಎಂದು ತಾವು ಊಹಿಸಿದ್ದೀರಿ. ಆದರೆ ಇವತ್ತಿನ ವಿದ್ಯಾರ್ಥಿಗಳು ಆ ರೀತಿಯಲ್ಲಿ ಅವರು ನಮಗಿಂತ ಬಹಳ ತಿಳಿದುಕೊಂಡಿದ್ದಾರೆ. ತಾವು ಕೂಡ ಇದರಲ್ಲಿ ಸ್ಪಷ್ಟವಾಗಿ ಅವರಿಗೆ ಅವಕಾಶವ ಕೊಟ್ಟಿಲ್ಲವೆಂದು ಇದೇ ಸಂದರ್ಭದಲ್ಲಿ ಅದೇ ವಿಷಯದಲ್ಲಿ ಇನ್ನೊಂದು ಅವಕಾಶ ಏನು ಮಾಡಿದ್ದೀರಿ ಎಂದರೆ ಸ್ಟೂಡೆಂಟ್ಸ್ ಮತ್ತು ಲೆಕ್ಚರರ್ಸ್‌ಗಳು ಯೂನಿವರ್ಸಿಟಿ ವಿದ್ಯಾಭ್ಯಾಸ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಸ್ಟಾಚುಟರಿ ಬಾಡಿ ಅಂದರೆ ಟೀಚರ್ಸ್ ಕೌನ್ಸಿಲ್ ಮತ್ತು ಸ್ಟೂಡೆಂಟ್ಸ್ ಕೌನ್ಸಿಲ್ ಈ ಎರಡು ಇರಬೇಕು ಏತಕ್ಕೆಂದರೆ ಅವರು ಅಡ್ವೈಸ್ ಮಾಡಿ ತಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಸಹಾಯವಾಗುತ್ತದೆ. ಇದನ್ನು ಕೂಡ ಮಾಡುವುದಕ್ಕೆ ಯೋಚನೆ ಮಾಡಿದ್ದೀರಿ. ಇನ್ನು ಸ್ಟೂಡೆಂಟ್ಸ್ ವೆಲ್‌ಫೇರ್ ಬೋರ್ಡ್ ಮಾಡಿದ್ದೀರಿ. ಆದರೆ ಅದು ಸಾಲದು. ಕೆಲಸ ಸಾಧಾರಣವಾಗಿ ನಡೆಯುತ್ತಿದ್ದರೂ, ಒಬ್ಬ ಅಧಿಕಾರಿಯನ್ನು ನೇಮಿಸಿ ವಿಷಯ ಸಂಗ್ರಹಣೆ ಮಾಡಿ, ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ.

ಕೆಲಸವೇನೋ ಸುಸೂತ್ರವಾಗಿ ನಡೆದುಕೊಂಡು ಹೋಗಬಹುದು. ಪತ್ರಪುಸ್ತಕ, ಲೈಬ್ರರಿ, ಕಲ್ಚರಲ್ ಅಕ್ಟಿವಿಟೀಸ್, ಫೀಸ್ ವಸೂಲ ಇಂತಹವುಗಳಿಗೆಲ್ಲಾ ಅವಕಾಶವಾಗುತ್ತದೆ.

ಇನ್ನೊಂದು ವಿಷಯ, ನಮ್ಮ ಡೆಮೋಕ್ರಾಟಿಕ್ ಫಂಕ್ಷನ್ ಬಗ್ಗೆ ಹೇಳಬೇಕಾಗಿದೆ. ಇದರಲ್ಲಿ ಟ್ರಾನ್ಸ್‌ಫರ್ ಒಂದು ಬಗ್ಗೆ ಕ್ಲಾಸ್ ಹಾಕಿದ್ದೀರಿ ಕ್ಲಾಸ್ ೫೨ ಟ್ರಾನ್ಸ್‌ಫರ್ಸ್ ಆಫ್ ಎಂಪ್ಲಾಯೀಸ್. ಯೂನಿವರ್ಸಿಟಿಯಲ್ಲಿ ಯಾರನ್ನು ಎಲ್ಲಿಗೆ ಬೇಕಾದರೂ ಟ್ರಾನ್ಸ್‌ಫರ್ ಮಾಡಬಹುದು. ನಾನು ಅದನ್ನು ಒಪ್ಪುತ್ತೇನೆ. ಟ್ರಾನ್ಸ್‌ಫರ್ ಮಾಡತಕ್ಕ ಹಕ್ಕು ಇರಬೇಕು, ಆದರೆ ಇದಕ್ಕೆ ಕೆಲವು ಪ್ರೊಫೆಸರ್ಸ್, ಲೆಕ್ಚರರ್ಸ್ ಟೀಚರ್ಸ್ ವಿರೋಧವಾಗಿರಬಹುದು. ನಾನೂ ಕೂಡ ಸೆನೆಟ್‌ನಲ್ಲಿ ಇದ್ದವನು ಒಂದು ಕಡೆ ಪ್ರೊಫೆಸರ್ ಅವರ ಹಿತಾಸಕ್ತಿಗಳಿಗೆ ಅನುಗುಣವಾಗಿ ಕೆಲಸಮಾಡುವುದರ ಬಗ್ಗೆ ತಿಳಿದುಕೊಂಡಿದ್ದೇನೆ. ಜೊತೆಗೆ ಅನೇಕ ಸರಿ ಈ ಸಭೆಯಲ್ಲಿ ಕೂಡ ಇದು ಚರ್ಚೆಗೆ ಬಂದಿದೆ. ಆ ಒಂದು ಅಫೇರ್ಸ್ ಮೇಲೆ ಒಂದು ರಿಪೋರ್ಟ್ ಕೂಡ ಬಂದಿದೆ. ಆ ರಿಪೋರ್ಟನ್ನು ಓದಿದವರು ಯಾರೂ ಇದನ್ನು ವಿರೋಧಿಸುವುದಕ್ಕೆ ಹೋಗುವುದಿಲ್ಲ. ಸಾಧ್ಯವೂ ಇಲ್ಲ. ಯಾರನ್ನು ಎಲ್ಲಿಗೆ ಹಾಕಿದರೂ ಹೋಗಲೇ ಬೇಕು. ಆದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಇದು ಅಟಾನಮಸ್ ಬಾಡಿ. ಅದರ ಬಗ್ಗೆ ವಾಚ್ ಮಾಡುವುದು ಸರಿಯಿಲ್ಲ. ಇನ್ನು ಒಂದು ಕ್ಲಾಸ್ ಇರಬೇಕಾಗುತ್ತದೆ. ಅದು ಏನೆಂದರೆ ಉದಾಹಾರಣೆಗೆ ಕ್ಲಾಸ್ ೪ ಮತ್ತು ೩ ಇವರನ್ನು ಟ್ರಾನ್ಸ್‌ಫರ್ ಮಾಡುವುದು ಇದೆ. ಆದರೆ ಕ್ಲಾರ್ಕ್ ಲ್ಯಾಬೋರೇಟರಿ ಅಸಿಸ್ಟೆಂಟ್, ಜವಾನರು ಇಂತಹ ಕೆಳದರ್ಜೆ ನೌಕರರನ್ನು ಟ್ರಾನ್ಸ್‌ಫರ್ ಮಾಡಿದರೆ ಆದರಿಂದ ಬಹಳ ತೊಂದರೆಯಾಗುತ್ತದೆ ಅದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಇವರನ್ನು ಬಿಟ್ಟು ಎಂದರೆ ನಾನ್ ಟೀಚಿಂಗ್ ಸ್ಟಾಫ್ ಬಿಟ್ಟು ಉಳಿದವರನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಅವಕಾಶ ಮಾಡಬೇಕು. ಉದಾಹರಣೆಗೆ ಕ್ಲಾಸ್ ೪ ಅವನನ್ನು ತೆಗೆದುಕೊಂಡು ಹೋಗಿ ಹುಬ್ಬಳ್ಳಿ ಅಥವಾ ಧಾರವಾಡಕ್ಕೆ ಅಥವಾ ಗುಲ್ಬರ್ಗಾಕ್ಕೆ ಹಾಕಿದರೆ ಅವನಿಗೆ ಬರುವ ವರಮಾನದಲ್ಲಿ ಅವನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗುವುದಕ್ಕೂ ಆಗುವುದಿಲ್ಲ ಬಿಟ್ಟು ಇರವುದಕ್ಕೂ ಆಗುವುದಿಲ್ಲ. ಆದ್ದರಿಂದ ಅವನು ಎಷ್ಟರ ಮಟ್ಟಿಗೆ ಕೆಲಸಕಾರ್ಯಗಳನ್ನು ಆಸಕ್ತಿಯಿಂದ ಮಾಡುತ್ತಾನೆ ಯೋಚನೆಮಾಡಿ ಆದ್ದರಿಂದ ಈ ಕ್ಲಾಸ್ ೪ ಮತ್ತು ೩ಕ್ಕೆ ಇದನ್ನು ಅನ್ವಯಿಸಬಾರದು.

ಇನ್ನೊಂದು ಒಳ್ಳೆಯ ಕ್ಲಾಸ್ ಹಾಕಿದ್ದೀರಿ ಅದು ಸಾಗತಾರ್ಹ (ಚಾಪ್ಟರ್ ೮) ಏತಕ್ಕೆ ಸಾಗತಾರ್ಹ ಎಂದರೆ ಹಾವು-ಕೀರ ಕಚ್ಚಾಡುವಂತೆ ಕೋಮುವಾರ ಮನೋಭಾವನೆ ಜಾಸ್ತಿಯಾಗಿರುವುದರಿಂದ ಜನರು ಮೇಲಿಂದ ಮೇಲೆ ಬೀಳುತ್ತಿದ್ದಾರೆ. ಆದ್ದರಿಂದ ಈಗ ತಾವು ಮಾಡಿರುವುದು ಬಹಳ ಸೂಕ್ತವಾದುದು. ಒಂದೊಂದು ವಿಶ್ವವಿದ್ಯಾನಿಲಯದಲ್ಲೂ ಒಂದೊಂದು ರೀತಿಯ ಕಾನೂನು ಇತ್ತು. ಇದರ ಬಗ್ಗೆ ಅನೇಕರು ಅನೇಕ ದಿವಸಗಳಿಂದ ಅಭಿಪ್ರಾಯವನ್ನು ವ್ಯಕ್ತಪಡಿಸಿಕೊಂಡೆ ಬರುತ್ತಾ ಇದ್ದಾರೆ. ತಾವು ಈಗಲಾದರೂ ಈ ನಾನ್ ಮಿನಿಸ್ಟೀರಿಯಲ್ ಮತ್ತು ಮಿನಿಸ್ಟೀರಿಯಲ್ ಸ್ಟ್ಯಾಫ್ ಬಗ್ಗೆ ಮಾಡಿರುವುದು ಬಹಳ ಸಮಂಜಸವಾಗಿದೆ. ಮೈಸೂರು ಯೂನಿವರ್ಸಿಟಿಯಲ್ಲಿ ಮಾನ್ಯ ಲಿಂಗಪ್ಪನವರು ಇಲ್ಲಿ ಇಲ್ಲ ಇದ್ದಿದ್ದರೆ ಅವರಿಗೆ ಗೊತ್ತಿತ್ತು, ಆದರೆ ಮಾನ್ಯ ಶಿವಯ್ಯನವರು ಇದ್ದಾರೆ, ಅವರಿಗೆ ಗೊತ್ತಿರಬಹುದು

ಸಿಂಡಿಕೇಟ್‌ನವರು ಪ್ಯಾನಲ್ ಕಳುಹಿಸುತ್ತಾರೆ ಅದರ ಪ್ರಕಾರ ವೈಸ್ ಚಾನ್ಸಲರ್ ಅವರು ಅಪಾಯಿಂಟ್ ಮಾಡುತ್ತಾರೆ. ಮೈಸೂರು ಯೂನಿವರ್ಸ್ಟಿಯಲ್ಲಿರುವುದೇ ಒಳ್ಳೆಯದು. ಅದೇ ರೀತಿ ಮಾಡುವುದು ಸರಿ. ಈಗ ಇದರಲ್ಲಿ ಇರುವ ರೀತಿಯಲ್ಲಿ ಮಾಡಿರುವುದು ಸರಿಯಲ್ಲ ಮತ್ತು ಒಳ್ಳೆಯದಲ್ಲ.

SRI K. PUTTASWAMY.—As far as I know appointments are made on the recommendation of the Board consisting of experts who are not in any way connected with the university. But the allegation made against the Board is that the recommendation itself is perverse.

SRI M. S KRISHNAN.—If university becomes arena of one vested interest with another interest what can we do ?

ಇನ್ನೊಂದು ವಿಷಯ ಹೇಳಬೇಕೆಂದರೆ ಚಾಪ್ಟರ್ (೯) ಇದು ಬಹಳ ಮುಖ್ಯವಾದದು ಇದನ್ನು ಸಮಗ್ರವಾಗಿ ಯೋಚನೆ ಮಾಡಬೇಕು. ಇದು ಏನೆಂದರೆ Affiliation of Colleges and Recognition of Institutions. ಈ ಪ್ರೈವೇಟ್ ಕಾಲೇಜುಗಳ ಹಾವಳಿ ಬಗ್ಗೆ ಅನೇಕ ಸಾರಿ ಇಲ್ಲಿ ಚರ್ಚೆಯಾಗಿದೆ ಅವರು ಸಿಕ್ಕಾಪಟ್ಟೆ ವಸೂಲಿಮಾಡುವುದು, ಕ್ಯಾಪಿಟೇಷನ್ ಮತ್ತು ಅಬ್‌ನಾರ್ಮಲ್ ಡೋನೇಷನ್ ವಸೂಲಿ ಮಾಡುವುದು ಹೀಗೆಲ್ಲಾ ಮಾಡಿ ಹಣ ಸುಲಿಗೆ ಮಾಡುತ್ತಿದ್ದಾರೆ. ಮಾನ್ಯ ಸಿದ್ದವೀರಪ್ಪನವರು ಒಂದು ಸಾರಿ ಈ ಮನೆಯಲ್ಲಿಯೇ ಮಣಿಪಾಲ್ ಕಾಲೇಜಿನ ಬಗ್ಗೆ ಮಾತನಾಡಿದರು. ಒಂದೊಂದು ಕಡೆ ಒಂದೊಂದು ರೀತಿ ಮಾಡುತ್ತಿದ್ದಾರೆ. ಇದರ ಬಗೆ ಕೇಂದ್ರ ಸರ್ಕಾರದ ತೀರ್ಮಾನಕ್ಕೆ ಬಿಟ್ಟುಬಿಟ್ಟಿದ್ದೇವೆ ಅವರು ತೀರ್ಮಾನ ಮಾಡುತ್ತಾರೆಂದು ಹೇಳಿದರು. ಇದರ ಆಳ್ವಿಕೆ ಮೊಗಲು ಸಾಮ್ರಾಜ್ಯ ಶಾಹಿ ಆಳ್ವಿಕೆಯಾಗಿದೆ.

ಪ್ರೈವೇಟ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಕೆಲವರು ಮೆಡಿಕಲ್ ಕಾಲೇಜಿನವರು ಇದ್ದಾರೆ. ಬೇರೆಯುವರೂ ಸಹ ಆ ರೀತಿಯಾಗಿ ಇದ್ದಾರೆಂದು ನನಗೆ ತಿಳಿದು ಬಂದಿದೆ. ಅವರಲ್ಲಿ ಅನೇಕರು ಬಡವರು ಇದಾರೆ. ಕೆಲವು ಕಾಲೇಜುಗಳಲ್ಲಿ ಬಹಳ ಚೆನ್ನಾಗಿ ನಡೆಯುತ್ತಾ ಇದೆ. ನಾನು ಮಲ್ಲೇಶ್ವರಂ ಕ್ಷೇತ್ರದಿಂದ ಎಲೆಕ್ಟ್ ಆದರೂ ನಾನು ಹುಟ್ಟಿದ್ದು ಬಸವನಗುಡಿ. ನಾನು ಓದಿದ್ದು ನ್ಯಾಷನಲ್ ಕಾಲೇಜಿನಲ್ಲಿ. ಆದರೆ ಈಗ ಮಾನ್ಯ ಶ್ರೀ ನರಸಿಂಹಯ್ಯನವರು ವೈಸ್ ಚಾನ್ಸಲರ್ ಆಗಿರುವುದು ನನಗೆ ಬಹಳ ಸಂತೋಷ. ಅಂತಹವರು ಇರುವುದರಿಂದಲೇ ಕಾಲೇಜುಗಳು ಈಗ ಬಹಳ ಚೆನ್ನಾಗಿ ನಡೆಯುತ್ತಿವೆ. ಅವರ ಮೇಲ್ವಿಚಾರಣೆಯಲ್ಲಿ ಎಲ್ಲ ಕಾಲೇಜುಗಳು ಮುಂದುವರಿಯುವುದಾದರೆ ಆದಕ್ಕೆ ನಮ್ಮ ವಿರೋಧವಿಲ್ಲ. ಏಕೆಂದರೆ One swallow does not make a summer. ಇವತ್ತಿನ ದಿವಸ ಬೇಕಾದಷ್ಟು ಕೆಟ್ಟ ಹುಳುಗಳು ಇವೆ. ಈ ವಿಚಾರವನ್ನು ಪ್ರೈವೇಟ್ ಎಜುಕೇಶನಲ್ ಇನ್‌ಸ್ಟಿಟ್ಯೂಷನ್ಸ್ ಬಗ್ಗೆ ಹೇಗೆ ನಿರ್ಧಾರ ಮಾಡುತ್ತೀರಿ ? ಪ್ರೈವೇಟ್ ಕಾಲೇಜುಗಳನ್ನು ಪೂರ್ತಿಯಾಗಿ ಸರ್ಕಾರವೇ ತೆಗೆದುಕೊಳ್ಳಬೇಕೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆದ್ದರಿಂದ ಈಗ ಪ್ರೈವೇಟ್ ಕಾಲೇಜುಗಳನ್ನು ಕೂಡಲೇ ಅಬಾಲಿಷ್ ಮಾಡಬೇಕೆಂದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ನಮ್ಮ ಪಕ್ಷದ ನಿಲುವು ಕೂಡ ಅದೇ ಆಗಿದೆ. ಅದೇ ಅಲ್ಟಿಮೇಟ್ ಆಗಿದೆ. ಸರ್ಕಾರ ಅವನ್ನೆಲ್ಲಾ ತೆಗೆದುಕೊಂಡು ರಾಷ್ಟ್ರೀಕರಣ ಮಾಡಬೇಕೆಂದು ನಾನು ಹೇಳುತ್ತೇನೆ. ಅದು ಈಗ ತಕ್ಷಣಕ್ಕೆ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಕೆಲವು ಖಾಸಗೀ ಶಾಲೆಗಳಲ್ಲಿ ಎಲ್ಲ ತರಹ ಪ್ರಚಾರವಿರತಕ್ಕ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್ ಸಹ ಇವೆ. ಅಂತಹವು ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳವಾಗಿ ಇವೆ. ಮೈನರ್ ಕಮ್ಯೂನಿಟಿಗೆ ಸೇರಿದಂಥ ಕೆಲವು ಇನ್‌ಸ್ಟಿಟ್ಯೂಷನ್ಸ್ ಬೇರೆ ಇವೆ. ಘಟನಾವಳಿಗಳ ಪ್ರಕಾರ ಮೈನಾರಿಟೀಸ್‌ಗೆ ಕೆಲವು ಹಕ್ಕು ಭಾಧ್ಯತೆಗಳನ್ನು ಕೊಟ್ಟಿದ್ದಾರೆ. ಆ ರೀತಿ ಇರುವಾಗ ಅಂತಹವರ ಬಗ್ಗೆ ಸರ್ಕಾರ ಸ್ವಲ್ಪ ಹುಷಾರಾಗಿ ನಡೆದುಕೊಳ್ಳಬೇಕಾಗಿದೆ. ಆ ವಿಚಾರ ತಮಗೂ ಗೊತ್ತಿದೆ. ಒಂದುಸಾರಿ ಅವನ್ನು ಸರ್ಕಾರ ಟೇಕ್ ಓವರ್ ಮಾಡುತ್ತೇವೆಂದು ಹೇಳಿದರೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲೇ ಬೇಕಾಗುತ್ತದೆ. ಕೇರಳಾ ಸರ್ಕಾರದ ಉದಾಹರಣೆಯನ್ನು ತೆಗೆದುಕೊಂಡು ಮಾತನಾಡಿದರೆ, ಅಲ್ಲಿನ ಸರ್ಕಾರದಲ್ಲಿ ಏನಾದರೂ ತಪ್ಪು ಮಾಡಿದ್ದರೆ ತಪ್ಪು ಮಾಡಲಿಲ್ಲವೆಂದು ಹೇಳುವುವರು ಕಮ್ಯೂನಿಸ್ಟ್ ಪಾರ್ಟಿಯವರಲ್ಲ, ತಪ್ಪು ಮಾಡಿದ್ದನ್ನು ತಪ್ಪು ಎಂಬುದಾಗಿ ಅವರು ಒಪ್ಪಿಕೊಳ್ಳುತ್ತಾರೆ

ಶ್ರೀ ಕಾಗೋಡು ತಿಮ್ಮಪ್ಪ.—ಹುಷಾರು ಎಂಬುದಾಗಿ ಮಾನ್ಯ ಸದಸ್ಯರು ಹೇಳಿದರು. ಅದೇನೆಂಬುದನ್ನು ಹೇಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅದು ಮಾನ್ಯ ಸದಸ್ಯರಿಗೇ ಗೊತ್ತಿದೆ. ಈಗ ಮೈನಾರಿಟಿಗಳಿಗೆ ಕೆಲವು ಘಟನಾವಳಿಗಳ ಪ್ರಕಾರ ಕೆಲವಾರು ಹಕ್ಕುಗಳಿವೆ ಅದು ತಮಗೂ ಗೊತ್ತಿದೆ. ಅದು ಎಜುಕೇಷನ್ ಇನ್‌ಸ್ಟಿಟ್ಯೂಷನ್ಸ್ ನಡೆಸುವ ಹಕ್ಕು. ಅಂದಮೇಲೆ ಈಗ ಮೈನಾರಿಟೀಸ್ ನಡೆಸುತ್ತಾ ಇರುವುದನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಶಾಸನ ಮಾಡುವುದು ಸಾಧುವಾದುದಲ್ಲ. ಅದು ಸದ್ಯಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ಒಂದು ತಿದ್ದುಪಡಿ ಮಾಡುವುದೂ ಕೂಡ ಸಮಂಜಸವೂ ಅಲ್ಲ. ಮೈನಾರಿಟಿಗಳಿಗೆ ಹಕ್ಕು ಇವತ್ತಿನ ಪರಿಸ್ಥಿತಿಯಲ್ಲಿ ಕೊಡಬೇಕಾಗಿದೆ. ಈ ದೃಷ್ಟಿಯಿಂದ ಅವರು ನಡೆಸುತ್ತಿರುವ ಇನ್‌ಸ್ಟಿಟ್ಯೂಷನ್‌ಗಳನ್ನು ತೆಗೆದುಕೊಳ್ಳಬೇಕೋ ಅಥವಾ ಅವರು ಏನು ಬೇಕಾದರೂ ಮಾಡಿಕೊಂಡು ಹೋಗಲಿ ಎಂದು ಬಿಡಬೇಕೋ ಎಂಬ ಬಗ್ಗೆ ಒಂದು ತೀರ್ಮಾನ ಮಾಡಬೇಕು. ಅವರಿಷ್ಟದಂತೆ ಹೋಗುವುದಕ್ಕೆ ಖಂಡಿತವಾಗಿ ಬಿಡಬಾರದು. ಅದಕ್ಕಾಗಿ ಸರಿಯಾದ ಒಂದು ಮ್ಯಾನೇಜ್‌ಮೆಂಟ್ ಇರಬೇಕು. ಒಂದು ಗೌರ್ನಿಂಗ್ ಬಾಡಿಯೇ ಇರಬೇಕು. ಅದರಲ್ಲಿ ಸರ್ಕಾರದ ಪ್ರತಿನಿಧಿಗಳೂ, ಉಪಾಧ್ಯಾಯರುಗಳೂ ಮತ್ತು ವಿದ್ಯಾರ್ಥಿಗಳ ಪ್ರತಿನಿಧಿಗಳೂ ಸಹ ಇರಬೇಕು. ಈ ತರಹ ಇರತಕ್ಕ ಇನ್‌ಸ್ಟಿಟ್ಯೂಷನ್ಸ್ ನಮ್ಮ ರಾಜ್ಯದಲ್ಲಿರಬೇಕು. ಮೈನಾರಿಟಿ ಇನ್‌ಸ್ಟಿಟ್ಯೂಷನ್ಸ್ ಇರುವಂತಹ ಕಾಲೇಜುಗಳಲ್ಲಿ ಬರೀ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ಸ್ ನಡೆಸುತ್ತೇವೆಂದು ಹೇಳುವಂತಹ ಒಂದು ಸನ್ನಿವೇಶದಲ್ಲಿ ಒಂದು ರೀತಿಯ ನಿಯಂತ್ರಣವಿರಬೇಕು. ಆದರೆ ಈಗಿನ ಸಂದರ್ಭದಲ್ಲಿ ತಕ್ಷಣ ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. Private Colleges must be taken over by Government. That must be the ultimate goal.

ಶ್ರೀ ಕಾಗೋಡು ತಿಮ್ಮಪ್ಪ.—ಇತ್ತೀಚಿನ ಇಂಟರ್‌ಪ್ರಿಟೇಷನ್ ಪ್ರಕಾರ ವೀರಶೈವರಿಗೂ ಕೂಡ ಒಂದು ಸೆಪರೇಟ್ ರಿಲಿಜಿಯಸ್ ಬರಬಹುದು. ಅದು ಆಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರೈವೇಟ್ ಕಾಲೇಜಸ್ ಬಗ್ಗೆ ನಿಮ್ಮ ೯ನೇ ಚಾಪ್ಟರ್‌ನಲ್ಲಿ ಏನು ಹೇಳಿದ್ದೀರಿ ಅವುಗಳಲ್ಲಿ ಕೆಲವು ಬಹಳ ಒಳ್ಳೆಯದಾಗಿವೆ. ಆದರೂ ಅನೇಕ ಅಂಶಗಳನ್ನು ಬಿಟ್ಟಿದ್ದೀರಿ. ಪ್ರೈವೇಟ್ ಕಾಲೇಜುಗಳಿಗೆ ಯಾವರೀತಿ ಅಫಿಲಿಯೇಷನ್ ವಿತ್ ಡ್ರಾ ಮಾಡಬಹುದು, ಅದನ್ನು ಯಾವ ರೀತಿ ಮಾಡಬಹುದೆಂಬುದಾಗಿ ಎರಡೂ ವಿಚಾರಗಳನ್ನೂ ಹೇಳಿದ್ದಾರೆ. ಈ ವಿಚಾರದಲ್ಲಿ ಏನಾಗುತ್ತದೊ ಏನೋ ಎಂಬ ಹೆದರಿಕೆಯಿಂದ ಹಿಂಜರಿಯುತ್ತಾರೆ. ಇದರ ಬಗ್ಗೆ ನಿಯಂತ್ರಣ ಪೂರ್ತಿ ಇರಬೇಕು.

ಶ್ರೀ ಎ. ಮಲ್ಲಿಕಾರ್ಜುನಸ್ವಾಮಿ.—ಮುಂದೆ ಎಜುಕೇಷನ್ ಮೇಲೆ ಇಲ್ಲಿ ಒಂದು ಸಮಗ್ರವಾದ ಬಿಲ್ ಬರುತ್ತದೆ. ಅದರಲ್ಲಿ ಇದನ್ನೆಲ್ಲಾ ನೋಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಅದೂ ಸಹ ಇಲ್ಲಿ ಬಂದಿದ್ದರೆ ಬಹಳ ಚೆನ್ನಾಗಿತ್ತು. ಮತ್ತೊಂದು ಸಾರಿ ಈ ಕೇರಳ ಆಕ್ಟನ್ನು ತಮ್ಮ ಗಮನಕ್ಕೆ ತರಬೇಕೆಂದಿಚ್ಛಿಸುತ್ತೇನೆ. ಚಾಪ್ಟರ್ ೮ರ ಪ್ರಕಾರ ಪ್ರೈವೇಟ್ ಕಾಲೇಜುಗಳ ಬಗ್ಗೆ ನಮ್ಮಲ್ಲಿ ಬೇಕಾದಷ್ಟು ಮಾಡಿದ್ದಾರೆ. ಅವುಗಳಲ್ಲಿ ಕೆಲವು ಮಾತ್ರ ಮುಖ್ಯವಾದುವು.

ಬಹು ಮುಖ್ಯವಾಗಿ ನಮ್ಮಲ್ಲಿ ಗೌರ್ನಿಂಗ್ ಬಾಡಿ ಯಾವರೀತಿ ಇರಬೇಕು, ಪ್ರೈವೇಟ್ ಕಾಲೇಜು ಅಂದರೇನು, ಮ್ಯಾನೇಜ್‌ಮೆಂಟ್ ಹೇಗೆ ಇರಬೇಕು, ಟೀಚರ್ಸ್ ಅಪಾಯಿಂಟ್‌ಮೆಂಟ್, ಅಫಿಲಿಯೇಷನ್ ಆಫ್ ಕಾಲೇಜಸ್, ಕಂಡೀಷನ್ಸ್ ಅಂಡ್ ಕ್ವಾಲಿಫಿಕೇಷನ್ಸ್ ಆಫ್ ಟೀಚರ್ಸ್ ಕಂಡಿಷನ್ಸ್ ಆಫ್ ಸರ್ವಿಸ್ ಆಫ್ ಟೀಚರ್ಸ್ ಆಫ್ ಪ್ರೈವೇಟ್ ಕಾಲೇಜಸ್—ಇವೆಲ್ಲವನ್ನೂ ನೋಡಬೇಕು. Chapter VIII of Kerala University Act deals totally with the private Colleges. ಪ್ರೈವೇಟ ಕಾಲೇಜಸ್ ವಿಷಯವಾಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ನಾನ್ ಟೀಚಿಂಗ್ ಸ್ಟಾಫ್ ಬಗ್ಗೆಯೂ ಅದರಲ್ಲಿ ಬೇಕಾದಷ್ಟು ವಿವರಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಹೇಳಿರುವಂತೆ ಯಾರ್ಯಾರನ್ನು ಅಲ್ಲಿ ಅಸೋಸಿಯೇಟ್ ಮಾಡಬೇಕು, ಉಪಾಧ್ಯಾಯರ ಪರಿಸ್ಥಿತಿ ಏನು, ಅವರ ಸಂಬಳ ಸಾರಿಗೆಗಳ ಪರಿಸ್ಥಿತಿ ಏನು, ವಿದ್ಯಾರ್ಥಿಗಳೂ ಸಹ ಹೇಗಿರಬೇಕು, ಈ ರೀತಿಯಾದಂಥ ಸಮಗ್ರದೃಷ್ಟಿಯಿಂದ ಇರತಕ್ಕಂಥ ಚಾಪ್ಟರ್ ನಮ್ಮ ಇಂತಹ ಬಿಲ್ಲಿನಲ್ಲಿ ಇರಬೇಕು. ಮಾನ್ಯ ಮಂತ್ರಿಗಳು ಇಂಥಾದ್ದನ್ನೆಲ್ಲಾ ಇದರ ಬಗ್ಗೆ ಕಾಂಪ್ರಹೆನ್ಸಿವ್ ಬಿಲ್ ಈ ಸಭೆಯಲ್ಲಿ ಬಂದಾಗ ನೋಡಿ ಎಂಬುದಾಗಿ ಹೇಳಿದರು. ಅಷ್ಟು ಹೊತ್ತಿಗೆ ನೀವೂ ನಾವು ಇಲ್ಲಿ ಇರುತ್ತೇವೆಯೋ ಏನೋ ಎಂಬುದು ಒಬ್ಬರಿಗೂ ಗೊತ್ತಿಲ್ಲ. ಒಂದು ವೇಳೆ ಮುಂದೆ ಈ ಸಭೆಯಲ್ಲಿ ಬಂದರೂ ಹೇಗೆ ಆಗುತ್ತದೋ ಏನೋ ಅದೂ ಕೂಡ ಗೊತ್ತಿಲ್ಲ. ಒಂದುವೇಳೆ ಬಂತು, ಅದು ಎಲ್ಲಿಗೆ ಹೋಗಿ ಏನೇನು ಆಗುತ್ತದೋ ಅದೂ ಕೂಡ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಅಷ್ಟು ನಿರಾಶಾವಾದಿ ಆಗಬೇಡಿ.

ಶ್ರೀ ಎಂ. ಎಸ್. ಕೃಷ್ಣನ್.—ಆಶಾವಾದಿ ಜನರಲ್ಲಿ ನಾನೊಬ್ಬ. ಆದರೆ ನೀವು ನಡೆಯುತ್ತಿರುವ ರೀತಿನೀತಿ ನೋಡಿದರೆ ನನಗೆ ಅಷ್ಟು ನಿರಾಶೆ ಹುಟ್ಟುತ್ತದೆ.

ಮುಖ್ಯವಾಗಿ ನಾನು ಹೇಳಿದಹಾಗೆ ಅದನ್ನೆಲ್ಲಾ ಈ ಮಸೂದೆಯಲ್ಲಿ ಅಳವಡಿಸಬೇಕು. ಒಂದು ಸಾರಿ ಕಾಮನ್ ಯೂನಿವರ್ಸಿಟಿ ಬಿಲ್ ತರುವಾಗ ಏನೋ ಒಂದು ಸಣ್ಣ ತಿದ್ದುಪಡಿಯನ್ನು ತಂದಿದ್ದರೆ ಪರವಾ ಇಲ್ಲವೆಂದು ಹೇಳಬಹುದಾಗಿತ್ತು. ಪ್ರೈವೇಟ್ ಕಾಲೇಜಸ್ ಮತ್ತು ಗೌರ್ನಮೆಂಟ್ ಕಾಲೇಜಸ್ ಬಗ್ಗೆ ಅಫಿಲಿಯೇಷನ್ ಮತ್ತು ನಾನ್ ಅಫಿಲಿಯೇಷನ್ ವಿಚಾರದಲ್ಲಿ ಕಾನೂನುಗಳನ್ನು ಮಾಡುವಾಗ ಅದರಲ್ಲಿ ಕೆಲವು ಕಡೆಗಳಲ್ಲಿ ಅನುಮಾನ ಬರುವುದಕ್ಕೆ ಕಾರಣವಾಗಿದೆ. ಆದ್ದರಿಂದ ಅದರ ಬಗ್ಗೆ ಸರ್ಕಾರದವರು ಒಳ್ಳೆಯ ಗುರಿಯನ್ನು ಇಟ್ಟುಕೊಂಡರೆ ಬಹಳ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಲ್ಲಿ ಅಫಿಲಿಯೇಷನ್ ಅಲ್ಲದೆ ಇನ್ನೇನೂ ಮಾಡುವುದಕ್ಕಾಗುವುದಿಲ್ಲ.

SRI K. PUTTASWAMY.—University concerns itself to give affiliation : administrative matters and other things are dealt with by an authority which gives them grant, *i.e.*, the Government I would like to differ, because the Unive sity has got the right at affiliate Colleges or disaffiliate Colleges. University and also the Government helps the Colleges. Then should it not have any control over the private Colleges ?

4-30 P.M.

SRI K. PUTTASWAMY.—It is only the Government which provide funds for running Colleges. Therefore, it is the responsibility of the Government but not that of the University.

SRI M S. KRISHNAN —How that College is run is the concern of the University but not that of the Government. And how colleges should run is also an administrative matter. In fact your intention is to see that it is not only the academic matters but in every other matters relating to the administration of the Colleges. If it is possible in Kerala why it is not possible here ? If it is brought within the purview of the University it is possible. Recently I had been to Kerala. Even in regard to private Colleges experience is more important.

One more point I would like to bring to the notice of the Government is this. Under Clause 4, sub-section 17-it is stated like this :

" Organise, encourage, regulate and control University Unions pertaining to the students or to employees.— "

I think it is violative. You cannot control in that manner. ಎಂಪ್ಲಾಯಿಸ್ ಯೂನಿಯನ್ ಕಂಟ್ರೋಲ್ ಮಾಡುತ್ತೀರಿ. ರೆಗ್ಯುಲೇಟ್ ಮಾಡುತ್ತೀರಿ, ಎನ್‌ಕ್ರೇಜ್‌ಮೆಂಟ್ ಮಾಡುತ್ತೀರಿ, ಎನ್‌ಕ್ರೇಜ್‌ಮೆಂಟನ್ನು ಕೆಲವು ಸಂದರ್ಭದಲ್ಲಿ ಮಾಡಬೇಕಾಗಿ ಬರುತ್ತದೆ. ಒಪ್ಪಿಕೊಳ್ಳೋಣ, ಆದರೆ ಕೆಲವು ಸಂದರ್ಭಗಳಲ್ಲಿ ಕಂಟ್ರೋಲ್ ಮಾಡುವುದಕ್ಕೆ ಬರುತ್ತದೆಯೇ ? In Clause 4 sub-section 67 what you have stated is undemocratic and incorrect. Because, there should be more opportunities for the

students to involve in more and more activities. Similarly clause 6 which requires modification because it eliminates certain things. It may be open to all. Probably we must get an understanding that it is open to all classes but not groups. Definitely anything may happen in regard to political opinion. This is a feeling which one may get by reading this clause. I have given an amendment to that aspect. This is a most important a spect. On this basis you should have are look into this Bill. There are good points also which I have supported.

† ಶ್ರೀ ಎಸ್.ಎಂ. ಶ್ರೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸಮಗ್ರವಾದ ವಿಶ್ವವಿದ್ಯಾನಿಲಯದ ವರದಿಯ ಮೇಲೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗೆಳೆಯ ಕೃಷ್ಣನ್‌ರವರು ಮಾತನಾಡುತ್ತಾ ಪ್ರತಿಯೊಂದು ಹಂತದಲ್ಲೂ ಕೂಡ ಕೇರಳದ ವಿಚಾರವನ್ನು ಎತ್ತಿದರು : ಪಾಪ ಅವರಿಗೆ ಕೇರಳ ಎಂದರೆ ಕಾಶಿ ಇದ್ದಹಾಗೆ ಎಂದು ಅರ್ಥವಾಗುಗ್ತದೆ. ಕೇರಳದ ಪರಿಸ್ಥಿತಿಯೇ ಒಂದು ಇರುತ್ತದೆ ನಾವು ಸಂಪೂರ್ಣವಾಗಿ ಕೇರಳದ ಒಂದು ಕಾನೂನನ್ನೆ ಇಟ್ಟುಕೊಂಡುಮಾಡಲಿಕ್ಕೆ ಅಗುವುದಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ ಮತ್ತೆ ಆಕಾಡಮಿಕ್ ಕೌನ್ಸಿಲ್ ಬಗ್ಗೆ ಸಹ ಮಾನ್ಯ ಕೃಷ ನ್‌ರವರು ಮಾತನಾಡಿದರು. ಆ ವಿಚಾರವು ಸಹ ನಮ್ಮ ಕಮಿಟಿಯಲ್ಲಿ ಡಿಸ್ಕಷನಿಗೆ ಬಂದಿತು ಮಾನ್ಯ ಕೃಷ್ಣನ್‌ರವರು ಎತ್ತಿದ ಪ್ರಶ್ನೆಯನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಕಾಣಿಸುತ್ತದೆ. ಒಬ್ಬ ವಿದ್ಯಾರ್ಥಿಗೆ ಆಕಾಡಮಿಕ್ ಕೌನ್ಸಿಲ್‌ಗೆ ಪ್ರವೇಶ ಕೊಟ್ಟರೆ ಆವನು ಲೆಕ್ಚರರ್ಸ್ ಪ್ರಧ್ಯಾಪಕರುಗಳ ಮೇಲೆ ಚೆಸ್ ಒವರ್ ಮಾಡುವುದಕ್ಕೆ ಶುರು ಮಾಡುತ್ತಾನೆ.

ಶ್ರೀ ಎಂ.ಎಸ್. ಕೃಷ್ಣನ್.—ಸಿಂಡಿಕೇಟ್‌ನಲ್ಲಿದ್ದರೆ ಚಾಸ್ ಓವರ್ ಮಾಡುವುದಿಲ್ಲವೆ ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಸಿಂಡಿಕೇಟ್‌ನಲ್ಲಿರುತ್ತಾರೆ ಸರಿ. ಅದರ ಜೊತೆಗೆ ಆಕಾಡಮಿಕ್ ಕೌನ್ಸಿಲ್‌ನೊಳಗೂ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಟ್ಟರೆ ಏನಾಗುತ್ತದೆಂದರೆ ಸೆಂಟ್ರಲ್ ಕಾಲೇಜಿನಲ್ಲಿ ಹಿಂದೆ ಒಂದು ಸಲ ಏನಾಯಿತು ಎನ್ನುವುದು ಬಹುಶ : ಶ್ರೀ ಕೃಷ್ಣನ್‌ರವರಿಗೆ ನೆನಪಿರಬಹುದೆಂದು ಕಾಣಿಸುತ್ತದೆ. ಯಾವ ರೀತಿ ಒಬ್ಬ ವಿದ್ಯಾರ್ಥಿ ಪ್ರಾಧ್ಯಾಪಕರುಗಳನ್ನು ಹೆದರಿಸಿದ ಎನ್ನುವುದು ಇವತ್ತು ಎಲ್ಲರಿಗೂ ನೆನಪಿರತಕ್ಕಂಥ ವಿಚಾರ. ನಾವು ಇಷ್ಟೊಂದು ಪ್ರೋತ್ಸಾಹವನ್ನು ವಿದ್ಯಾರ್ಥಿಗಳಿಗೆ ಕೊಡಲಿಕ್ಕೆ ಸಾಧ್ಯವೇ ಎನ್ನುವುದನ್ನು ವಿಚಾರವಂತರು ಯೋಚನೆ ಮಾಡಬೇಕಾಗುತ್ತದೆ. ಇವತ್ತು ನಾವು ವಿದ್ಯಾರ್ಥಿಗಳಿಗೆ ಕೆಲವೊಂದು ವಿಚಾರಗಳಲ್ಲಿ ಪ್ರವೇಶ ಕೊಡಬಹುದು, ಪ್ರಾತಿನಿಧ್ಯ ಕೊಡಬಹುದು, ಇಡೀ ವಿಶ್ವವಿದ್ಯಾನಿಲಯಗಳ ಆಗು ಹೋಗುಗಳಲ್ಲಿ ಅವರಿಗೆ ಪ್ರಾತಿನಿಧ್ಯವನ್ನು ಕೊಟ್ಟರೆ ವಿದ್ಯಾಭ್ಯಾಸದ ಕ್ರಮ ಸರಿಯಾಗಿ ಆಗುವುದಲ್ಲ ಎನ್ನುವುದನ್ನು ನನ್ನ ಸ್ನೇಹಿತರಾದ ಕೃಷ್ಣನ್‌ರವರು ಅರ್ಥ ಮಾಡಿಕೊಂಡಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾಗಿ ನನಗೊಂದು ಆನುಮಾನ ಬಂತು ಅದು ಏನೆಂದರೆ ಪ್ರೊ ಚಾನ್ಸಲರ್ ಹುದ್ದೆಯು ಕೈ ಬಿಟ್ಟು ಹೋಗಿದೆ. ಅದು ಹೇಗೆ ಕೈ ಬಿಟ್ಟು ಹೋಯಿತು ಎಂದು ನನಗಂತೂ ಅರ್ಥವಾಗಿಲ್ಲ. ನಾನು ಎಲ್ಲಾ ಮೀಟಿಂಗಳಿಗೂ ಹಾಜರಾಗದ್ದೇನೆ ಅದು ಹೇಗೆ ಪ್ರೊ ಚಾನ್ಸಲರ್‌ರವರ ಹುದ್ದೆ ಕೈ ಬಿಟ್ಟು ಹೋಯಿತು ತಪ್ಪಿ ಹೋಯಿತು ? ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಅದನ್ನು ಮಾನ್ಯ ಮಂತ್ರಿಗಳವರು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI M. S. KRISHNAN.—Now here is an Hon'ble Member who said that he was present in all the meetings but do not know how this Pro-Chancellor was droped. It cast aspersions on all Members, because he was a Member of the Joint Select Committee also.

MR. DEPUTY SPEAKER.—It requires a very serious probe and I am not competent to do that.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಪ್ರತಿಯೊಂದು ಸಮಿತಿಯಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದೆ, ಆದ್ದರಿಂದ ಆ ಮಾತನ್ನು ಕೇಳಿದ್ದು. ಅಲ್ಲದೇ ಪ್ರೋ ಚಾನ್ಸಲರ್ ಬಗ್ಗೆ ಇರಲೇಬೇಕು ಎಂದು ನಾನು ಸಭೆಯಲ್ಲಿ ಹೇಳಿದ್ದೆ. ಈಗ ವಿಶ್ವವಿದ್ಯಾನಿಲಯಗಳಿಗೆ ಲಕ್ಷಾಂತರ ರೂಪಾಯಿಗಳನ್ನು

ಖರ್ಚು ಮಾಡುತ್ತಿದ್ದಾರೆ, ಅದರ ಮೇಲೆ ಹತೋಟಿ ಇರುವುದಿಲ್ಲ ಎನ್ನುವ ದೃಷ್ಟಿಯಿಂದ ನಾನು ಅದು ಇರಲೇ ಬೇಕು ಎಂದು ಸಮಿತಿಯಲ್ಲಿ ಹೇಳಿದ್ದೆ. ಈಗ ಪ್ರೋ ಚಾನ್ಸಲರ್ ನೇರವಾಗಿ ಭಾಗವಹಿಸದೇ ಇದ್ದರೂ, ಪ್ರೋ ಚಾನ್ಸಲರ್ ಹುದ್ದೆ ಇದ್ದರೆ, ನಮ್ಮ ವಿದ್ಯಾ ಮಂತ್ರಿಗಳ ಹತೋಟಿಗೆ ಬರುತ್ತದೆ, ಆಗ ವಿದ್ಯಾ ಮಂತ್ರಿಗಳು ಶಾಸನಸಭೆಗೆ ಉತ್ತರ ಕೊಡುವರಾಗುತ್ತಾರೆ. ಅದು ನೇರವಾಗಿ ಹತೋಟಿಗೆ ಬರುತ್ತದೆ ಆದ್ದರಿಂದ ಪ್ರೋ ಚಾನ್ಸಲರ್ ಹುದ್ದೆ ಇರಬೇಕೆಂದು ನಾನು ಸಮಿತಿಯಲ್ಲಿ ಮಾತನಾಡಿದ್ದೇನೆ, ಆದರೆ ಆ ಪ್ರೋ ಚಾನ್ಸಲರ್ ಹುದ್ದೆ ಹೇಗೆ ತಪ್ಪಿ ಹೋಯಿತೋ ಗೊತ್ತಿಲ್ಲ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತಾರೆ, ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇವೊತ್ತು ಮಾನ್ಯ ಕೃಷ್ಣನ್‌ವರು ಅನೇಕ ಕ್ಲಾಸ್‌ಗಳ ಮೇಲೆ ಮಾತನಾಡುತ್ತಾ ಹೇಳಿದರು. ಇಲ್ಲಿ ನಾನು ಮುಖ್ಯವಾದ ಒಂದು ವಿಚಾರ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ, ಇವೊತ್ತು ವೈಸ್ ಚಾನ್ಸಲರ್ ನೇಮಕ ಮಾಡುವುದಕ್ಕೆ ಒಂದು ಸಮಿತಿ ಮಾಡಿದ್ದೇವೆ, ಆದರೆ ಈ ಸ್ಥಳೀಯರಾದ ವೈಸ್ ಚಾನ್ಸಲರ್ ಇಟ್ಟುಕೊಳ್ಳುವುದು ಸೂಕ್ತವಲ್ಲ ಎಂದು ನನ್ನ ಅಭಿಪ್ರಾಯ. ನಾವು ಯಾವೊತ್ತು ಕೂಡ ಔಟ್‌ಸೈಡ್ ದಿ ಸ್ಟೇಟ್ ವೈಸ್ ಚಾನ್ಸಲರ್ ನೇಮಕ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ —ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳತಕ್ಕದು ಅವರು ಕೊಟ್ಟಿರತಕ್ಕ ವರದಿಗೆ ವಿರುದ್ಧವಾಗಿ ಮಾತನಾಡುತ್ತಿದ್ದಾರೆ.

Is he questioning the very wisdom of the Committee ?

SRI S. M. SHEERNALY CHANDRASHEKAR.—It is only a report.

SRI M. S. KRISHNAN.—I rise on a point of order. As a Member of the Joint Select Committee I want to know whether he has got a right to oppose the report of the very same Committee If he has given a note of dissent, I agree but I dont know about it.

MR. DEPUTY SPEAKER.—If the Hon'ble Member grows wiser since the presentation of the report, how can I help it ?

SRI K. PUTTASWAMY.—The report was submitted long back. It is not very recent. So much of water has flown under the bridge. Our members are always vigilant, alert and maintaining high sense of objectivity.

MR. DEPUTY SPEAKER.—There have been earlier precedents like this. This is not the first time. Hon'ble Member Mr. Krishnan may be knowing.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಕರ್.—ಇವೊತ್ತಿನ ದಿವಸ ಸ್ಥಳೀಯರಾದಂತವರನ್ನು ವೈಸ್ ಚಾನ್ಸಲರ್ ಆಗಿ ನೇಮಕಾತಿ ಮಾಡಬಾರದು. ಈ ಸ್ಥಳೀಯರಾಗಿರತಕ್ಕ ವ್ಯಕ್ತಿಗಳನ್ನು ಉಪ-ಕುಲಪತಿಗಳಾಗಿ ಮಾಡಿದರೆ ಸ್ಥಳೀಯವಾಗಿ ರಾಜಕೀಯ ಪ್ರವೇಶವಾಗುತ್ತದೆ. ಆದುದರಿಂದ ಈ ಉಪ ಕುಲಪತಿಗಳನ್ನು ನೇಮಕ ಮಾಡುವಾಗ ರಾಜ್ಯದ ಹೊರಗಿನವರನ್ನು ಮಾಡಬೇಕು ಎಂದು ಸಮಿತಿಯಲ್ಲಿ ಬಂದಿತ್ತು. ಇವೊತ್ತಿನ ದಿವಸ ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ರೂಢಮೂಲವಾದ ಬದಲಾವಣೆಗಳಾಗಬೇಕು. ಜಾಬ್ ಓರಿಯಂಟೇಷನ್ ಏನು ಇದೆ ಅಂತಹ ಒಂದು ವಿದ್ಯಾಭ್ಯಾಸ ನಮ್ಮ ವಿದ್ಯಾರ್ಥಿಗಳಿಗೆ ಸಿಕ್ಕಬೇಕು. ಹಿಂದೆ ಬ್ರಿಟಿಷರ ಕಾಲದಲ್ಲಿ ಕೇವಲ ಕಾರಕೂನನ್ನೇ ತಯಾರು ಮಾಡತಕ್ಕಂತ ಶಾಲೆಯನ್ನು ಇಟ್ಟುಕೊಂಡಿದ್ದರು, ಈಗ ಆಂತಹ ವಿದ್ಯಾಭ್ಯಾಸ ಕ್ರಮ ಬೇಡ. ಇನ್ನು ಖಾಸಗಿ ಕಾಲೇಜುಗಳನ್ನು ನಾವು ನಿಯಂತ್ರಣ ಮಾಡಬೇಕಾಗುತ್ತದೆ ಎಂದು ನನ್ನ ಅಭಿಪ್ರಾಯ

ಇವೊತ್ತು ಖಾಸಗಿ ಕಾಲೇಜುಗಳಿಗೆ ರೆಕಗ್‌ನಿಷನ್ ಯೂನಿವರ್ಸಿಟಿ ಕೊಡಬೇಕಾಗುತ್ತದೆ. ಯೂನಿವರ್ಸಿಟಿ ರಕ್ಷಣೆ ಇಲ್ಲದೇ ಖಾಸಗಿ ಕಾಲೇಜುಗಳನ್ನು ನಡೆಸುವುದಕ್ಕಾಗುವುದಿಲ್ಲ. ಈಗ ಯಾವುದೇ ಖಾಸಗಿ ಕಾಲೇಜಿನ ಪರೀಕ್ಷೆ ನಡೆಸಬೇಕಾದವರು ಯೂನಿವರ್ಸಿಟಿಯವರು, ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿ

ಗಳಿಗೆ ಡಿಗ್ರಿ ಕೊಡುವವರು ಯೂನಿವರ್ಸಿಟಿಯವರು, ಆದುದರಿಂದ ಈ ವಿಶ್ವವಿದ್ಯಾನಿಲಯಗಳಿಗೆ ಖಾಸಗಿ ಕಾಲೇಜುಗಳ ಮೇಲೆ ಹತೋಟಿ ಇಲ್ಲದೇ ಹೋದರೆ ತಪ್ಪಾಗುತ್ತದೆಯೋ ಏನೋ ಅದನ್ನು ವಿಚಾರ ಮಾಡಬೇಕು ಎಂದು ಹೇಳುತ್ತೇನೆ.

SRI M. MALLIKARJUNASWAMY.—The governance of the private colleges is a separate matter.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇವೊತ್ತು ಅಫಿಲಿಯೇಷನ್ ಇಲ್ಲದೇ ಹೋದರೆ ಒಂದು ಖಾಸಗಿ ಕಾಲೇಜು ನಡೆಸುವುದಕ್ಕಾಗುವುದಿಲ್ಲ ಎಂದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ, ಯಾವುದೇ ಒಂದು ಅಫಿಲಿಯೇಷನ್ ಕೊಟ್ಟ ಮೇಲೆ ಆ ಯೂನಿವರ್ಸಿಟಿ ನೇರವಾದ ಹತೋಟಿಗೆ ಬರುವುದಿಲ್ಲವೋ ಅಥವಾ ದ್ವಂದ್ವವಾಗುತ್ತದೆಯೋ ಏನೋ ಎಂದು ನನ್ನ ಅಭಿಪ್ರಾಯ. ಇಷ್ಟು ವಿಚಾರ ಹೇಳಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ) —ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸಭೆಯ ಮುಂದೆ ಮಂಡಿಸಿರತಕ್ಕ ಕರ್ನಾಟಕ ಸ್ಟೇಟ್ ಯೂನಿವರ್ಸಿಟೀಸ್ ಬಿಲ್ ೧೯೭೬ ಇದು ಬಹಳ ತಡವಾಗಿ ಬಂತು ಎಂದು ಈ ಸಂದರ್ಭದಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ, ಆದರೂ ಕೂಡ ಈ ರಾಜ್ಯದಲ್ಲಿರತಕ್ಕ ಮೂರು ಯೂನಿವರ್ಸಿಟಿಗಳನ್ನು ಒಂದೇ ಕಾಯಿದೆ ಪ್ರಕಾರ ನಡೆಸಿಕೊಂಡು ಹೋಗಬೇಕಾದ್ದು ಅವಶ್ಯಕತೆ ಇತ್ತು. ಆದುದರಿಂದ ಇದು ಒಂದು ಅವಶ್ಯಕವಾದ ಮಸೂದೆ ಎಂದು ಹೇಳುತ್ತೇನೆ. ಇದನ್ನು ತೆಗೆದುಕೊಂಡು ಬಂದಿರುವ ಬಗ್ಗೆ ನನ್ನ ಸಮಾಧಾನವನ್ನು ವ್ಯಕ್ತಪಡಿಸುತ್ತೇನೆ. ಆದರೆ ಇದನ್ನು ಈ ಒಂದು ಸುಗ್ರೀವಾಜ್ಞೆ ಮುಖಾಂತರ ತರಬೇಕಾಗಿತ್ತು, ಆ ಬಗ್ಗೆ ಸಾಕಷ್ಟು ವಿವರಣೆ ಕೊಟ್ಟಿಲ್ಲ. ಆದರೆ ಇದು ಏನು ಒಂದು ಸಣ್ಣ ಸಮಸ್ಯೆಯಲ್ಲ, ಸಾವಿರಾರು ಜನ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಚಾರ. ಇದು ಅಸೆಂಬ್ಲಿಯಲ್ಲಿ ತಂದಿದ್ದರೆ ಸಾಕಷ್ಟು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಬಹುದಿತ್ತು, ಇದನ್ನು ಸುಗ್ರೀವಾಜ್ಞೆ ಹೊರಡಿಸಿದ್ದು ಸೂಕ್ತವಲ್ಲ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಮೂರು ಯೂನಿವರ್ಸಿಟಿಗಳಿಗೂ ಹೆಸರನ್ನಿಡುವ ಕಾಲದಲ್ಲಿ ಅವಕ್ಕೆ ಒಂದೊಂದು ಕಾರಣ ಇತ್ತು. ಮೈಸೂರು ಯೂನಿವರ್ಸಿಟಿಯು, ಹಳೆಯ ಮೈಸೂರು ರಾಜ್ಯ ಏನು ಇತ್ತು ಆ ರಾಜ್ಯಕ್ಕೆ ಎಲ್ಲಾ ಅನ್ವಯಿಸುವ ಹಾಗೆ ಮೈಸೂರು ಯೂನಿವರ್ಸಿಟಿ ಎಂಬ ವಿಶ್ವವಿದ್ಯಾನಿಲಯ ಆಯಿತು. ನಂತರ ಬಾಂಬೆ ಪ್ರಾಂತ್ಯದಲ್ಲಿ ಕರ್ನಾಟಕ ಯೂನಿವರ್ಸಿಟಿ ಎಂದು ಆ ಕಡೆ ಭಾಗವಾದಾಗ ಕರ್ನಾಟಕ ಯೂನಿವರ್ಸಿಟಿ ಎಂದು ಆಯಿತು. ನಂತರ ಈ ಬೆಂಗಳೂರು ಯೂನಿವರ್ಸಿಟಿ ಪ್ರಾರಂಭವಾದಾಗ ಇದು ಒಂದು ಫೆಡರಲ್ ಯೂನಿವರ್ಸಿಟಿ ಆಗಬೇಕೆಂದು, ಬೆಂಗಳೂರು ಪಟ್ಟಣಕ್ಕೆ ಸಂಬಂಧಪಟ್ಟ ಹಾಗೆ ಬೆಂಗಳೂರು ಯೂನಿವರ್ಸಿಟಿ ಫೆಡರಲ್ ಯೂನಿವರ್ಸಿಟಿ ಆಗಬೇಕೆಂದು ಬೆಂಗಳೂರು ಯೂನಿವರ್ಸಿಟಿ ಆಯಿತು.

ಆದರೆ, ಈ ಹೆಸರುಗಳು ಯಾವ ವಿಧವಾಗಿಯೂ ಅವಶ್ಯಕವಲ್ಲವೆಂದು ನಾನು ಹೇಳುತ್ತೇನೆ. ಏಕೆಂದರೆ, ಈಗ ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ, ತುಮಕೂರು ಮತ್ತು ಕೋಲಾರ ಜಿಲ್ಲೆಗಳನ್ನು ಸೇರಿಸಲಾಗಿದೆ. ಆದುದರಿಂದ, ಕರ್ನಾಟಕ ವಿಶ್ವವಿದ್ಯಾಲಯ ಎಂದರೆ, ಇಡೀ ಕರ್ನಾಟಕಕ್ಕೆ ಅನ್ವಯಿಸುತ್ತದೆಯೋ ಏನೋ ಎಂದು ನೋಡಬೇಕಾಗಿದೆ. ಮೈಸೂರು ವಿಶ್ವವಿದ್ಯಾನಿಲಯ ಕೂಡ, ಹಳೆಯ ಮೈಸೂರು ಭಾಗದ ವ್ಯಾಪ್ತಿಗೆ ಸೇರಿತ್ತು. ಆದುದರಿಂದ, ವಿಶ್ವವಿದ್ಯಾನಿಲಯಗಳ ಹೆಸರುಗಳನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ಎಂದು ಮೊದಲೇ ಯೋಚನೆ ಮಾಡಬೇಕಾಗಿತ್ತು. ಮುಂದೆ ಯಾದರೂ ಯೋಚನೆ ಮಾಡಬೇಕಾದ ಪ್ರಸಂಗ ಬರಬಹುದು ಎಂದು ಊಹಿಸಿದ್ದೇನೆ.

ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವಾಗ, ಆಗ ವಿದ್ಯಾ ಮಂತ್ರಿಗಳಾಗಿದ್ದ ಶ್ರೀ ಕಂಠಿ ಅವರು, ಇದು ಫೆಡರಲ್ ಟೈಪ್ ವಿಶ್ವವಿದ್ಯಾನಿಲಯವಾಗಬೇಕು; ಅದರ ಜೊತೆಗೆ ಆದಷ್ಟು ಜಾಗ್ರತೆಯಾಗಿ, ಕೇಂದ್ರ ವಿಶ್ವವಿದ್ಯಾನಿಲಯ ಮತ್ತು ಕೇಂದ್ರ ಸರ್ಕಾರದ ಜವಾಬ್ದಾರಿಯಲ್ಲಿ ನಡೆಯತಕ್ಕ ವಿಶ್ವವಿದ್ಯಾನಿಲಯವಾಗುತ್ತದೆ ಎಂದು ಭರವಸೆ ಕೊಟ್ಟಿದ್ದರು. ನಮ್ಮ ಬೆಂಗಳೂರು ವಿಶ್ವವಿದ್ಯಾನಿಲಯ ಕೇಂದ್ರ ವಿಶ್ವವಿದ್ಯಾನಿಲಯವಾಗಿದ್ದ ಪಕ್ಷದಲ್ಲಿ, ಅದು ನಮ್ಮ ರಾಜ್ಯಕ್ಕೆ ಒಂದು ಹೆಮ್ಮೆಯ ವಿಚಾರವಾಗುತ್ತಿತ್ತು. ಆದರೆ, ಅದು ಆಗಲಿಲ್ಲವಲ್ಲ ಎಂದು ನಾನು ವ್ಯಥೆಪಡುತ್ತೇನೆ. ಅಷ್ಟೇ ಅಲ್ಲದೆ, ಬೆಂಗಳೂರು ವಿಶ್ವವಿದ್ಯಾನಿಲಯ ಯಾವ ಉದ್ದೇಶದಿಂದ ಪ್ರಾರಂಭವಾಯಿತೋ, ಆ ಉದ್ದೇಶ ನಾನಾ ಕಾರಣಗಳಿಂದ ಈಡೇರದೇ ಇರುವುದು ಬಹಳ ಶೋಚನೀಯ ವಿಚಾರವಾಗಿದೆ.

ಈಗ ನಮ್ಮ ಮುಂದಿರುವ ಮಸೂದೆಯಲ್ಲಿ ಸರ್ಕಾರದವರು ಕೆಲವು ಹೊಸ ಅಂಶಗಳನ್ನು ತಂದಿದ್ದಾರೆ. ಒಂದನೆಯದಾಗಿ, ವಿದ್ಯಾರ್ಥಿಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರತಕ್ಕ ಒಬ್ಬರು ವೆಲ್‌ಫೇರ್ ಆಫೀಸರ್ ಇದ್ದಾರೆ, ಮತ್ತು ವಿದ್ಯಾರ್ಥಿಗಳಿಗೆ ಅತಿಮುಖ್ಯವಾಗಿ ಬೇಕಾಗಿರತಕ್ಕ ವಾಚನಾಲಯ ಏನು ಇದೆ, ಅದಕ್ಕೆ ಸಂಬಂಧಪಟ್ಟಂತೆ ಒಬ್ಬ ಅಧಿಕಾರಿ ಇದ್ದಾರೆ, ಮತ್ತು ದೈಹಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಒಬ್ಬ ಅಧಿಕಾರಿ ಹಾಗೂ ಸೆನೆಟ್‌ನಲ್ಲಿ ಮೊದಲಿನಿಂದಲೂ ವಿದ್ಯಾರ್ಥಿಗಳ ಪ್ರಾತಿನಿಧ್ಯ ಇರಬೇಕು ಎನ್ನತಕ್ಕ ಒಂದು ಸಲಹೆ ಏನಿತ್ತು ಅದನ್ನು ಅನುಸರಿಸಿ, ವಿದ್ಯಾರ್ಥಿಗಳಿಗೂ ಕೂಡ ಸೆನೆಟ್‌ನಲ್ಲಿ ಸಾಕಷ್ಟು ಅವಕಾಶಗಳನ್ನು ಒದಗಿಸಿಕೊಟ್ಟಿದ್ದಾರೆ. ಆದರೆ, ಇಲ್ಲಿ ಗಮನಿಸಬೇಕಾದ ಒಂದು ಮುಖ್ಯಾಂಶ ಏನೆಂದರೆ, ಹಿಂದೆ, ಮೈಸೂರು, ಕರ್ನಾಟಕ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯಗಳನ್ನು ಒಂದೇ ಗುಂಪಿನ ವಿಶ್ವವಿದ್ಯಾನಿಲಯಗಳು ಎಂದು ಕರೆಯುವ ಒಂದು ಅಪವಾದ ಇತ್ತು. ಕೆಲವರ ಕೈಯಲ್ಲೇ ಹಿಡಿತದಲ್ಲಿದ್ದು ಎಲ್ಲ ವಿಧವಾದ ಅಧಿಕಾರವನ್ನೂ ಆ ಗುಂಪಿನವರು ಚಲಾಯಿಸುತ್ತಿದ್ದ ಪರಿಸ್ಥಿತಿ ಇತ್ತು. ಆನಂತರ ಅದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಯಾವ ರೀತಿ ಪ್ರಯತ್ನ ಪಟ್ಟಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ವಿಶ್ವವಿದ್ಯಾನಿಲಯಗಳು ನಮ್ಮ ವಿದ್ಯಾರ್ಥಿಗಳ ಆಗುಹೋಗುಗಳನ್ನೂ ಅವರ ಮುಂದಿನ ಭವಿಷ್ಯವನ್ನು ರೂಪಿಸತಕ್ಕ ದಾರಿದೀಪಗಳಾದುದರಿಂದ, ಇವುಗಳಲ್ಲಿ ವಿದ್ಯಾಭ್ಯಾಸ ಕುರಿತಾಗಿ ಹೆಚ್ಚು ಗಮನ ಕೊಡಬೇಕೇ ಹೊರತು, ರಾಜಕೀಯ ಮತ್ತು ಇನ್ನಿತರ ವಿಷಯಗಳ ಬಗ್ಗೆ ಸಾಕಷ್ಟು ಗಮನಕೊಡಬಾರದು. ಆದುದರಿಂದ, ರಾಜಕೀಯ ಚಟುವಟಿಕೆಗಳನ್ನು ಇದರಲ್ಲಿ ನಿಷೇಧಿಸತಕ್ಕ ಬಗ್ಗೆ ನಿಯಮಾವಳಿಗಳನ್ನು ತಿದ್ದುಪಡಿ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನಗನ್ನಿಸುತ್ತದೆ. ಮುಂದಿನ ಭಾವಿ ಪ್ರಜೆಗಳಾಗತಕ್ಕ, ಮುಂದಿನ ನಮ್ಮ ರಾಷ್ಟ್ರದ ಆಗುಹೋಗುಗಳನ್ನು ತೀರ್ಮಾನ ಮಾಡತಕ್ಕ, ನಮ್ಮ ಯುವ ಜನಾಂಗಕ್ಕೆ ನಾಡಿನ ಹಿತದೃಷ್ಟಿಯಿಂದ ನಮ್ಮ ಸಂಸ್ಕೃತಿಯ ಹಿತ ದೃಷ್ಟಿಯಿಂದ ಉತ್ತಮ ವಿದ್ಯಾರ್ಥಿಗಳನ್ನು ತಯಾರು ಮಾಡತಕ್ಕದ್ದು ನಮ್ಮ ವಿಶ್ವವಿದ್ಯಾನಿಲಯದ ಗುರಿ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ, ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲೂ ಕೂಡ, ನಮ್ಮ ರಾಷ್ಟ್ರದ ಒಂದು ಪ್ರತಿಷ್ಠೆ ಏನಿದೆ, ಅದನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುವುದು ಅವಶ್ಯಕವಿರುತ್ತದೆ. ಆದರೆ, ಕೇವಲ ಒಂದು ಡಿಗ್ರಿ ಹೊಂದತಕ್ಕಂಥ ಮನುಷ್ಯರನ್ನು ತಯಾರು ಮಾಡತಕ್ಕ ಕಾರ್ಖಾನೆಗಳಾಗಬಾರದು. ವಿಶ್ವವಿದ್ಯಾನಿಲಯಗಳು ನಮ್ಮ ದೇಶದ ಸಂಸ್ಕೃತಿಯ ದ್ಯೋತಕವಾದ ವಿದ್ಯೆಯನ್ನು ನಮ್ಮ ವಿದ್ಯಾರ್ಥಿಗಳಿಗೆ ಕೊಡಬೇಕು. ಇವತ್ತಿನ ದಿವಸ, ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಸರ್ಕಾರದ ಬೇರೆ ಇಲಾಖೆಯಲ್ಲೂ ಇದರಷ್ಟು ಹಣವನ್ನು ಖರ್ಚು ಮಾಡುತ್ತಾ ಇಲ್ಲ. ಅಷ್ಟೇ ಅಲ್ಲದೆ, ವಿದ್ಯಾಭ್ಯಾಸ ಬಾಬಿಗೆ, ಆಯ-ವ್ಯಯದಲ್ಲಿ ಪ್ರತಿ ವರ್ಷವೂ ಹಣವನ್ನು ಹೆಚ್ಚಿಸಿಕೊಂಡು ಬರುತ್ತಿದ್ದಾರೆ. ಆದುದರಿಂದ, ಇದರ ಬಗ್ಗೆ ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಪರ ರಾಷ್ಟ್ರಗಳಲ್ಲಿ ದತ್ತಿಗಳ ಮೂಲಕ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಹಾಗೆ ಇಲ್ಲೂ ಆಲೋಚನೆ ಮಾಡಬಹುದಾಗಿದೆ. ಹೀಗೆ, ಹೆಚ್ಚು ಹಣವನ್ನು ಸಾರ್ವಜನಿಕರಿಂದ ಸಂಪಾದನೆ ಮಾಡುವುದಕ್ಕೆ ಸ್ವಲ್ಪ ಅವಕಾಶ ಮಾಡಿಕೊಳ್ಳುವ ಬಗ್ಗೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಸೂಚಿಸ ಬಯಸುತ್ತೇನೆ. ಎಲ್ಲಾ ದಾನಕ್ಕಿಂತಲೂ ವಿದ್ಯಾ ದಾನ ದೊಡ್ಡದು ಎಂಬ ಭಾವನೆಯನ್ನು ಹಣವಂತರಲ್ಲಿ ಮೂಡಿಸಿ, ಅವರಿಂದ ಹಣ ತೆಗೆದುಕೊಳ್ಳುವುದರ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕಾಗಿದೆ. ಸರ್ಕಾರದ ಮೇಲೆ ಇವತ್ತಿನ ದಿವಸ ಹೆಚ್ಚು ಜವಾಬ್ದಾರಿ ಬಿದ್ದಿರುವುದರಿಂದ, ಸಾಕಷ್ಟು ಪ್ರಮಾಣದಲ್ಲಿ ಹಣ ಒದಗದೆ ಸರಿಯಾದ ವಿದ್ಯಾಭ್ಯಾಸ ಜನತೆಗೆ ಒದಗಿಸುವುದಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವ ಶಂಕೆ ನನಗುಂಟಾಗಿದೆ. ಆದುದರಿಂದ, ಸರ್ಕಾರದವರು ಇದರ ಬಗ್ಗೆ ಕೂಡ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕಾಗಿದೆ ಎಂದು ತಿಳಿಸುತ್ತೇನೆ.

ಇನ್ನು, ನಮ್ಮ ಮುಂದಿರತಕ್ಕ ಮಸೂದೆಯಲ್ಲಿ ಹಿಂದುಳಿದ ವರ್ಗಕ್ಕೆ ಮತ್ತು ಹರಿಜನ ಗಿರಿಜನ ವರ್ಗದವರಿಗೆ ಪ್ರಾತಿನಿಧ್ಯ ಕೊಟ್ಟು ಅವರಿಗೆ ಸುರಕ್ಷಿತವಾಗಿ ವಿದ್ಯಾಭ್ಯಾಸ ದೊರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಅಂಥವರ ಪ್ರತಿನಿಧಿಗಳು, ವಿಶ್ವವಿದ್ಯಾನಿಲಯದ ಎಲ್ಲ ಅಂಗಗಳಲ್ಲಿಯೂ ಇರಬೇಕು ಎಂದು ಮಾಡಿದ್ದಾರೆ. ಆದರೆ, ಇಲ್ಲಿ ಒಂದು ಗಮನಿಸಬೇಕಾದ ವಿಚಾರವೇನೆಂದರೆ, ಬಡವರು ಮತ್ತು ಹಿಂದುಳಿದವರ ಹೆಸರಿನಲ್ಲಿ ಕೆಲವು ಮನೆತನದವರು ಅನುಕೂಲ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ, ಹಿಂದುಳಿದವರು ಹಿಂದುಳಿಯುತ್ತಲೇ ಇದ್ದಾರೆ; ಮುಂದುವರಿದಿರುವವರು ಮುಂದುವರಿಯುತ್ತಲೇ ಇದ್ದಾರೆ. ನಮ್ಮಲ್ಲಿ ಅನೇಕ ಹಿಂದುಳಿದ ಜನಾಂಗಗಳ ಕಾಲೋನಿಗಳು ಇವೆ; ಹರಿಜನರ ಕಾಲೋನಿಗಳು ಇವೆ. ಅವು ಹಿಂದೆ ಹೇಗಿದ್ದುವೋ ಈಗಲೂ ಹಾಗೆಯೇ ಉಳಿದಿವೆ; ಅಲ್ಲಿನ ಜನರಾರೂ ಇನ್ನೂ ಮುಂದೆ ಬಂದಿಲ್ಲ. ಆದುದರಿಂದ, ನಿಜವಾಗಲೂ ಯಾರು ಹಿಂದುಳಿದಿದ್ದಾರೆ, ಅವರನ್ನು

ಮುಂದಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಹೀಗೆ ಪ್ರಯತ್ನ ಮಾಡುವಾಗ, ಅಲ್ಲಿನ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕಲಿಸಬೇಕೆಂದು ಸರ್ಕಾರ ಒತ್ತಾಯ ಮಾಡಬೇಕು; ನಿಜವಾಗಲೂ ಹಿಂದುಳಿದಿರತಕ್ಕ ಯುವಕರಿಗೆ ಉತ್ತಮ ಶಿಕ್ಷಣ ದೊರೆಯುವುದರ ಬಗ್ಗೆ ಹೆಚ್ಚು ಆದ್ಯತೆ ನೀಡಬೇಕೆಂದು ಮನವಿ ಮಾಡುತ್ತೇನೆ. ದೊಡ್ಡ ಮೀನುಗಳೆಲ್ಲಾ ಚಿಕ್ಕ ಮೀನುಗಳನ್ನು ತಿಂದುಹಾಕುವಂತೆ ಮುಂದುವರಿದವರು ಹಿಂದುಳಿದವರನ್ನು, ಹಿಂದಕ್ಕೆ ತಳ್ಳುತ್ತಿದ್ದಾರೆ. ಆದುದರಿಂದ ಸರ್ಕಾರದ ಧ್ಯೇಯ ಧೋರಣೆಗಳು ಸಮರ್ಪಕವಾಗಿ ಹಿಂದುಳಿದವರಿಗೆ ಅರಿವಾಗಲು ಸಾಕಷ್ಟು ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಹಿಂದುಳಿದವರು ಎಲ್ಲಿಯವರೆಗೆ ವಿದ್ಯಾವಂತರಾಗುವುದಿಲ್ಲ; ಅಲ್ಲಿಯವರೆಗೆ ಹಿಂದುಳಿದವರೇ ಆಗಿರುತ್ತಾರೆ. ಮಾನ್ಯ ಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನಸ್ವಾಮಿಯವರಿಗೆ ಈ ವಿಚಾರ ಚೆನ್ನಾಗಿ ಗೊತ್ತಿರುವುದರಿಂದ, ಬಡವರ ಮತ್ತು ಹರಿಜನರ ಕಷ್ಟ ಅವರಿಗೆ ಅರಿವಾಗಿರುವುದರಿಂದ ಈ ಅವಕಾಶದಲ್ಲಿ ಕೆಳಗೆ ತುಳಿಯಲ್ಪಟ್ಟಿರುವವರನ್ನು ಮೇಲಕ್ಕೆತ್ತಲು ಈಗಲಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆಂದು ನಾನು ಆಶೆ ಇಟ್ಟುಕೊಂಡಿದ್ದೇನೆ.

5-00 P.M.

ಮತ್ತು ನಮ್ಮ ವಿದ್ಯಾಭ್ಯಾಸದ ಬಗ್ಗೆ ಅನೇಕ ತಿದ್ದುಪಡಿಗಳೂ, ಸಲಹೆಗಳೂ ಹಾಗೂ ಅನೇಕ ವರದಿಗಳೂ ಬಂದಿವೆ. ಆದರೆ, ಆ ವರದಿಗಳೂ ಕಾರ್ಯಗತವಾಗುವುದಕ್ಕೆ ಬಹಳ ತಡವಾಗುತ್ತಾ ಇರತಕ್ಕದ್ದು ಏಕೆ ? ಅಲ್ಲದೆ ಈ ಮಸೂದೆಯಲ್ಲಿ ಕನ್ನಡ ಭಾಷೆಯ ಹಾಗೂ ಕನ್ನಡ ಮಾಧ್ಯಮದ ಬಗ್ಗೆ ಯಾವರೀತಿಯ ವಿಧಾನವನ್ನು ಅನುಸರಿಸಬೇಕೆಂಬುದರ ಬಗ್ಗೆ ಒಂದು ಮಾತನ್ನು ಹೇಳದೇ ಇರತಕ್ಕದ್ದು ಬಹಳ ಶೋಚನೀಯವಾದ ವಿಚಾರ. ವಿದ್ಯಾಭ್ಯಾಸದ ಬಗ್ಗೆ ಸಂಬಂಧ ಇರತಕ್ಕದ್ದು, ಮೊದಲನೆಯದಾಗಿ ವಿದ್ಯಾರ್ಥಿಗೆ, ಎರಡನೆಯದಾಗಿ ತಂದೆ ತಾಯಿಗಳು ಮೂರನೆಯದಾಗಿ ಸರ್ಕಾರ ಮತ್ತು ವಿದ್ಯಾಭ್ಯಾಸದ ಮೇಲ್ವಿಚಾರಣೆಯನ್ನು ನೋಡಿಕೊಂಡು ಹೋಗುವುದಕ್ಕೆ ಇರತಕ್ಕ ವಿಶ್ವವಿದ್ಯಾನಿಲಯ, ಒಂದೊಂದಕ್ಕೆ ಸಂಬಂಧ ಬೇಕಾದಷ್ಟು ಇದೆ. ಅದನ್ನು ಸರಿಯಾದ ರೀತಿಯಲ್ಲಿ ಯೋಚನೆ ಮಾಡಿ. ಯಾವರೀತಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕೆನ್ನುವುದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ. ಆದರೂ ಕೂಡ ನಾನಾ ಕಾರಣಗಳಿಂದ ಕಾರ್ಯಗತವಾಗುವುದು ಬಹಳ ತಡವಾಗುತ್ತಿದೆ. ಉಪಾಧ್ಯಾಯರುಗಳನ್ನು ನೇಮಿಸುವಾಗ ಪ್ರಭಾವ ಇರತಕ್ಕ ಉಪಾಧ್ಯಾಯರನ್ನು ನೇಮಿಸಿದರೆ ಸರಿಹೋಗುವುದಿಲ್ಲ, ಉಪಾಧ್ಯಾಯನಾಗಬೇಕಾದವನಿಗೆ ಒಳ್ಳೆಯ ಮನೋಭಾವ, ಮತ್ತು ಅರ್ಹತೆ ಇರಬೇಕು. ಬರೀ ಸರ್ಟಿಫಿಕೇಟ್ ಮೇಲಾಗಲೀ, ಇಂಟರ್ವ್ಯೂ ಮೇಲಾಗಲೀ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬದಲು, ಅವನಿಗೆ ಒಂದು ಶಾಲೆಯನ್ನು ನಡೆಸತಕ್ಕಂಥ ಮತ್ತು ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡುವುದಕ್ಕೆ ಶಕ್ತಿ ಇದೆಯೇ ಎಂಬುದನ್ನು ನೋಡಬೇಕಾದುದು ಉತ್ತಮ. 100ಕ್ಕೆ 90 ಅಂಕಗಳನ್ನು ಪಡೆದ ಮಾತ್ರಕ್ಕೆ ಉಪಾಧ್ಯಾಯನಾಗುವುದಕ್ಕೆ ಸಾಧ್ಯವಿಲ್ಲ, ಎಲ್ಲರೂ ಉಪಾಧ್ಯಾಯರಾಗುವುದಕ್ಕೆ ಸಾಧ್ಯವಿರುವುದಿಲ್ಲ, ಅಲ್ಲದೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟಿನಲ್ಲಿ ಸಾಧ್ಯವಾದಷ್ಟು ರಾಜಕೀಯ ಪ್ರಭಾವಕ್ಕೆ ಒಳಗಾಗಿ ಅರ್ಹತೆ ಉಳ್ಳವರಿಗೆ ಅವಕಾಶಕೊಡುತ್ತಿಲ್ಲ. ಆದುದರಿಂದ ಸರ್ಕಾರ ಇದರ ಕಡೆ ಗಮನಹರಿಸಿ, ಅರ್ಹತೆ ಇರುವವರನ್ನು ಉಪಾಧ್ಯಾಯರನ್ನಾಗಿ ಮತ್ತು ಪ್ರೊಫೆಸರನ್ನಾಗಿ ನೇಮಕ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ನಮ್ಮ ರಾಷ್ಟ್ರದ ಅದರಲ್ಲಿಯೂ ಮುಖ್ಯವಾಗಿ ಸೆಂಟ್ರಲ್ ಸರ್ವೀಸ್‌ನಲ್ಲಿ ಕರ್ನಾಟಕದ ಜನ ಐ.ಎ ಎಸ್. ಮತ್ತು ಐ.ಪಿ.ಎಸ್ ನಲ್ಲಿ ತೇರ್ಗಡೆ ಹೊಂದಿ, ದೊಡ್ಡ ಹುದ್ದೆಗಳಿಗೆ ಬರುವುದು ಕಡಿಮೆಯಾಗಿದೆ. ಕೇಂದ್ರ ಸರ್ಕಾರದ ದೊಡ್ಡ ಹುದ್ದೆಗಳಲ್ಲಿ ನಮ್ಮ ವಿದ್ಯಾರ್ಥಿಗಳು, ಸರಿಯಾದ ರೀತಿಯಲ್ಲಿ ಭಾಗವಹಿಸಿ ಉತ್ತೀರ್ಣರಾಗುವುದಕ್ಕೆ ಸಾಕಷ್ಟು ಯೋಜನೆ ಹಾಕಿಕೊಳ್ಳುವುದು ಆವಶ್ಯಕ. ತಮಿಳುನಾಡು, ಪಂಜಾಬು ಮುಂತಾದ ಕಡೆಗಳಲ್ಲಿ ಹೆಚ್ಚು ಐ.ಎ.ಎಸ್. ಮತ್ತು ಐ.ಪಿ ಎಸ್. ನಲ್ಲಿ ಉತ್ತೀರ್ಣರಾಗಿ ಬಹಳ ಮುಖ್ಯವಾದ ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಆಕ್ರಮಿಸಿಕೊಂಡಿದ್ದಾರೆ. ಇದರ ವಿಚಾರವಾಗಿ ನಮ್ಮ ಸರ್ಕಾರ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ನಮ್ಮ ಯುವಕರೂ ಮುಂದೆ ಬರುವುದಕ್ಕೆ ಯೋಚನೆ ಮಾಡಬೇಕು.

ಪಠ್ಯಪುಸ್ತಕಗಳ ವಿಚಾರವಾಗಿ ಒಂದು ಮಾತು ಹೇಳುತ್ತೇನೆ, ಸರಿಯಾದ ಹಾಗೂ ಉತ್ತಮವಾದ ಪಠ್ಯಪುಸ್ತಕಗಳನ್ನು ಕನ್ನಡದಲ್ಲಿಯೂ ಹಾಗೂ ಇಂಗ್ಲಿಷಿನಲ್ಲಿಯೂ ತಯಾರು ಮಾಡಬೇಕಾಗುತ್ತದೆ. ಯೂನಿವರ್ಸಿಟಿಯವರು ಯಾವರೀತಿ ಪಠ್ಯಪುಸ್ತಕಗಳನ್ನು ತಯಾರು ಮಾಡಬೇಕೆಂಬ ವಿಚಾರವನ್ನು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳುತ್ತೇನೆ. ಸಂಶೋಧನಾ ವಿಚಾರದಲ್ಲಿಯೂ ನಾವು ಸಾಕಷ್ಟು ಮುಂದೆ ಬಂದಿಲ್ಲ, ಸರ್ಕಾರ ಮತ್ತು ಯೂನಿವರ್ಸಿಟಿಯವರು ಸಂಶೋಧನಾ ವಿಚಾರದ ಕಡೆಗೂ ಸಾಕಾದಷ್ಟು ಗಮನ ಕೊಡಬೇಕಾದುದು ಅತಿ ಮುಖ್ಯವಾದುದು. ನಮ್ಮ ಯುವಕರು ಡಿಗ್ರಿ ಪಡೆದುಕೊಂಡು ಹೆಚ್ಚಿಗೆ ಗುಮಾಸ್ತರಾಗುತ್ತಿದ್ದಾರೆ, ಯಾರಿಗೆ ಸರಿಯಾದ ಪ್ರತಿಭೆ ಇದೆಯೋ, ಉತ್ತಮವಾದ ಸಂಶೋಧನಾ ವಿದ್ಯಾರ್ಥಿಗಳಾಗುವುಕ್ಕೆ ಅರ್ಹತೆಯಿದೆಯೋ, ಯಾರಿಗೆ ವಿಚಾರದಲ್ಲಿ ಸಾಕಷ್ಟು ಆಸಕ್ತಿ ಮತ್ತು ಶ್ರದ್ಧೆ ಇರುತ್ತದೆಯೋ ಅಂಥ ವಿದ್ಯಾರ್ಥಿಗಳಿಗೆ ಸಂಶೋಧನಾ ವಿಧಾನದಲ್ಲಿ ಸಾಕಷ್ಟು ಅವಕಾಶ ಕಲ್ಪಿಸಿಕೊಡಬೇಕು.

ಇನ್ನೂ ಅನೇಕ ವಿದ್ಯಾರ್ಥಿಗಳಿಗೆ ಸರ್ಕಾರದವರು ಫ್ರೀಷಿಪ್ ಸ್ಕಾಲರ್‌ಷಿಪ್‌ಗಳನ್ನು ಒದಗಿಸಿಕೊಡುತ್ತಿದ್ದಾರೆ, ಬಡ ವಿದ್ಯಾರ್ಥಿಗಳು ಯಾರು ಇದ್ದಾರೋ ಅವರಿಗೆ ಇದು ನಿಜವಾಗಿಯೂ ದೊರೆಯುತ್ತಿಲ್ಲ, ಕೆಲವು ಕಾಲದಿಂದಲೂ ಇದು ಹಾಗೆಯೇ ನಡೆದುಕೊಂಡು ಬರುತ್ತಿದೆ. ಯಾವುದೋ ಒಂದು ಇನ್‌ಕಂ ಸರ್ಟಿಫಿಕೇಟ್ ತೆಗೆದುಕೊಂಡು ಬಂದು ಸ್ಕಾಲರ್‌ಷಿಪ್ ಪಡೆಯುತ್ತಿದ್ದಾರೆ, ಇದರ ಬಗ್ಗೆ ಯೂನಿವರ್ಸಿಟಿ ಕಾರ್ಯಕ್ರಮ ಹಾಕಿಕೊಂಡು, ಬಡ ವಿದ್ಯಾರ್ಥಿಗಳಿಗೆ ಫ್ರೀಷಿಪ್ ಸ್ಕಾಲರ್‌ಷಿಪ್ ದೊರೆಯುವಂತೆ ಮಾಡಬೇಕು.

ಇನ್ನು ಖಾಸಗೀ ಶಾಲೆಗಳ ಬಗ್ಗೆ ಹೇಳುವುದಾದರೆ ಈ ದಿನ ಬೆಳಗ್ಗೆ ಮಾನ್ಯ ಮಂತ್ರಿಗಳು ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು ಈ ನಗರ ಸಭೆ ಮತ್ತು ಸರ್ಕಾರೀ ಶಾಲೆಗಳಲ್ಲಿ ಉತ್ತಮವಾದ ಫಲಿತಾಂಶ ಬರದೇ ಇರುವುದಕ್ಕೆ ಕಾರಣ ಇದರಲ್ಲಿ ಬರುವ ವಿದ್ಯಾರ್ಥಿಗಳು ಫಿಲ್ಟರ್ ಆಗಿ ಬರುತ್ತಾರೆ ಅದರಿಂದ ಇದರಲ್ಲಿ ಉತ್ತಮವಾದ ಫಲಿತಾಂಶ ಬರುವುದಕ್ಕಾಗುವುದಿಲ್ಲ ಎಂದು. ಆದುದರಿಂದ ನಾನು ಹೇಳುವುದು ಈ ಸರ್ಕಾರೀ ಶಾಲಾ ಕಾಲೇಜುಗಳಲ್ಲಿ ಸರಿಯಾದ ರೀತಿಯಲ್ಲಿ ಪಾಠ ಪ್ರವಚನ ಆದರೆ ಅಂದರೆ ಖಾಸಗೀ ಶಾಲೆಗಳಲ್ಲಿ ಯಾವರೀತಿ ಒಂದು ಪಾಠಪ್ರವಚನ ಆಗುತ್ತದೋ ಆ ರೀತಿ ಇದರಲ್ಲೂ ಆದರೆ. ಈ ಸರ್ಕಾರೀ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಿದರೆ ಉತ್ತಮವಾದ ಫಲಿತಾಂಶ ಇದರಲ್ಲೂ ಬರುತ್ತದ, ಇದಕ್ಕೆ ಲೆಕ್ಚರರ್ಸ್ ರೀಡರ್ಸ್ ಮತ್ತು ಪ್ರೊಫೆಸರ್ ಇವರುಗಳು ಹೆಚ್ಚು ಸೇವೆ ಮಾಡಿದರೆ ಆವಾಗ ಈ ಖಾಸಗೀ ಶಾಲೆಗಳು ತನ್ನಷ್ಟಕ್ಕೆ ತಾನೇ ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ಬರುತ್ತದೆ, ನೀವು ಹೇಳಿ ಮುಚ್ಚಿಸಬೇಕಾದ ಸಂದರ್ಭ ಬರುವುದಿಲ್ಲ. ಸರ್ಕಾರೀ ಶಾಲೆಗಳಲ್ಲಿ ಚೆನ್ನಾಗಿ ವ್ಯಾಸಂಗ ಆದರೆ ಈ ಖಾಸಗೀ ಶಾಲೆಗಳಲ್ಲಿ ಬರತಕ್ಕಂಥಾ ಉತ್ತಮ ಫಲಿತಾಂಶ ಈ ಸರ್ಕಾರೀ ಶಾಲೆಗೆ ಬರುತ್ತದೆ, ಆದುದರಿಂದ ಈ ಪ್ರೈವೇಟ್ ಶಾಲೆಗಳು ಏನು ಇವೆಯೋ ಇದರ ಜೊತೆಯಲ್ಲೇ ಸರ್ಕಾರೀ ಶಾಲೆಗಳೂ ಸೇರಿಕೊಂಡು ಒಂದಕ್ಕೊಂದು ಸ್ಪರ್ಧೆ ನಡೆಸಿ ಉತ್ತಮವಾದ ಫಲಿತಾಂಶ ಬರುವುದಕ್ಕೆ ಪ್ರಯತ್ನ ಪಡದೇ ಹೋದರೆ ಈ ಖಾಸಗೀ ಶಾಲೆಗಳ ಸುಲಿಗೆಯನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದುದರಿಂದ ಈ ಸರ್ಕಾರೀ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸಬೇಕು ಎಂದು ಹೇಳುತ್ತೇನೆ.

ಇನ್ನು ಪ್ರೈವೇಟ್ ಶಾಲೆಗಳಲ್ಲಿ ವಸೂಲ್ಮಾಡತಕ್ಕಂಥಾ ಫೀಜಿಗೂ ಮತ್ತು ಸರ್ಕಾರೀ ಶಾಲೆಗಳಲ್ಲಿ ವಸೂಲ್ಮಾಡತಕ್ಕಂಥಾ ಫೀಸಿಗೂ ಬಹಳ ಅಂತರ ಇದೆ. ತಮಗೆ ಒಂದು ಉದಾಹರಣೆ ಹೇಳುವುದಾದರೆ ದಾವಣಗೆರೆ ಮೆಡಿಕಲ್ ಕಾಲೇಜೀಗೆ 1400 ಚಿಲ್ಲರೆ ಕಟ್ಟಬೇಕಾದರೆ ಅದೇ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ 450 ರೂಪಾಯಿ ಕಟ್ಟಬೇಕಾಗುತ್ತದೆ. ನನ್ನ ಮಗಳು ಒಬ್ಬಳು ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಾ ಇದ್ದಳು. ಅವಳನ್ನು ಬೆಂಗಳೂರು ಮೆಡಿಕಲ್ ಕಾಲೇಜಿಗೆ ವರ್ಗ ಮಾಡಿ ಕರೆದುಕೊಂಡು ಬರುವ ತನಕ 5 ವರ್ಷಕ್ಕೆ 5 ಸಾವಿರ ರೂಪಾಯಿ ಡಿಫರೆನ್ಸ್ ಮೊಬಲಗನ್ನು ಕಟ್ಟಿ ಇಲ್ಲಿಗೆ ಕರೆದುಕೊಂಡು ಬರಬೇಕಾಯಿತು. ಈ ರೀತಿಯಾಗಿ ಸರ್ಕಾರಿ ಮೆಡಿಕಲ್ ಕಾಲೇಜಿಗೂ ಖಾಸಗಿ ಮೆಡಿಕಲ್ ಕಾಲೇಜಿಗೂ ಅಂತರ ಇದೆ. ಈ ಅಂತರ ಸಾಧ್ಯವಾದಷ್ಟು ಮಟ್ಟಿಗೆ ಹೋಗಬೇಕು. ಈ ಬಗ್ಗೆ ಗಮನಹರಿಸಬೇಕು ಎಂದು ಹೇಳುತ್ತೇನೆ. ಅನೇಕ ಮಕ್ಕಳು ಖಾಸಗೀ ಶಾಲೆಗಳಲ್ಲಿ ಓದಬೇಕು ಅನ್ನುವ ಆಕಾಂಕ್ಷೆ ಇದ್ದರೂ ಕೂಡ ಹೆಚ್ಚಿನ ಡೊನೇಷನ್ ಮತ್ತು ಹೆಚ್ಚಿನ ಫೀಸ್ ಕೊಡಬೇಕಾಗುತ್ತದೆ. ಇಷ್ಟೊಂದು ಹಣವನ್ನು ಅವರಿಗೆ ಕೊಡುವುದಕ್ಕೆ ಕಷ್ಟ. ಆದುದರಿಂದ

ನಾನು ಹೇಳುವುದು ಆ ಖಾಸಗೀ ಶಾಲೆಯಲ್ಲಿ ಯಾವರೀತಿ ಒಂದು ಶಿಕ್ಷಣ ಕೊಡುತ್ತಾರೋ ಆ ರೀತಿ ಒಂದು ಶಿಕ್ಷಣ ಇಲ್ಲಿ ಕೊಡುವಂತೆ ಸರಿಯಾದಂಥ ಮೇಷ್ಟ್ರುಗಳನ್ನು ಪ್ರೊಫೇಸರ್‌ಗಳನ್ನು ಹಾಕಿ ಒಳ್ಳೆಯ ವ್ಯಾಸಂಗ ಮಾಡಿಸಿದರೆ ಎಲ್ಲಾ ಹುಡುಗರು ಈ ಸರ್ಕಾರಿ ಶಾಲೆಯಲ್ಲಿ ಸೇರುವುದೊಲ್ಲದೆ ಒಳ್ಳೆಯ ಫಲಿತಾಂಶವೂ ಬರುತ್ತದೆ. ಇದನ್ನು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕಾಲೇಜ್ ಹಾಸ್ಟಲ್ ಫೆಸಿಲಿಟೀಸ್ ಬಗ್ಗೆ ಹೇಳುವುದಾದರೆ ಎಷ್ಟು ಫೆಸಿಲಿಟೀಸ್ ಬೇಕೋ ಅಷ್ಟು ಇಲ್ಲ. ನಾನು ನೋಡುತ್ತಾ ಇದ್ದೇನೆ ಹಾಸ್ಟಲ್ ಫೆಸಿಲಿಟೀಸ್‌ನ್ನು ಅವರಿಗೆ ಸಾಕಷ್ಟು ರೀತಿಯಲ್ಲಿ, ಮಾಡಿಕೊಡಬೇಕು. ಈ ಬಗ್ಗೆ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಹೇಳುವುದಾದರೆ ವಿದ್ಯಾರ್ಥಿಗಳಲ್ಲಿ ಶಿಸ್ತು ಬರಬೇಕಾದರ, ಅವನಿಗೆ ಸರಿಯಾದ ವ್ಯಾಸಂಗ ಆಗಬೇಕಾದರೆ ಈ ಕಾಲೇಜಿಗಳು ಊರಿನಿಂದ ಹೊರಗೆ ಇರಬೇಕು. ರೆಸಿಡೆನ್ಷಿಯಲ್ ಶಾಲೆಗಳ ಹಾಗೆ ಇದ್ದರೆ ಚೆನ್ನಾಗಿರುತ್ತವೆ. ಈ ತರಹವಾದ ರೆಸಿಡೆನ್ಷಿಯಲ್ ಶಾಲೆಗಳು ನಮ್ಮಲ್ಲಿ ಯಾವುದೂ ಇಲ್ಲ. ನಮ್ಮ ರಾಜ್ಯದಲ್ಲಿ ರೆಸಿಡೆನ್ಷಿಯಲ್ ಶಾಲೆಗಳನ್ನು ಮಾಡಿದ ಪಕ್ಷದಲ್ಲಿ ಒಂದು ತರಹವಾದ ಶಿಸ್ತು ಮತ್ತು ನಿಯಮ ವಿದ್ಯಾರ್ಥಿಗಳಲ್ಲಿ ಬರುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಿ ಈ ಹಾಸ್ಟಲ್ ಫೆಸಿಲಿಟೀಸನ್ನು ಉತ್ತಮಗೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಬಗ್ಗೆ ಇನ್ನೊಂದು ವಿಷಯ ಹೇಳುವುದಾದರೆ ನಮ್ಮ ಯುವಕರಲ್ಲಿ ಸಾಕಾದಷ್ಟು ಶಿಸ್ತು ಬರವುದರ ಜೊತೆಗೆ ಒಂದು ಮಾರಲ್ ಎಜುಕೇಷನ್ ಕೊಡಇರಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಈ ಮಾರಲ್ ಎಜುಕೇಷನ್ ಇಲ್ಲದೇಹೋದದೆ ವಿದ್ಯಾರ್ಥಿಗಳಿಗೆ ಸರಿಯಾದ ವಿದ್ಯಾಭ್ಯಾಸ ಆಗುವುದಿಲ್ಲ. ಅದುದರಿಂದ ಬೇರೆ ಬೇರೆ ಎಜುಕೇಷನ್ ಜೊತೆಗೆ ಈ ಮಾರಲ್ ಎಜುಕೇಷನ್ ಕೂಡ ಕೊಡುವುದಕ್ಕೆ ಯೋಚನೆ ಮಾಡಿದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ.

ಇನ್ನು ಈ ಮಸೂದೆ ಬಗ್ಗೆ ಹೇಳುವುದಾದರೆ ಸರ್ಕಾರ ನಮ್ಮ ಮುಂದೆ ಇಟ್ಟಿರತಕ್ಕಂಥ ಈ ಮಸೂದೆಯಲ್ಲಿ ಸಾಧ್ಯವಾದಷ್ಟೂ ಕೂಡ ಸರ್ಕಾರವೇ ಈ ಅಧಿಕಾರವನ್ನು ಹೊಂದಿದೆ ಅಂತ ಹೇಳಬಹುದು. ಪ್ರತ್ಯಕ್ಷವಾಗಿ ಇದು ಸರ್ಕಾರದ ಕೈಯಲ್ಲಿ ಇಲ್ಲದೇಹೋದರೂ ಕೂಡ ಚಾನ್ಸಲರ್‌ಗೆ ಅನೇಕ ಅಧಿಕಾರಗಳನ್ನು ಕೊಟ್ಟು ಹೆಚ್ಚಿನ ರೀತಿಯಲ್ಲಿ ಸುತ್ತು ಬಳಸಿಕೊಂಡು ಮತ್ತೆ ಪುನಃ ಸರ್ಕಾರಕ್ಕೆ ಇರುವಂತೆ ಮಾಡಿದ್ದಾರೆ. ಉದಾಹರಣೆಗೆ ಸೆನೇಟಿಗೆ ಚುನಾವಣೆ ಮಾಡುವುದು, ಸಿಂಡಿಕೇಟಿಗೆ ಚುನಾವಣೆ ಮಾಡುವುದು, ಅಕಾಡೆಮಿಕ್ ಕೌನ್ಸಿಲಿಗೆ ಚುನಾಯಿಸುವದು, ಮತ್ತು ಈ ಯೂನಿವರ್ಸಿಟಿಗೆ ಬೇಕಾದಂಥಾ ರೂಲ್ಸ್ ರೆಗ್ಯುಲೇಷನ್ ಮಾಡುವುದು ಈ ಅಧಿಕಾರವನ್ನೆಲ್ಲಾ ಸರ್ಕಾರವೇ ತನ್ನ ಕೈಯಲ್ಲಿ ಇಟ್ಟುಕೊಂಡಿದೆ. ಇದು ಆಟಾನಮಸ್ ಆಗಿದ್ದ ಪಕ್ಷದಲ್ಲಿ ಈ ಯೂನಿವರ್ಸಿಟಿ ಯಾವಾಗ ಸರಿಯಾಗಿ ಕೆಲಸ ಮಾಡುವುಲ್ಲವೋ ಆವಾಗ ಮಾತ್ರ ಸರ್ಕಾರ ಕೈಹಾಕಬೇಕು. ಈವಾಗ ಈ ಯೂನಿವರ್ಸಿಟಿಗೆ ಕೈ ಹಾಕುವುದಾದರೆ ಈ ಯೂನಿವರ್ಸಿಟಿ ಸ್ವಯಂ ಆಡಳಿತ ನಡೆಸತಕ್ಕಂಥಾ ಸಂಸ್ಥೆಯಾಗುವುದಿಲ್ಲ. ಈ ಬಿಲ್ಲಿನಲ್ಲಿ ನೋಡಿದರೆ ಸರ್ಕಾರ ಪ್ರತ್ಯಕ್ಷವಾಗಿ ತನ್ನ ಅಧಿಕಾರಕ್ಕೆ ತೆಗೆದುಕೊಳ್ಳದಿದ್ದರೂ ಕೂಡ ಇದರ ಸಂಪೂರ್ಣ ಆಡಳಿತವನ್ನು ಪೂರ್ಣವಾಗಿ ಸರ್ಕಾರ ತನ್ನ ಹತೋಟಿಗೆ ತೆಗೆದುಕೊಂಡಿದೆ ಅಂತ ಹೇಳಬಹುದು.

ಇನ್ನು ಇದರಲ್ಲಿ ಪ್ರೊಛಾನ್ಸಲರ್ ಹೆಸರನ್ನು ಬಿಟ್ಟಿದ್ದೇವೆ ಅಂತ ಹೇಳಿದರು. ಆದರೂ ಕೂಡ ಇದರ ಎಲ್ಲಾ ಅಧಿಕಾರವನ್ನೂ ಸರ್ಕಾರವೇ ಇಟ್ಟುಕೊಂಡಿದೆ, ಇದು ಸೂಕ್ತವಲ್ಲ ಎಂದು ಹೇಳುತ್ತೇನೆ, ಇಷ್ಟು ಹಣ ಖರ್ಚು ಮಾಡಿ ಮಕ್ಕಳ ಭವಿಷ್ಯವನ್ನು ನೋಡತಕ್ಕಂಥ ಸರ್ಕಾರ ಈ ಬಗ್ಗೆ ಕಣ್ಣುಮುಚ್ಚಿಕೊಂಡು ಕೂತುಕೊಳ್ಳಬೇಕು ಎಂದು ಹೇಳುತ್ತಾ ಇಲ್ಲ. ಯೂನಿವರ್ಸಿಟಿ ಸರಿಯಾಗಿ ಕೆಲಸ ಮಾಡದೇಹೋದರೆ ಆವಾಗ ಕೈಹಾಕಬೇಕೇ ಹೊರತು ಎಲ್ಲಾ ಸಂದರ್ಭಗಳಲ್ಲೂ ಕೈಹಾಕಿದರೆ ಈ ಯೂನಿವರ್ಸಿಟಿಯನ್ನು ಬೆಳೆಸುವುದಕಾಗುವುದಿಲ್ಲ, ಇದರ ಬಗ್ಗೆ ಅನೇಕ ಕ್ಲಿಷ್ಟ ಸಮಸ್ಯೆಗಳು ಬಂದಮೇಲೆ ಸರ್ಕಾರ ಈಗ ಕಣ್ಣು ತೆರೆಯುತ್ತಾ ಇದೆ. ಏತಕ್ಕೆಂದರೆ ಇದರ ಅಪಾಯಿಂಟ್‌ಮೆಂಟ್ ವಿಚಾರದಲ್ಲಿ, ಇದರ ನಿಯಮಾವಳಿಗಳ ವಿಚಾರದಲ್ಲಿ, ಇದರ ಗ್ರೇಡೇಷನ್ ಲಿಸ್ಟ್ ವಿಚಾರದಲ್ಲಿ ಒಂದು ನೀತಿನಿಯಮಾವಳಿ ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಈ ಬಗ್ಗೆ ಕೋರ್ಟಿನಲ್ಲಿ ವ್ಯವಹಾರ ಆಗುತ್ತಾ ಇರುವುದನ್ನು ನಾವು ದಿನಾಲೂ ನೋಡುತ್ತಿದ್ದೇವೆ. ಇದರಿಂದ ಸರ್ಕಾರಕ್ಕೂ ಹಣ ಖರ್ಚು ವಿಶ್ವವಿದ್ಯಾನಿಲಯಕ್ಕೂ ಹಣ ಖರ್ಚು, ಈ ನಿಯಮಾವಳಿಗಳನ್ನು ಸರಿಪಡಿಸಿ ಅವರಿಗೆ

ನ್ಯಾಯ ದೊರಕುವುದಾದರೆ ಕೋರ್ಟಿಗೆ ಹೋಗುವುದು ತಪ್ಪುತ್ತದೆ. ವಿದ್ಯಾರ್ಥಿಗಳ ಗಲಭೆಯೂ ತಪ್ಪಿ ವಿದ್ಯಾಭ್ಯಾಸವೂ ಚೆನ್ನಾಗಿ ನಡೆಯುತ್ತದೆ, ಈ ಬಗ್ಗೆ ಮುಂದಾದರೂ ಕೂಡ ಸರಿಯಾದಂಥಾ ರೂಲ್ಸ್ ರೆಗ್ಯುಲೇಷನ್ಸ್ ಮಾಡಿ ಇದನ್ನು ಸಾಕಾದಷ್ಟು ಮಟ್ಟಿಗೆ ಕ್ರಮಪಡಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೂ ರಾಜ್ಯದಲ್ಲಿ ಹೊಸ ಹೊಸ ಕಾಲೇಜುಗಳು ವಿಪರೀತವಾಗಿ ಸೃಷ್ಟಿಯಾಗಿವೆ. ಇದು ಫ್ಲಡ್‌ಗೇಟ್ ಹಾಗೆ ಈ ಕಾಲೇಜುಗಳು ಆಗಿಹೋಗಿವೆ. ಇದಕ್ಕೆ ರೆಕಗ್ನಿಷನ್ ಕೊಡುವಾಗ ಸರಿಯಾಗಿ ಪರಿಶೀಲನೆ ಮಾಡಬೇಕು. ಈ ಊರಿನ ಕಾಲೇಜು ಅವಶ್ಯಕತೆ ಇದೆಯೇ ಈ ಕಾಲೇಜು ನಡೆಸುವುದಕ್ಕೆ ಅವರಲ್ಲಿ ಸಾಕಷ್ಟು ಹಣ ಇದೆಯೇ, ಈ ಕಾಲೇಜು ನಡೆಸುವುದಕ್ಕೆ ಸಾಕದಷ್ಟು ಸ್ಥಳ ಇದೆಯೇ, ಈ ಕಾಲೇಜು ನಡೆಸುವುದಕ್ಕೆ ಸಾಕಷ್ಟು ಸ್ಟಾಫ್ ಮತ್ತು ನುರಿತಿರತಕ್ಕಂಥ ಮೇಷ್ಟ್ರುಗಳು ಇದ್ದಾರೆಯೇ ಇವೆಲ್ಲವನ್ನೂ ಅವರು ಸರಿಯಾಗಿ ಒದಗಿಸಿಕೊಂಡಿದ್ದರೆ ಅಂಥಾವಕ್ಕೆ ರೆಕಗ್ನಿಷನ್ ಕೊಡಬೇಕು. ಮುಖ್ಯವಾಗಿ ಇರುವ ಬೇಗವಕ್ಕೆ ರೆಕಗ್ನಿಷನ್ ಕೊಡುವುದಕ್ಕಿಂತ ಮುಂಚಿತವಾಗಿ ಈ ಎಲ್ಲವನ್ನೂ ಪರಿಶೀಲನೆ ಮಾಡಬೇಕು. ಅವೆಲ್ಲಾ ನೋಡದೆ ರೆಕಗ್ನಿಷನ್ ಕೊಡಬಾರದು. ಅನೇಕ ಕಡೆಗಳಲ್ಲಿ ಜೂನಿಯರ್ ಕಾಲೇಜುಗಳು ಷೆಡ್‌ಗಳಲ್ಲಿ ನಡೆಯುತ್ತಾ ಇವೆ. ಉಪಾಧ್ಯಾಯರು ಇಲ್ಲದೆ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಆಗುತ್ತಾ ಇಲ್ಲ. ಮುಖ್ಯವಾಗಿ ಹೇಳುವುದಾದರೆ ಈ ಕಾಲೇಜುಗಳಿಗೆ ರೆಕಗ್ನಿಷನ್ ಕೊಡುವುದಾಗಲಿ, ಅದನ್ನು ಕಂಟಿನ್ಯೂ ಮಾಡುವುದಾಗಲಿ ದಾಕ್ಷಿಣ್ಯಕ್ಕೆ ಒಳಗಾಗದ ಪ್ರಭಾವಶಾಲಿಗಳ ದಾಕ್ಷಿಣ್ಯಕ್ಕೆ ಒಳಗಾಗದ ನಿಯಮಾವಳಿಗೆ ತಕ್ಕಂತೆ ಇದ್ದರೆ ಅಂಥಾವಕ್ಕೆ ರೆಕಗ್ನಿಷನ್ ಕೊಡಿ. ಇಲ್ಲದೇಹೋದರೆ ಯಾರ ಪ್ರಭಾವಕ್ಕಾದರೂ ಒಳಗಾಗಿ ಈ ಕಾಲೇಜುಗಳಿಗೆ ರೆಕಗ್ನಿಷನ್ ಕೊಡುವುದಾದರೆ ಅಂಥಾ ಸಂಸ್ಥೆಗಳಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಈ ಕಾಲೇಜುಗಳ ಬಗ್ಗೆ ರೆಕಗ್ನಿಷನ್ ಕೊಡುವಾಗ ಒಂದು ಬಿಗಿಯಾದ ಕ್ರಮ ಅನುಸರಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಮೇಲೆ ಹೊಸ ಯೂನಿವರ್ಸಿಟಿ ಆಗಬೇಕಾದರೆ ಸಾಕಷ್ಟು ತಡೆ ಮಾಡುವುದಕ್ಕೆ ಅವಕಾಶ ಮಾಡಿಕೊಂಡಿದ್ದೀರಿ. ಅದರೆ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮಲೆನಾಡಿನಲ್ಲಿ ಒಂದು ಯೂನಿವರ್ಸಿಟಿಯಾಗಬೇಕೆಂದು ಸಾಕಷ್ಟು ಪ್ರಯತ್ನಪಟ್ಟರು. ಅದು ಆಗದೆ ಈಗ ಹೊಸದಾಗಿ ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಒಂದಲ್ಲ ಎರಡಾಗಬೇಕು ಅಂತ ಮಾಡಿದ್ದೀರಿ, ಹಾಗೆಯೇ ಹೆಲ್ತ್ ಯೂನಿವರ್ಸಿಟಿ ಆಗಬೇಕು ಅಂತ ಮಾಡುತ್ತಿದ್ದೀರಿ. ಆದರೆ ಈ ಯೂನಿವರ್ಸಿಟಿ ಸಂಖ್ಯೆ ಯಾವ ಮಟ್ಟದಲ್ಲಿ ಬೆಳೆಸುತ್ತಿದ್ದೀರೋ ಅದೇಮಟ್ಟದಲ್ಲಿ ವಿದ್ಯಾ ಮಟ್ಟವನ್ನೂ ಕೂಡ ಬೆಳೆಸುವುದಕ್ಕೆ ಗಮನ ಕೊಡಬೇಕು. ಇಲ್ಲದೇ ಹೋದರೆ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಗಮನ ಯೂನಿವರ್ಸಿಟಿ ಮೇಲೆ ಹೋಗುತ್ತದೆ ಏಕಾಗ ಆ ಯೂನಿವರ್ಸಿಟಿ ಹೆಸರಿಗೆ ಮಾತ್ರ ಯೂನಿವರ್ಸಿಟಿ ಅಂತ ಇರುತ್ತದೇ ವಿನಾ ಅದು ಮುಂದುವರೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ.

ಮುಖ್ಯವಾಗಿ ಒಂದು ಅಂಶವನ್ನು ಹೇಳಬೇಕೆಂದರೆ, ಇಂದು ನಾವು ವಿದ್ಯಾಭ್ಯಾಸಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ ಕೆಮಿಸ್ಟ್ರಿ ಫಿಜಿಯಾಲಜಿ, ಸೈಕಾಲಜಿ, ಸೋಷಿಯಾಲಜಿ ಮುಂತಾದ ವಿಷಯಗಳಲ್ಲಿ ಪ್ರತಿವರ್ಷ ಅನೇಕ ಡಿಗ್ರಿಹೋಲ್ಡರ್ಸ್‌ನ್ನು ತಯಾರು ಮಾಡುತ್ತಿದ್ದೇವೆ. ಆದರೆ ಅವರುಗಳಿಗೆ ಅವರು ಕಲತಂತಹ ವಿಷಯಗಳಲ್ಲಿಯೇ ಸರಿಯಾದಂಥ ಕೆಲಸ ಸಿಗದೆ ಎಲ್ಲರೂ ಗುಮಾಸ್ತಗಿರಿ ಕೆಲಸಕ್ಕೆ ಹೋಗುತ್ತಿದ್ದಾರೆ. ಅದೇ ರೀತಿ ಹೆಣ್ಣುಮಕ್ಕಳು ಸಹ ನಾನಾ ವಿಷಯಗಳಲ್ಲಿ ಡಿಗ್ರಿ ಪಡೆದುಕೊಂಡು ಕೆಲಸವಿಲ್ಲದೆ, ಮುಂದೆ ಮಕ್ಕಳನ್ನು ಸಾಕುವ ಕೆಲಸ ಮಾಡುತ್ತಿದ್ದಾರೆ. ಇದರ ಬದಲು ಇನ್ನು ಮುಂದೆ ಕಲಿತವರಿಗೆ ಸರಿಯಾದಂಥ ಕೆಲಸ ಸಿಗುವಂತಹ ವಿದ್ಯಾಭ್ಯಾಸ ಕೊಡುವುದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಕೆಲವರು ಈಗ ಬಿ.ಎಸ್.ಸಿ., ಬಿ.ಕಾಮ್., ಬಿ.ಎ. ಮುಂತಾದ ಕಾಂಬಿನೇಷನ್ ತೆಗೆದುಕೊಂಡು ಪರೀಕ್ಷೆಯಲ್ಲಿ ಪಾಸು ಮಾಡುತ್ತಿದ್ದಾರೆ. ಇಂತಹವರಿಂದ ರಾಜ್ಯಕ್ಕೆ ಹಾಗೂ ದೇಶಕ್ಕೆ ಎಷ್ಟರಮಟ್ಟಿನ ಪ್ರಯೋಜನವಾಗಿದೆ ಎಂಬ ಬಗ್ಗೆ ಸರ್ಕಾರದವರು ಅಸೆಸ್‌ಮೆಂಟ್ ಮಾಡಿ ನೋಡಬೇಕು. ಈಗ ಕೆಲವರು ತಾವು ಮುಂದೆ ಏನಾಗಬೇಕು ಎಂಬ ಬಗ್ಗೆ ಒಂದು ಗುರಿ ಇಟ್ಟುಕೊಂಡು, ಕೆಲವೊಂದು ವಿಷಯಗಳನ್ನು ತೆಗೆದುಕೊಂಡು ಪರೀಕ್ಷೆಯಲ್ಲಿ ಪಾಸು ಮಾಡುತ್ತಾರೆ; ಆದರೆ ಅದರಿಂದ ಅವರಿಗೆ ಯಾವ ಪ್ರತಿಫಲವೂ ಸಿಗುತ್ತಿಲ್ಲ; ಅದಕಾರಣ ಜಾಬ್ ಓರಿಯೆಂಟೆಡ್ ತರಹ ವಿದ್ಯಾಭ್ಯಾಸ ಕೊಡುವುದು ಒಳ್ಳೆಯದೆಂದು

ಹೇಳುತ್ತೇನೆ. ಮುಖ್ಯವಾಗಿ ರಾಜ್ಯದ ಹಿತದೃಷ್ಟಿಯಿಂದ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಈಗಿನ ವಿದ್ಯಾಭ್ಯಾಸ ಪದ್ಧತಿ ಬದಲಾವಣೆಯಾಗಬೇಕೆಂದು ಹೇಳುತ್ತೇನೆ. ಈಗ ವಿದ್ಯಾರ್ಥಿಗಳಿಗೆ ಹೆಚ್ಚಿನ ತರಬೇತಿ ಕೊಡುವ ಸಂದರ್ಭ ಬಂದಾಗ ಎಸ್.ಎಸ್.ಎಲ್.ಸಿ. ಪಾಸಾದವರಿಗೆ ಮಾತ್ರ ತರಬೇತಿ ಕೊಡಲಾಗುತ್ತದೆಂದು ಹೇಳುತ್ತಾರೆಯೇ ಹೊರತು ಯಾರಿಗೆ ಅದನ್ನು ಕಲಿಯುವ ಅರ್ಹತೆ ಇದೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿಲ್ಲ; ಈ ಬಗ್ಗೆ ಸಹ ಸ್ವಲ್ಪ ಯೋಚನೆ ಮಾಡುವುದು ಅವಶ್ಯಕವಿದೆ ಎಂದು ನನಗೆ ಕಂಡುಬರುತ್ತಿದೆ; ಈಗ ಪರೀಕ್ಷೆಗಳಲ್ಲಿ ಪೇಪರ್ ವ್ಯಾಲ್ಯುಯೇಷನ್ ಮಾಡುವಾಗ ಮತ್ತು ಗ್ರೇಸಿಂಗ್ ಮಾರ್ಕ್ಸ್ ಕೊಡುವಾಗ ಬೇಕಾದಷ್ಟು ಅನ್ಯಾಯಗಳು ನಡೆಯುತ್ತಿವೆ; ಅನೇಕ ಸಂದರ್ಭಗಳಲ್ಲಿ ಫಲಿತಾಂಶವನ್ನು ಪ್ರಕಟ ಮಾಡಿದಾಗ ಪಾಸಾಗಿರುವವರು ಫೇಲ್ ಆಗಿರುತ್ತಾರೆ. ಫೇಲ್ ಆಗಬೇಕಾದವರೂ ಪಾಸಾಗಿರುತ್ತಾರೆ; ಅನೇಕ ಸಂದರ್ಭಗಳಲ್ಲಿ ಈ ರೀತಿಯಾಗಿರುವುದನ್ನು ನಾವು ನೋಡಿದ್ದೇವೆ. ಈ ರೀತಿಯಾಗುವುದನ್ನು ತಪ್ಪಿಸಬೇಕಾದರೆ ಸೀನಿಯರ್ ಐ.ಎ.ಎಸ್. ಆಫೀಸರ್ ಒಬ್ಬರು ಕಂಟ್ರೋಲರ್ ಆಫ್ ಎಕ್ಸಾಮಿನೇಷನ್ ಇರಬೇಕಾಗುತ್ತದೆ. ಈ ಬಗ್ಗೆ ನಾನು ಒಂದು ತಿದ್ದುಪಡಿಯನ್ನು ಸಹ ಕೊಟ್ಟಿದ್ದೇನೆ. ಉತ್ಸಾಹದಿಂದ ಮತ್ತು ದಕ್ಷತೆಯಿಂದ ಕೆಲಸ ಮಾಡುವತಂಹ ಯುವಕ ಐ.ಎ.ಎಸ್. ಆಫೀಸರನ್ನು ನೇಮಕ ಮಾಡಿದರೆ ಮಾತ್ರ ಚೆನ್ನಾಗಿ ಕೆಲಸ ಕಾರ್ಯಗಳಾಗುತ್ತವೆಂದು ನಾನು ಹೇಳುತ್ತೇನೆ. ನಾನು ಅನೇಕ ತಿದ್ದುಪಡಿಗಳನ್ನು ಈ ಬಿಲ್ ಬಗ್ಗೆ ಕೊಟ್ಟಿದ್ದೇನೆ. ಆ ತಿದ್ದುಪಡಿಗಳನ್ನು ತೆಗೆದುಕೊಂಡಾಗ ನಾನು ಅವುಗಳ ಬಗ್ಗೆ ಹೆಚ್ಚು ಮಾತನಾಡುತ್ತೇನೆ. ಮುಖ್ಯವಾಗಿ ವಿದ್ಯಾಭ್ಯಾಸ ಎಂಬುದು ಮನುಷ್ಯನಿಗೆ ಅತಿ ಮುಖ್ಯವಾದುದು: ಮನೆಗೆ ತಳಹದಿ ಯಾವರೀತಿ ಮುಖ್ಯವೋ ಅದರಂತೆ ಮನುಷ್ಯನ ಜೀವನದಲ್ಲಿ ಈ ವಿದ್ಯಾಭ್ಯಾಸ ಎಂಬುದು ಒಂದು ತಳಹದಿ ಇದ್ದಂತೆ; ಈಗ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ಖರ್ಚು ಮಾಡುತ್ತಿದ್ದಾರೆ; ಇಂದಿನ ವಿದ್ಯಾರ್ಥಿಗಳೇ ಮುಂದಿನ ಭಾವೀ ಪ್ರಜೆಗಳಾಗುವುದರಿಂದ ಅವರಿಗೆ ಸರಿಯಾದಂಥ ವಿದ್ಯಾಭ್ಯಾಸ ಕೊಡಬೇಕಾಗುತ್ತದೆ. ಜೊತೆಗೆ ಈ ದೇಶದ ಆರ್ಥಿಕ ಸ್ಥಿತಿ, ಈ ದೇಶದ ಉನ್ನತಿ ಮತ್ತು ಎಲ್ಲವನ್ನೂ ಕೂಡ ಪ್ರಗತಿಪರವಾಗಿ ತೆಗೆದುಕೊಂಡು ಹೋಗಬೇಕಾಗುತ್ತದೆ. ಆದಕಾರಣ ಈ ದೇಶಕ್ಕೆ ಅನುಕೂಲವಾಗುವ ರೀತಿಯಲ್ಲಿ ಸಾಕಷ್ಟು ಹಣವನ್ನು ಈ ವಿಶ್ವವಿದ್ಯಾನಿಲಯಗಳಿಗೆ ಸಹಾಯ ಮಾಡಬೇಕೆಂದು ಹೇಳಿ ಈಗ ತಂದಿರತಕ್ಕಂಥ ಬಿಲ್‌ಗೆ ನನ್ನ ಒಪ್ಪಿಗೆಯನ್ನು ಕೊಟ್ಟು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು (ಶಾಂತಿನಗರ). —ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ತಂದಿರತಕ್ಕಂಥ ದಿ ಕರ್ನಾಟಕ ಸ್ಟೇಟ್ ಯೂನಿವರ್ಸಿಟೀಸ್ ಬಿಲ್ ೧೯೭೬ ಏನಿದೆ, ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಇದೇ ಸಂದರ್ಭದಲ್ಲಿ ನಾಲ್ಕಾರು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಈ ರೀತಿಯಾದಂಥ ಒಂದು ಕಾಮನ್ ಯುನಿವರ್ಸಿಟಿ ಬಿಲ್ಲನ್ನು ತರಬೇಕಾದುದು ಬಹಳ ಅವಶ್ಯಕವಾಗಿತ್ತು; ಈ ವಿಚಾರದಲ್ಲಿ ಮಾನ್ಯ ವಿದ್ಯಾಮಂತ್ರಿಗಳು ಹೇಳಿದ ಮಾತಿನಲ್ಲಿಯೇ ಹೇಳಬೇಕೆಂದರೆ,

> "Streamlining of administration of the three Universities and also to have better financial control in the working of the three Universities."

ಎಂದು ಅವರು ಹೇಳಿದ್ದಾರೆ; ತಮಗೆಲ್ಲಾ ತಿಳಿದಿರುವಂತೆ ನಮ್ಮ ರಾಜ್ಯದಲ್ಲಿ ಈಗ ೩ ವಿಶ್ವವಿದ್ಯಾನಿಲಯಗಳಿವೆ ಒಂದು ಮೈಸೂರು ವಿಶ್ವವಿದ್ಯಾನಿಲಯ, ಎರಡನೆಯದು ಕರ್ನಾಟಕ ವಿಶ್ವವಿದ್ಯಾನಿಲಯ, ಮೂರನೆಯದು ಬೆಂಗಳೂರು ವಿಶ್ವವಿದ್ಯಾನಿಲಯ; ಈ ಮೂರು ವಿಶ್ವವಿದ್ಯಾನಿಲಯಗಳಿಗೂ ಒಂದು ಯೂನಿಫಾರಂ ಬಿಲ್ ಇರುವುದು ಒಳ್ಳೆಯದೆಂದು ಇದನ್ನು ತಂದಿದ್ದಾರೆ University Education is not an end in itself but it is a means to an end......... ಎಂದು ಹೇಳಬಹುದು ಮತ್ತು that an University is an intellectual laboratory ಎಂದು ಹೇಳಿದರೆ ತಪ್ಪಾಗಲಾರದು; ಈಗ ತಾನೆ ಮಾನ್ಯ ಶಾಮಣ್ಣನವರು ಮಾತನಾಡುವಾಗ ಹೇಳುತ್ತಿದ್ದರು, ಏನೆಂದರೆ ಇಂದು ಕಾಲೇಜುಗಳು ಸಿಕ್ಕಾಪಟ್ಟೆ ಪ್ರಾರಂಭವಾಗುತ್ತಿವೆ ಎಂದು; ಈ ರೀತಿ ಪ್ರಾರಂಭವಾಗಿದ್ದರೂ ಸಹ ನಮ್ಮ ರಾಜ್ಯದಲ್ಲಿ ಶೇಕಡಾ ೩೨ರಷ್ಟು ಮಂದಿಯನ್ನು ಮಾತ್ರ ವಿದ್ಯಾವಂತರನ್ನಾಗಿ ಮಾಡಲು ಸಾಧ್ಯವಾಗಿದೆ; ನಮ್ಮ ಕರ್ನಾಟಕ ಸರ್ಕಾರ ವಿದ್ಯಾಭ್ಯಾಸಕ್ಕಾಗಿ ಹೋದ ವರ್ಷ ೯೫

ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಸಹ ನಮ್ಮ ರಾಜ್ಯದಲ್ಲಿ ಇನ್ನೂ ಶೇಕಡಾ ೬೮ ಮಂದಿ ಏಡಗೈನಲ್ಲಿ ಹೆಬ್ಬೆಟ್ಟು ಒತ್ತುತ್ತಿದ್ದಾರೆ. University education should be given only to pick of the bench ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ನಾವು ಎಲ್ಲರಿಗೂ ಒಂದು ಮಿನಿಮಮ್ ಎಜುಕೇಷನ್ ಕೊಡುವುದು ಬಹಳ ಅಗತ್ಯವಿದೆ. ಆದರೆ ಇದರಲ್ಲಿ ಕೆಲವು ಲೋಪ ದೋಷಗಳು ಎಂದರೆ ಏನು; ಈ ಯೂನಿವರ್ಸಿಟಿ ಎಂಬುದು ಒಂದು (Autanamous) ಅಟಾನಮಸ್ ಬಾಡಿ. ಇದಕ್ಕೆ ಫೈನಾನ್ಶಿಯಲ್ ಕಂಟ್ರೋಲ್ ಜಾಸ್ತಿ ಇದೆ ಎಂಬುದಾಗಿ ಮಾನ್ಯ ಶಾಮಣ್ಣನವರು ಮತ್ತು ಮಾನ್ಯ ಕೃಷ್ಣನ್ ಅವರು ಹೇಳಿದರು; ಒಂದು ವಿಶ್ವವಿದ್ಯಾನಿಲಯ ಎಂದರೆ, ಅದರಲ್ಲಿ ೩ ಅಟಾನಮಸ್ ಬಾಡೀಸ್ ಇರುತ್ತವೆ Administrative, Financial, Academic. ಒಂದು ಅಡ್ಮಿನಿಸ್ಟ್ರೇಟಿವ್ ಅಟಾನಮಿ, ಎರಡು, ಫೈನಾನ್ಶಿಯಲ್ ಅಟಾನಮಿ, ಮೂರು ಅಕ್ಯಾಡಮಿಕ್ ಅಟಾನಮಿ ಎಂಬುದಾಗಿ; ಹೀಗಿರುವಾಗ ನಾವು ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು? ಈಗ ಉದಾಹರಣೆಗೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನೇ ತೆಗೆದುಕೊಂಡರೆ, ಇದನ್ನು ಸ್ಥಾಪನೆ ಮಾಡಿದಾಗ, ಇದನ್ನು City University or ಫೆಡರಲ್ ಯೂನಿವರ್ಸಿಟಿ ತರಹ ಮಾಡಬೇಕೆಂಬ ಮೂಲ ಉದ್ದೇಶದಿಂದ ಸ್ಥಾಪನೆ ಮಾಡಲಾಯಿತು; ಆದರೆ ಅದರಂತೆ ಮಾಡಲು ಏಕೆ ಸಾಧ್ಯವಾಗಲಿಲ್ಲ? ನನ್ನ ಮಿತ್ರರು ಕೇಳುತ್ತಿದ್ದರು. ಏನೆಂದರೆ Constituent Colleges or affiliated Colleges ಏನಿವೆ ಇವುಗಳು ಜಾಸ್ತಿ ಇವೆ ಮತ್ತು ವ್ಯಾಪ್ತಿ ಬಹಳ ದೊಡ್ಡದಾಗಿದೆ ಎಂದು: ಈ ಕಾರಣದಿಂದ ನಾವು ಹೆಚ್ಚು ಹೆಚ್ಚು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ; ಅದು ಅಷ್ಟು ಸುಲಭವೂ ಅಲ್ಲ: ಈಗ ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯೊಳಗೆ ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಕಾಲೇಜುಗಳು ಬರುತ್ತವೆ: ಈಗ ಬೆಂಗಳೂರಿಗೂ ಮತ್ತು ತುಮಕೂರಿಗೂ ಇರುವ ಅಂತರ ೪೫ ಮೈಲಿಗಳು: ಅದೇ ರೀತಿ ಬೆಂಗಳೂರು ಮತ್ತು ಕೋಲಾರಕ್ಕೆ ಇರುವ ಅಂತರ ಸುಮಾರು ೪೫ ಮೈಲಿಗಳು; ಆದ ಕಾರಣ ೪೫ ಮೈಲಿ ಸುತ್ತಳತೆಯಲ್ಲಿರುವ ಕಾಲೇಜುಗಳು ಇದರ ವ್ಯಾಪ್ತಿಯಲ್ಲಿ ಬರುವುದಕ್ಕೆ ಅವಕಾಶವಾಗುತ್ತದೆ. ಮುಖ್ಯವಾಗಿ ನಾವು ಈ ಬಿಲ್ಲನ್ನು ಗಜೇಂದ್ರಗಡ್ಕರ್ ಆಯೋಗದ Model ವರದಿಯ ಆಧಾರದ ಮೇಲೆ ಮಾಡಿಕೊಂಡು ಬಂದಿದ್ದೇವೆ. ಇಂತಹ ಒಂದು ಕಾಮನ್ ಯೂನಿವರ್ಸಿಟಿ ಬಿಲ್ ಇರುವುದು ಅಗತ್ಯವಾಗಿದೆ: ಈ ಯೂನಿವರ್ಸಿಟಿಯಲ್ಲಿ ೩ ವಿಭಾಗಗಳಿರುತ್ತವೆ. ಒಂದು ಸೆನೇಟ್, ಎರಡು ಸಿಂಡಿಕೇಟ್, ಮೂರು ಅಕ್ಯಾಡಮಿಕ್ ಕೌನ್ಸಿಲ್ ಎಂದು: ಈಗಿರುವ ಮೂರು ವಿಶ್ವವಿದ್ಯಾನಿಲಯಗಳ ಹಿನ್ನೆಲೆಯನ್ನು ಮತ್ತು ಅವುಗಳ ಚರಿತ್ರೆಯನ್ನು ನೋಡಿದಾಗ, ಹಿಂದೆ ಸುಮಾರು ೨೦೦ ರಿಂದ ೩೦೦ರ ವರೆಗೆ ಸೆನೆಟ್ ಮೆಂಬರ್ಸ್ ಎಂದು ಇದ್ದಾರೆ. ಕೆಲವು ಸಲ ಅಲ್ಲಿಯ ವೈಸ್-ಛಾನ್ಸ್‌ಲರ್ ಅವರಿಗೆ ಸೆನೆಟ್ ಮೆಂಬರ್ಸ್ ಯಾರು ಎಂಬುದೇ ಗೊತ್ತಾಗುತ್ತಿರಲಿಲ್ಲ; ಆದ ಕಾರಣ ಈ ಬಿಲ್‌ನಲ್ಲಿ ಆ ಒಂದು ಸಂಖ್ಯೆಯನ್ನು ೭೫ ರಿಂದ ೮೦ಕ್ಕೆ ಜನರಿಗೆ ಇಳಿಸಲಾಗಿದೆ ಈ ರೀತಿ ಇಳಿಸಿದ್ದರೂ ಸಹ ಆವರಲ್ಲಿ ಎಲ್ಲ ತರಹ ಜನಾಂಗಕ್ಕೂ ಪ್ರಾತಿನಿಧ್ಯ ಕೊಡಲಾಗಿದೆ. ಇದು ಒಂದು ಮಾಡಲ್ ಯೂನಿವರ್ಸಿಟಿ ಬಿಲ್ ಎಂದು ಹೇಳಬಹುದು: ಏಕೆಂದರೆ ಇದೇ ಮೊಟ್ಟಮೊದಲ ಬಾರಿಗೆ ಆರಿಸಿದಂತಹ ಸುಮಾರು ೭೫ ಜನರಿಗೆ ಇಲ್ಲಿ ಪ್ರಾತಿನಿಧ್ಯ ಕೊಡಲಾಗಿದ. ಅಂದರೆ ಆ ಹರಿಜನ ಮತ್ತು ಗಿರಿಜನರಿಗೆ, ಹಿಂದುಳಿದ ಜನಾಂಗದವರಿಗೂ ಇಲ್ಲಿ ಪ್ರಾತಿನಿಧ್ಯ ಕೊಡಲಾಗಿದೆ. ಹಿಂದುಳಿದ ಜನಾಂಗದವರು ಎಂದರೆ, ನಮ್ಮ ರಾಜ್ಯಾಂಗದಲ್ಲಿ ಈ ಬಗ್ಗೆ ಯಾವ ಪದಗಳನ್ನು ಉಪಯೋಗಿಸಿದ್ದಾರೆ, ಅದೇ ಪದಗಳನ್ನು ಇಲ್ಲಿಯೂ ಉಪಯೋಗಿಸಿದ್ದೇವೆ ಅಂದರೆ ಸೋಷಿಯಲ್ ಅಂಡ್ ಎಜುಕೇಷನಲ್ ಬ್ಯಾಕ್‌ವರ್ಡ್ ಕ್ಲಾಸ್ ಯಾರಿದ್ದಾರೆ ಮತ್ತು ಯಾರಿಗೆ ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಸಾಧ್ಯವಿಲ್ಲ, ಅಂತಹವರಿಗೆ ಇಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ಕೊಟ್ಟಿದ್ದೇವೆ ಈ ರೀತಿಯಾದ ಪ್ರಾತಿನಿಧ್ಯ ಕೊಟ್ಟಿರುವುದೇ another salient feature of this Bill ಎಂದು ಹೇಳಬಹುದು ಮತ್ತು Religion and National minoritiesಗೂ ಸಹ ಪ್ರಾತಿನಿಧ್ಯ ಕೊಟ್ಟಿರುತ್ತಾರೆ. ಪ್ರೊಛಾನ್ಸ್‌ಲರ್ ಇಲ್ಲದಿರುವುದೂ ನಾವು ಗಮನಿಸಬೇಕು. ಇದರಲ್ಲಿ ಒಂದು ವರ್ಗದವರಿಗೆ ಪ್ರಾತಿನಿಧ್ಯ ಕೊಡುವುದನ್ನು ಮರೆತಿದೆ ಎನ್ನುವ ಹಾಗೆ ಕಾಣುತ್ತದೆ. ಮುಖ್ಯವಾಗಿ ಫ್ರೀಡಮ್ ಫೈಟರ್ಸ್ ಏನು ಇದ್ದಾರೆ ಅವರಿಗೆ ಇದರಲ್ಲಿ ಪ್ರಾತಿನಿಧ್ಯ ಕೊಡಬೇಕಾಗಿತ್ತು. ಅದು ೮೦ ಜನ ಸೆನೆಟ್ ಮೆಂಬರ್ಸ್ ಇರುವಲ್ಲಿ ಅವರೂ ಸಹ ದೇಶದಲ್ಲಿ ಮತ್ತು ದೇಶದ ಒಂದು ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿದ ಜನ ಅವರಿಗೆ ಪ್ರಾತಿನಿಧ್ಯ ಕೊಟ್ಟಿದ್ದರೆ ನನಗೆ ಬಹಳ ಸಂತೋಷವಾಗುತ್ತಿತ್ತು. ಏತಕ್ಕೆಂದರೆ ವಿದ್ಯಾರ್ಥಿಗಳ ಬಗ್ಗೆ ಪ್ರಾತಿನಿಧ್ಯ ಕೊಡಬೇಕು ಎಂದು ಏನು ಹೇಳುತ್ತಿದ್ದಾರೆ ಆ ವಾದಕ್ಕೆ ಯಾವಾಗ ಕೊಡಬೇಕು, ಎಲ್ಲಿ ಕೊಡಬೇಕು ಎಂಬುದನ್ನು ಯೋಚನೆ ಮಾಡಬೇಕಾದ ವಿಷಯ.

5-30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಫ್ರೀಡಮ್ ಫೈಟರ್ಸ್‌ಗೆ ಪ್ರಾತಿನಿಧ್ಯ ಕೊಡಬೇಕು. ಏತಕ್ಕೆಂದರೆ ಅವರು ದೇಶಕ್ಕಾಗಿ ತ್ಯಾಗಮಾಡಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.—ಬ್ಯಾಕ್‌ವರ್ಡ್ ಕ್ಲಾಸ್‌ಗೆ ಇದೆ, ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಇದೆ. ಸಿಂಡಿಕೇಟ್ ಏನು ಇದೆ ಅದರಲ್ಲಿ ೨೦-೩೦ ಜನ ಇರುವುದನ್ನು ೧೫-೧೬ ಜನಕ್ಕೆ ಇಳಿಸಿದರೂ ಕೂಡ ರೇಷ್ಯೋ ಹಾಕಿದ್ದಾರೆ. ಇನ್ನು ಅಕೆಡೆಮಿಕ್ ಕೌನ್ಸಿಲ್‌ಗೆ ನಾವು ಕೈಹಾಕಿಲ್ಲ. ಕಾರಣವಾದರೂ ಇಷ್ಟೆ ಅದು ಕೇವಲ ಇಂಟಲೆಕ್ಚುಯಲ್ಸ್ ಏನು ಇದ್ದಾರೆ ಅವರಿಗೆ ಮಾಡುತ್ತಾರೆ. ಇನ್ನು ಯೂನಿವರ್ಸಿಟಿಯಲ್ಲಿ ಪದವೀಧರರು ಆಗುವುದಕ್ಕೆ ಎಲ್ಲರಿಗೂ ಸಾಧ್ಯವಾಗುವಂತೆ ಆಗಬೇಕು. ಎಲ್ಲಾ ಯೂನಿವರ್ಸಿಟಿಗಳಿಗೂ ಕಾಮನ್ ರೂಲ್ಸ್ ಮಾಡಿದರೆ ಒಳ್ಳೆಯದು. ಇನ್ನು ಆ ರೀತಿ ಮಾಡಿದರೆ Ministerial staffನ್ನು ಟ್ರಾನ್ಸ್‌ಫರ್ಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಒಂದು ಏನಾಗಿದೆ ಎಂದರೆ ರಿಸರ್ಚ್ ಸ್ಕಾಲರ್ಸ್ ಏನು ಇದ್ದಾರೆ ಅವರು ಒಂದು ಯೂನಿವರ್ಸಿಟಿಯಿಂದ ಮತ್ತೊಂದು ಯೂನಿವರ್ಸಿಟಿಗೆ ಟ್ರಾನ್ಸ್‌ಫರ್ ಮಾಡುವ ಹಾಗಿಲ್ಲ. ಕಾರಣವಾದರೂ ಇಷ್ಟೆ. ಅವರು ಯಾವುದೊಂದು ವಾತಾವರಣದಲ್ಲಿ ಬೆಳೆದು ಆ ವಾತಾವರಣಕ್ಕೆ ಹೊಂದಿಕೊಂಡು ತಮ್ಮ (Research) "ರಿಸರ್ಚ್" ಮಾಡಿರುತ್ತಾರೆ. ಆದ್ದರಿಂದ ಅಂತಹ ಅವರನ್ನು ಮೈಸೂರು ಯೂನಿವರ್ಸಿಟಿಯಿಂದ ಬೆಂಗಳೂರು ಯೂನಿವರ್ಸಿಟಿಗೆ ತಂದರೆ ಸರಿಹೋಗುವುದಿಲ್ಲ. ಇನ್ನು ಅಡ್ಮಿನಿಸ್ಟ್ರೇಷನ್ ನಡೆಸತಕ್ಕಂತ ಎಲ್ಲಾ ಕಡೆ ವೈಸ್ ಛಾನ್ಸಲರ್ಸ್ ಏನು ಇದ್ದಾರೆ ಅವರಿಗೆ ಪವರ್ಸ್ ಇಲ್ಲ. ಅದರಲ್ಲಿ ನಾಲ್ಕು ಜನರು ಇರುತ್ತಾರೆ. ಯೂನಿವರ್ಸಿಟಿಯಲ್ಲಿ ವೈಸ್‌ಛಾನ್ಸಲರ್‌ಷಿಪ್ ಅದು ಸಾಮಾನ್ಯವಾದ ಪೀಠವಲ್ಲ. ಅದು ಒಂದು ದೊಡ್ಡ ಗುರುಪೀಠ. ಅದಕ್ಕೋಸ್ಕರವಾಗಿಯೇ ೬೫ ವರ್ಷ ವಯಸ್ಸನ್ನು ಇಟ್ಟಿದ್ದಾರೆ. ಅವರಿಗೆ ತಮ್ಮ ಜೀವನದಲ್ಲಿ ದೊಡ್ಡ ಅನುಭವವಿರಬೇಕು ನಮ್ಮ ಯೂನಿವರ್ಸಿಟಿಯನ್ನು ಒಂದು ಮಾಡಲ್ ಯೂನಿವರ್ಸಿಟಿಯನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ. ಇದು ಒಂದು ದೊಡ್ಡ ಗುರುಪೀಠ ಎಂದು ಎಲ್ಲರಲ್ಲಿಯೂ ಒಂದು ಪವಿತ್ರವಾದ ಭಾವನೆಯಿದೆ. ಇದು ಒಂದು ಇಂಡಿಯನ್ ಮೆಥೆಡ್ ಎಂದು ಮಾಡಿದ್ದಾರೆ. ನಾವು ಅದನ್ನು ಮರೆಯಬಾರದು. ನಮ್ಮ ದಿವಂಗತ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು Mysore University ಸ್ಥಾಪಿಸಿದರು. ಇನ್ನು ನಮ್ಮ ದಿವಂಗತ ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಸ್ಥಾಪನೆ ಮಾಡಿದರು. ಇದಕ್ಕೆ ಹೆಚ್ಚಿನ ಗೌರವ ಇರಲೇಬೇಕು. ಇದರ ಒಂದು ಸ್ಥಾಪನೆಗೆ ಇವರೆಲ್ಲಾ ಕಾರಣರಾಗಿದ್ದಾರೆ. ನಮ್ಮ ಯೂನಿವರ್ಸಿಟಿಯಲ್ಲಿ ಒಂದು ಶಿಸ್ತು ಮತ್ತು ದೇಶಾಭಿಮಾನ ಬೆಳೆಸಿಕೊಂಡು ಬರುವ ಬಗ್ಗೆ ಎಲ್ಲರೂ ಒಪ್ಪಿಕೊಂಡಿದ್ದಾರೆ. ಮಾನ್ಯ ಶಾಮಣ್ಣನವರು ಮುಂದಿನ ಪೀಳಿಗೆಗೆ ಒಂದು ರೀತಿಯಾದ ಮಾರ್ಗದರ್ಶನ ನೀಡುವಂತೆ ಒಳ್ಳೆಯ ಶಿಸ್ತು ಮತ್ತು ಸಂಯಮದಿಂದ ನಡೆಯುವ ರೀತಿಯಲ್ಲಿ ಯೂನಿವರ್ಸಿಟಿ ಇರಬೇಕು ಎಂದು ಹೇಳಿದ್ದಾರೆ. ಆದ್ದರಿಂದ ವಿದ್ಯಾರ್ಥಿಗಳನ್ನು ಅಂತಹ ಒಳ್ಳೆಯ ವಾತಾವರಣದಲ್ಲಿ ಬೆಳೆಸಬೇಕು. ಅದನ್ನು ಅರಿತುಕೊಂಡೇ ನಮ್ಮ ಬೆಂಗಳೂರು ಯೂನಿವರ್ಸಿಟಿ ವೈಸ್‌ಚಾನ್ಸಲರ್ ರವರು ಬೆಂಗಳೂರು ಯೂನಿವರ್ಸಿಟಿಯನ್ನು ಊರಿನ ಹೊರಗಡೆ ತೆಗೆದುಕೊಂಡು ಹೋಗಿ ಹಾಕಿದ್ದಾರೆ ಇದರಿಂದ ಮಕ್ಕಳಲ್ಲಿ ಒಳ್ಳೆಯ ಶಿಸ್ತು ಮತ್ತು ನಡವಳಿಕೆಗಳು ಬರುವುದರಲ್ಲಿ ಸಂದೇಹವಿಲ್ಲ. ಇವೆಲ್ಲಾ ಅಂಗಡಿಗಳಲ್ಲಿ ಸಿಕ್ಕುವ ವಸ್ತುಗಳಲ್ಲ. ಆದ್ದರಿಂದ ಮಕ್ಕಳನ್ನು ಅಂತಹ ಒಂದು ಒಳ್ಳೆಯ ವಾತಾವರಣದಲ್ಲಿ ಬೆಳೆಸಬೇಕು. ಅಕೆಡೆಮಿಕ್ ಸೈಡ್‌ನಲ್ಲಿ ಸ್ಕಾಲರ್ಸ್‌ಗೆ ಪ್ರಾತಿನಿಧ್ಯ ಕೊಡಬೇಕು ಮತ್ತು ಅಪಾಯಿಂಟ್‌ಮೆಂಟ್ಸ್ ಕೊಡುವಾಗ ರಿಸರ್ವೇಶನ್ ಇಟ್ಟುಕೊಳ್ಳದೆ ಅದನ್ನು ಪೂರ್ತ ಮೆರಿಟ್‌ಗೆ ಕೊಡಬೇಕು.

ಇನ್ನು ಅಡ್ಮಿನಿಸ್ಟ್ರೇಷನ್ ಆಫ್ ಫೈನಾನ್ಸ್ ಇದನ್ನು ನಾವು ಇಟ್ಟುಕೊಳ್ಳಬೇಕು. ಕಾರಣವಾದರೂ ಇಷ್ಟೆ. ಇಷ್ಟು ಫೈನಾನ್ಸ್ ಕೊಟ್ಟಮೇಲೆ ಅವರಮೇಲೆ ಒಂದು ಹಿಡಿತ ಅಂದರೆ ಕಂಟ್ರೋಲ್ ಇಲ್ಲದೆ ಹೋದರೆ ಯಾವರೀತಿ ಹಣ ಖರ್ಚುಮಾಡಿದ್ದಾರೆಂದು ನೋಡಿದರೆ ಸೆನೆಟ್ ಮತ್ತು ಸಿಂಡಿಕೇಟ್ ಮೆಂಬರ್ಸ್ ಎಷ್ಟು ಖರ್ಚು ಮಾಡಿದ್ದಾರೆ ಅದರಿಂದಲೇ ಗೊತ್ತಾಗುತ ದೆ. ಹಣದ ಹಿತದೃಷ್ಟಿಯಿಂದ ಇದರ ಮೇಲೆ ನಮ್ಮ ಕಂಟ್ರೋಲ್ ಇರಬೇಕು ಎಂದು ಹೇಳುತ್ತೇನೆ. ಇನ್ನು ಅಕೆಡೆಮಿಕ್ ಪ್ರೋಗ್ರೆಸ್ ಏನು ಮಾಡಿದೆ ಎನ್ನುವ ಬಗ್ಗೆ ಕೂಡ ನಾವು ಗಮನಿಸಬೇಕಾಗಿದೆ. ಏನು ಮದ್ರಾಸ್ ಯೂನಿವರ್ಸಿಟಿ ಒಂದು ಹೆಸರನ್ನು ಗಳಿಸಿದೆ ಅದನ್ನು ನಾವು ಗಳಿಸಬೇಕು. ಮದ್ರಾಸ್ ಯೂನಿವರ್ಸಿಟಿ ಈಸ್ ದಿ ಮಾಡಲ್ and the biggest ಯೂನಿವರ್ಸಿಟಿ ಇನ್ ದಿ ಈಸ್ಟ್. ಅಧ್ಯಕ್ಷರೇ, ಕೆಲವು ಸಂದರ್ಭಗಳಲ್ಲಿ ನಾನ್ ಟೀಚಿಂಗ್

ಸ್ಟಾಫ್‌ಗೆ ಇವರಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ನಮ್ಮ ಮಿತ್ರರು ಹೇಳಿದರು ಇದು ನಮ್ಮ ಗುಂಪಿನವರು ಅಥವಾ ಅವರ ಗುಂಪಿನವರ ಪ್ರಶ್ನೆ ಬರುವುದಿಲ್ಲ ಆ ರೀತಿ ಎಜುಕೇಷನ್ ಇನ್‌ಸ್ಟಿಟ್ಯೂಷನ್‌ನಲ್ಲಿ ಪ್ರಾತಿನಿಧ್ಯ ಕೊಡುವುದು ಸರಿಯಲ್ಲ ಮಾನ್ಯ ವಿದ್ಯಾಮಂತ್ರಿಗಳು ಏನು ಈ ಬಿಲ್ಲನ್ನು ತಂದಿದ್ದಾರೆ ಇದು ಒಂದು ಮಾಡಲ್ ಬಿಲ್ಲು ಎಂದು ಹೇಳಿ ಇದನ್ನು ಬೆಂಬಲಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ. ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ತಂದಿರತಕ್ಕ ಈ ಮಸೂದೆ ಸ್ವಾಗತಿಸಬೇಕಾದುದಾಗಿದೆ. ಕಾರಣವಾದರೂ ಇಷ್ಟೇ. ನಮ್ಮ ರಾಜ್ಯದಲ್ಲಿರತಕ್ಕಂಥ ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಮತ್ತು ಮೈಸೂರು ವಿಶ್ವವಿದ್ಯಾನಿಲಯ— ಈ ಮೂರು ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ಒಂದು ಏಕ ರೂಪವಾದಂಥ ಶಾಸನವನ್ನು ಮಾಡಬೇಕು ಮತ್ತು ಶಾಸನದ ಮೂಲಕ ಇದುವರೆಗೂ ಆಡಳಿತ ದಲ್ಲಿ ಕಂಡುಬಂದಂಥ ಲೋಪದೋಷಗಳನ್ನು ನಿವಾರಣೆಮಾಡಬೇಕು, ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕು, ಆಡಳಿತದಲ್ಲಿ ದಕ್ಷತೆ ಹೆಚ್ಚಿದರೆ ವಿದ್ಯಾ ಗುಣಮಟ್ಟವು ಸಹ ಹೆಚ್ಚುತ್ತದೆನ್ನುವ ಉದ್ದೇಶಗಳನ್ನು ಒಳಗೊಂಡದ್ದರಿಂದ ಈ ಮಸೂದೆಯನ್ನು ಸ್ವಾಗತಿಬೇಕಾದುದು ನನ್ನ ಕರ್ತವ್ಯ. ಆದರೆ ಈ ಒಂದು ಮಸೂದೆ ಸರ್ವಾಂಗಸುಂದರವಾದಂಥ ಮಸೂದೆ ಎಂದು ಕರೆಸಿ ಕೊಳ್ಳುವ ಮಟ್ಟದಲ್ಲಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕಾರಣವಾದರೂ ಇಷ್ಟೇ.

ಉಪಾಧ್ಯಕ್ಷರು.—ಸರ್ವಾಂಗ ಸುಂದರವಾಗಿದೆಯೆಂದು ಯಾರು ಹೇಳಿದರು ?

ಶ್ರೀ ಎಚ್. ಟಿ. ಕೃಷ್ಣಪ್ಪ.— ನನ್ನ ಅನುಭವದ ಪ್ರಕಾರ ಹೇಳಿದ್ದು, ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಸೆನೆಟ್ ಮತ್ತು ಸಿಂಡಿಕೇಟ್ ಬಹಳ ಪ್ರಾಮುಖ್ಯವಾದಂಥ ಅಂಗಸಂಸ್ಥೆಗಳು ಅವುಗಳ ರಚನೆ ನೋಡಿದಾಗ ಇವು ಸರ್ಕಾರದ ಒಂದು ಇಲಾಖೆಯಂತೆ ವಿಶ್ವವಿದ್ಯಾನಿಲಯಗಳ. ಪರಿಣಮಿಸುತ್ತಿವೆ ಎಂಬ ಒಂದು ಅಂಜಿಕೆಯನ್ನು ಮೂಡಿಸವುದಾಗಿವೆ. ಸೆನೆಟ್ ಅಂಗರಚನೆ ಬಗ್ಗೆ ನಾನು ಹೇಳುವುದಾದರೆ ಈ ಮಸೂದೆಯ 21ನೇ ಕಲಂನಲ್ಲಿರುವ ಪ್ರಕಾರ ಸುಮಾರು 70ಕ್ಕೂ ಮೀರಿ ಇರುವ ಸೆನೆಟ್‌ನ ಸದಸ್ಯರ ಸಂಖ್ಯೆಯಲ್ಲಿ ಕೇವಲ 29 ಜನರು ಚುನಾವಣೆಯ ಮೂಲಕ ಬರುವ ಸದಸ್ಯರು ಇದ್ದಾರೆ. ಇನ್ನುಳಿದವರು ಒಂದಲ್ಲ ಒಂದು ರೀತಿಯಲ್ಲಿ ನಾಮಕರಣ ರೀತಿಯಲ್ಲಿ ಬರುವ ಸದಸ್ಯರಾಗಿದ್ದಾರೆ. ಆದ್ದರಿಂದ ವಿಶ್ವವಿದ್ಯಾನಿಲಯದ ಸ್ವಾಯತ್ತತೆ ಎಂದೇನು ಕರೆಯುತ್ತೇವೋ ಆ ಸ್ವಾಯತ್ತತೆ ಸಂಪೂರ್ಣವಾಗಿ ಮಾಯವಾಗಿದೆಯೆಂದು ನಾನು ಹೇಳಬೇಕಾಗಿದೆ. ಈ ರೀತಿ ಸ್ವಾಯತ್ತತೆ ಹೆಸರಿನಲ್ಲಿ ಸರ್ಕಾರದ ಹಸ್ತಕ್ಷೇಪ, ಪ್ರಭಾವ ನಿಯಂತ್ರಣ ಸದಾ ಕಾಲವೂ ವಿಶ್ವವಿದ್ಯಾನಿಲಯಗಳ ಮೇಲೆ ಇರುವ ಹಾಗೆ ಮಾಡುವುದಾದರೆ ಹೇಗೆ ? ಅದರ ಬದಲು ಒಬ್ಬ ಅಡಿಷನಲ್ ಡೈರೆಕ್ಟರನ್ನು ವಿದ್ಯಾ ಇಲಾಖೆಗೆ ನೇಮಿಸಿ ಅವರಿಗೆ ಆ ಆಡಳಿತವನ್ನು ವಹಿಸಿಕೊಟ್ಟರೆ ಆಗ ಅದರಿಂದ ಹೆಚ್ಚಿಗೆ ಪ್ರಯೋಜನವಾಗುತ್ತದೆ, ಅಂತಹವರು ಸ್ವತಂತ್ರವಾಗಿ ಎಲ್ಲವನ್ನೂ ವಿಚಾರಮಾಡಬೇಕು. ತಮ್ಮ ಸಮಸ್ಯೆಗಳನ್ನು ತಾವೇ ವಿಚಾರಮಾಡಿ ಪರಿಹಾರ ಹುಡುಕಬೇಕು. ಅಂತಹ ಸ್ವತಂತ್ರವಾದ ಅಧಿಕಾರವನ್ನು ಹೊಂದಿರಬೇಕೆಂಬ ಸದುದ್ದೇಶದಿಂದ ಈ ವಿಶ್ವವಿದ್ಯಾನಿಲಯ ಗಳನ್ನು ನಿರ್ಮಾಣಮಾಡುವುದಾದರೆ ಈಗ ಸರ್ಕಾರದ ಪ್ರಭಾವ ಇವುಗಳ ಮೇಲೆ ಹಲವಾರು ರೂಪ ಗಳಲ್ಲಿ ವಿನಿಷಯೋ ಅದು ಸದಾ ಕಾಲವೂ ಆ ರೀತಿಯಾಗಿ ಇರಬಾರದು. ಸೆನೆಟ್ಟಿನ ರಚನೆಯಲ್ಲಿ ಲೋಪದೋಷಗಳಿಂದ ಕೂಡಿದೆ. ಚುನಾವಣೆಯ ಪ್ರತಿನಿಧಿಗಳಿಗೆ ಅಲ್ಲಿ ಹೆಚ್ಚಿಗೆ ಅವಕಾಶವಿರಬೇಕು ನನ್ನ ಮೊದಲನೆಯ ಆಕ್ಷೇಪಣೆ ಈಗಲಾದರೂ ವಿದ್ಯಾ ಸಚಿವರು ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅವಕಾಶವನ್ನು ಅಲ್ಲಿ ಕೊಡುವುದಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಸಿಂಡಿಕೇಟಿನಲ್ಲಿಯೂ ಸಹ ಚುನಾಯಿತ ಸದಸ್ಯರು ಯಾರೂ ಇಲ್ಲ. ಪ್ರಜಾಪ್ರಭುತ್ವದ ಹೆಸರು ಹೇಳತಕ್ಕ ಜನರು ಈಗಿನ ವ್ಯವಸ್ಥೆಯಲ್ಲಿ ತಾವು ಈ ಮಸೂದೆಯಲ್ಲಿ ತಂದಿರುವ ಪ್ರಕಾರ ಇಲ್ಲವೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಈಗ ಒಂದು ಕಡಿಮೆ ಮಾಡಿದ್ದೇವೆ. ಮೊದಲು ನಾಲ್ಕು ಇತ್ತು. ಈಗ 3 ಆಯಿತು.

ಶ್ರೀ ಎಚ್. ಟಿ. ಕೃಷ್ಣಪ್ಪ.—ನನ್ನ ಅಭಿಪ್ರಾಯ ನೇರವಾಗಿ ಚುನಾವಣೆಯಲ್ಲಿ ಆಯ್ಕೆಯಾಗಿ ಬರತಕ್ಕ ಸದಸ್ಯರಿಗೂ ಸಿಂಡಿಕೇಟಿನಲ್ಲಿಯೂ ಕೂಡ ಅವಕಾಶ ಇರಬೇಕಾಗಿತ್ತು.

ವಿಶ್ವವಿದ್ಯಾನಿಲಯಗಳಲ್ಲಿ ಸ್ಥಾನಗಳನ್ನು ಮೀಸಲಿಡುವಾಗ, ಸ್ವಾತಂತ್ರ್ಯ ಹೋರಾಟದಲ್ಲಿ ನೊಂದಂಥವರ ಮಕ್ಕಳಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಇನ್ನೊಂದು ಅಂಶವನ್ನು ನಮೂದು ಮಾಡಿದ್ದೀರಿ. ಈ ಒಂದು ಕಾರಣದಿಂದ ಅದು ಅಸಮಂಜಸವಾಗುತ್ತದೆ. ಇದರಿಂದ ಯಾವ ಉದ್ದೇಶವೂ ಈಡೇರಿಸಲಾರದು. ಸ್ವಾತಂತ್ರ್ಯ ಹೋರಾಟ ನಡೆದುದು 1947ರಿಂದ ಆಚೆಗೆ ಅದರಲ್ಲಿ ಅಭಿಪ್ರಾಯ ಭೇದವೇನೂ ಇಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದಂಥ ಜನರು ಈಗಾಗಲೇ ಪ್ರಾಪ್ತವಯಸ್ಕರಾಗಿರತಕ್ಕ 20 ವರ್ಷದ ಮಕ್ಕಳನ್ನು ಪಡೆದಿರುತ್ತಾರೆ. ಇವತ್ತು ಅಂತಹವರಿಗೆ 50 ವರ್ಷಗಳಾಗಿದ್ದರೆ ಮದುವೆಯಾಗಿರತಕ್ಕ 20 ವರ್ಷದ ಮಗನನ್ನು ಪಡೆದಿರುತ್ತಾನೆ. ಅಂತಹವನು ವಿಶ್ವವಿದ್ಯಾನಿಲಯಕ್ಕೆ ಹೋಗುವ ಅವಕಾಶ ಮೀರಿರುತ್ತಾನೆ. ಆ ಒಂದು ಅವಕಾಶ ಇಟ್ಟುಕೊಂಡು ಸುಳ್ಳು ಸರ್ಟಿಫಿಕೇಟ್ ತೆಗೆದುಕೊಂಡು ಅಲ್ಲಯೂ ಸಹ ಸರ್ಕಾರಕ್ಕೆ ವಂಚನೆಮಾಡಿ ಅವಕಾಶ ಪಡೆಯುವ ಸಂದರ್ಭ ಇದರಿಂದ ಬರುತ್ತವೆ. ಮೊಮ್ಮಕ್ಕಳು ಮರಿ ಮಕ್ಕಳು ಬಗ್ಗೆ ನಮ್ಮದು ತಕರಾರು ಇದ್ದರೂ, ಆ ಒಂದು ಭಾವನೆ ಈಗ ಇದ್ದೇ ಇರುವುದ ರಿಂದ, ನೀವು ಯಾವ ಒಂದು ಉದ್ದೇಶದಿಂದ ಈ ಬಿಲ್ಲನ್ನು ತೆಗೆದುಕೊಂಡು ಬಂದಿದ್ದೀರೋ ಆ ಉದ್ದೇಶ ಈಡೇರಿಸುವುದಕ್ಕಾಗುವುದಿಲ್ಲ. ಸುಳ್ಳು ಸರ್ಟಿಫಿಕೇಟ್‌ಗಳನ್ನು ಸೃಷ್ಟಿಮಾಡಿಕೊಂಡು ಅಲ್ಲಿ ಜಾಗಗಳನ್ನು ಪಡೆಯುವವರಿಗೆ ಪರೋಕ್ಷವಾಗಿ ನೀವೇ ಉತ್ತೇಜನ ಕೊಟ್ಟಹಾಗಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅದಕ್ಕೆ ಪ್ರಾವಿಜನ್ ಎಲ್ಲಿದೇ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಫ್ರೀಡಂ ಫೈಟರ್ಸ್ ಚಿಲ್ಡ್ರನ್ ಎಂದು ಇದೆ. ವಿಶ್ವವಿದ್ಯಾನಿಲಯ ವನ್ನು ಪ್ರವೇಶ ಮಾಡುವ ವಯಸ್ಸು ಅಂತಹವರಿಗೆ ಇಲ್ಲವೇ ಇಲ್ಲ.

ಇನ್ನು ಇನ್‌ಸ್ಪೆಕ್ಷನ್ ಮತ್ತು ಕಂಟ್ರೋಲ್ ಸಂಬಂಧವಾಗಿ ಹೇಳುವುದಾದರೆ ಎಲ್ಲಾ ಅಧಿಕಾರ ವನ್ನೂ ಸರ್ಕಾರದವರೇ ಇಟ್ಟು ಕೊಂಡಿದ್ದಾರೆ. ಅದೆಲ್ಲವೂ ಸ್ವೀಪಿಂಗ್ ಪವರ್ಸ್ ಎಂದು ಹೇಳ ಬಹುದು. ಯಾವ ಕಾಲದಲ್ಲಿಯೇ ಆಗಲೀ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಅದನ್ನು ರದ್ದು ಮಾಡುವ ಹಾಗೆ ಇಲ್ಲ. ಅವ್ಯವಸ್ಥೆಯನ್ನು ಅನುಸರಿಸುವುದನ್ನು ಸದಾ ಕಾಲವೂ ಇಟ್ಟುಕೊಂಡರೆ ಯಾವಾಗಲೂ ಈ ಕೆಲಸ ಮಾಡುವುದಕ್ಕಾಗುತ್ತದೆಯೇ ? ಅವರು ಯಾವಾಗಲೂ ನಿಮ್ಮ ಅರ್ಜಿ ಯನ್ನು ಅನುಸರಿಸಿ ಕೆಲಸಮಾಡಬೇಕು. ಆದ್ದರಿಂದ ಸರ್ಕಾರ ಬದಲಾವಣೆಮಾಡುವ ಅಧಿಕಾರ ನೇರವಾಗಿ ಪಡೆದುಕೊಂಡರೆ ಪತ್ರಿಯೊಂದು ಗುಂಪಿನವರೂ ಅರ್ಜಿ ಕೊಡುತ್ತಾರೆ. ರಾಜಕೀಯ ಪ್ರಭಾವ ನಿಮ್ಮ ಮೇಲೆ ಹೇರುವ ಪರಿಸ್ಥಿತಿ ಬರುತ್ತದೆ. ಅಂಥಾದ್ದನ್ನು ತಪ್ಪಿಸುವುದಕ್ಕೆ ಅವರಿಗೂ ಸಹ ಅಧಿಕಾರವನ್ನು ಕೊಟ್ಟು ಆ ಅಧಿಕಾರ ದುರುಪಯೋಗಮಾಡಿಕೊಂಡಿದ್ದಾರೆನ್ನುವುದು ಖಚಿತ ವಾಗಿ ಗೊತ್ತಾದರೆ ಸರ್ಕಾರ ಕೊನೆಯಲ್ಲಿ ಒಂದು ನಿಯಂತ್ರಣ ಇಡತಕ್ಕ ಒಂದು ಅವಕಾಶವನ್ನು ಕಾನೂನಿನಲ್ಲಿ ಮಾಡಿಕೊಳ್ಳಬೇಕು. ಸದಾ ಕಾಲದಲ್ಲಿಯೂ ಎಲ್ಲಾ ವಿಧಾವಾದಂಥ ತೀರ್ಮಾನ ಗಳನ್ನು ರದ್ದುಮಾಡುವ ಅಧಿಕಾರ ಏನಿದೆಯೋ ಅದು ತುಂಬಾ ಹೆಚ್ಚಿನ ಅಧಿಕಾರ. ಆದರಿಂದಾಗಿ ನಿಜವಾಗಿಯೂ ಸಹ ವಿಶ್ವವಿದ್ಯಾನಿಲಯಗಳ ಆಡಳಿತ ಸ್ವತಂತ್ರವಾಗಿ ನಡೆಯುವುಕ್ಕಾಗುವುದಿಲ್ಲ. ಅದೂ ಸಹ ಒಂದು ವಿಧವಾದಂಥ ರಾಜಕೀಯ ಗೊಂದಲಕ್ಕೆ ಅವಕಾಶ ಕೊಟ್ಟಹಾಗಾಗುತ್ತದೆ. ಕಲಂ 8ರ ಪ್ರಕಾರ ಏನು ಹೇಳಿದೆ ಎಂಬುದನ್ನು ನಾನು ಇವತ್ತು ಹೇಳಬೇಕಾಗಿದೆ. ಅದು ಈ ರೀತಿ ಇದೆ ; Sub-Clause (8) of Clause 8 of the Bill reads thus ;

"Notwithstanding anything in the preceding sub-sections the State Government may, by order published in the Official Gazette, any annual proceedings of the University which is not in conformity with this Act, the Statutes or the Ordinances." ಇದು ಈ ಆಕ್ಟಿಗೆ ಅನುಗುಣ ವಾಗಿದೆಯೋ ಇಲ್ಲವೋ ಎಂಬುದನ್ನು ತೀರ್ಮಾನಮಾಡುವವರು ಯಾರು ? ನಿಮಗೆ ಅರ್ಜಿ ಕೊಟ್ಟಾದ ಮೇಲೆ ಅಧಿಕಾರವನ್ನು ಪಡೆದುಕೊಂಡುಮೇಲೆ ತಮ್ಮ ಹತ್ತಿರ ಅರ್ಜಿಗಳು ಬರುತ್ತವೆ. ಆಗ ಲೆಕ್ಕವಿಲ್ಲದಷ್ಟು ಅರ್ಜಿಗಳು ಬರುತ್ತವೆ. ನೀವು ಆಗ ಬರೀ ಮೆರಿಟ್ಸ್ ಅಥವಾ ಡಿಮೆರಿಟ್ಸ್ ಮೇಲೆ ಡಿಸೈಡ್ ಮಾಡುತ್ತೀರಿ. ಆಗ ಪ್ರಭಾವಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ವಿಶ್ವವಿದ್ಯಾನಿಲಯದ ದಿನನಿತ್ಯದ ಆಡಳಿತದಲ್ಲಿಯೂ ಸಹ ಹಸ್ತಕ್ಷೇಪ ಮಾಡು

ವಂತಹ ಪರಿಸ್ಥಿತಿ ಒದಗಿ ಬರುವ ಕಡೆ ನೀವು ನಿಜವಾಗಿಯೂ ಎಚ್ಚರವಾಗಿರಬೇಕು. "Provided that before making any such order the State Govt. Shall call upon the University to show cause why such an order should not be made if any cause is shown within a reasonable time, shall consider the same."

ಇವು ಸಾಮಾನ್ಯವಾಗಿರತಕ್ಕಂಥ ಕ್ಲಾಜ್. ಆ ಮೇಲೆ ಅದಕ್ಕೂ ಹಿಂದೆ ಇರತಕ್ಕಂಥ ಕಲಂಗಳಲ್ಲಿಯೂ ಸಹ ಹೆಚ್ಚಿನ ಅಧಿಕಾರವನ್ನು ಕೊಡಲಾಗಿದೆ ಎನ್ನುವುದನ್ನೂ ಸಹ ನೆನಪಿನಲ್ಲಿಟ್ಟುಕೊಳ್ಳಬೇಕು. Where the Syndicate does not within a reasonable time, take action to the satisfaction of the State Govt, The Syndicate shall furnish such returns, statements accounts etc., as the State Govt. may from time to time require." ಮತ್ತೆ ಬೇರೆ ಭಾಗಗಳ ಬಗ್ಗೆ ನನಗೆ ಅಷ್ಟೊಂದು ಚಿಂತೆ ಇಲ್ಲ. ಮತ್ತೆ ಉಪ ನಿಬಂಧನೆ 3 ಯಿದೆ ಅಲ್ಲಾ ಆದರಿಂದ ನಿಮಗೂ ಸಹ ತೊಂದರೆಯಾಗುತ್ತದೆ ಎನ್ನುತಕ್ಕಂಥ ಭೀತಿ ನನಗಿದೆ ಅದನ್ನು ತಾವು ಛಾನ್ಸಲರ್‌ಗೆ ಕೊಡತಕ್ಕಂಥದ್ದು ಸರಿಯಾಗಿರುತ್ತದೆಯೋ ಎನ್ನತಕ್ಕಂಥ ದೃಷ್ಟಿಯಿಂದ ಕೇಳುತ್ತಿದ್ದೇನೆ. ಏತಕ್ಕೆಂದರೆ ತಾವು ಈ ಶಾಸನ ಸಭೆಯಲ್ಲೂ ಸಹ ಸದಸ್ಯರಾಗಿರುತ್ತೀರಿ, ಮಂತ್ರಿಗಳಾಗಿರುತ್ತೀರಿ, ಹಾಗೂ ಪಕ್ಷದ ಸದಸ್ಯರೂ ಆಗಿರುತ್ತೀರಿ ಇವೆಲ್ಲಾ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡುವುದಾದರೆ ಹೆದರಿಕೆಯಾಗುತ್ತದೆ. ತಾವು ಯಾವುದೇ ಒಂದು ನಿರ್ಣಯವನ್ನು ತೆಗದುಕೊಳ್ಳಬೇಕಾದರೂ ಕಷ್ಟವಾಗುತ್ತದೆ. ಆದುದರಿಂದ ಅದು ಚಾನ್ಸಲರ್‌ಗೆ ಇರತಕ್ಕಂಥದ್ದು, ಸರ್ಕಾರಕ್ಕೆ ಇರತಕ್ಕಂಥದ್ದು ನಿಜವಾಗಿಯೂ ಆಕ್ಷೇಪಣಾರ್ಹವಾದುದು, ಹಾಗೂ ಬಹಳ ಗೊಂದಲವನ್ನು ಉಂಟು ಮಾಡುತಕ್ಕಂಥದ್ದು ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಕೋಟ್ಯಾಂತರ ರೂಪಾಯಿಗಳನ್ನು ಹಾಕಿ ಅದರ ಮೇಲೆ ಕಂಟ್ರೋಲ್ ಇಟ್ಟುಕೊಳ್ಳಬೇಡಿ ಎಂದು ಹೇಳುತ್ತೀರಾ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಲ್ಲಿ ನಿಮ್ಮವರೇ ಹೆಚ್ಚು ಜನ ಅಧಿಕಾರದಲ್ಲಿರುತ್ತಾರೆ. ಸುಮಾರು 70 ಜನ ಅಲ್ಲಿ ನಿಮ್ಮವರೇ ಸಿಂಡಿಕೇಟನಲ್ಲಿರುತ್ತಾರೆ. 29—30 ಜನರನ್ನು ಬಿಟ್ಟರೆ ಬಾಕಿಯವರನ್ನು ನೀವೇ ನಾಮಕರಣ ಮಾಡಿದಂಥವರು ಅಲ್ಲಿ ಇರುತ್ತಾರೆ. ಆದುದರಿಂದ ತಮಗೆ ಅಲ್ಲಿ ಹತೋಟಿ ಇಟ್ಟುಕೊಳ್ಳುವುದಕ್ಕೆ ಸಾಧ್ಯತೆ ಇದೆ. ಪ್ರತಿಯೊಂದು ಮಟ್ಟದಲ್ಲೂ ಸಹ ತಾವು ಹಸ್ತಕ್ಷೇಪ ಮಾಡುತ್ತಾ ಹೋದರೆ ಅವರು ಸ್ವತಂತ್ರವಾಗಿ ವ್ಯವಹಾರಗಳನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಅದು ಒಂದು ವಿದ್ಯಾ ಇಲಾಖೆಯ ಅಂಗವಾಗಿ ಕೆಲಸ ಮಾಡಬೇಕಾಗುತ್ತದೆ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಅಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಅಧಿಕಾರಿಗಳ ವಿಷಯದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಸರ್ವಿಸ್ ಅಂಡ್ ಕಂಡೀಷನ್ ಪ್ರೊಟೆಕ್ಟ್ ಮಾಡುವುದಕ್ಕೆ ಒಂದು ಕ್ಲಾಜ್‌ನ್ನು ಸೇರಿಸಬೇಕಾಗಿತ್ತು.

SRI K. ABDUL SUBHAN.—I don't think there is any necessity to have such a proviso to safeguard the interests of the University employees as the appointments are made by the Board.

ಶ್ರೀ ಎಚ್. ಟಿ. ಕೃಷ್ಣಪ್ಪ.—ಈಗ ಅಲ್ಲಿ ಕೆಲಸ ಮಾಡುತ್ತಿರತಕ್ಕಂಥವರ ಸರ್ವಿಸ್ ಕಂಡೀಷನ್ ಬಗ್ಗೆ ಒಂದು ರಕ್ಷಣ ಕೊಡತಕ್ಕಂಥದರ ಬಗ್ಗೆ ಒಂದು ಹೊಸ ಕ್ಲಾಜ್‌ನ್ನು ಹಾಕಿದ್ದರೆ ಒಳ್ಳೆಯದಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅದಕ್ಕೆ ಮಾನ್ಯ ಸದಸ್ಯರೇ ಉತ್ತರ ಹೇಳಿದರಲ್ಲಾ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಆದುದರಿಂದ ನಿಮ್ಮಲ್ಲಿ ಮನವಿ ಮಾಡಿಕೊಳ್ಳುವದೇನೆಂದರೆ ಈ ಆಫೀಸರ್‌ಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ತಾವು ಕೆಲವು ಆಫೀಸರ್‌ಗಳನ್ನು ಹೊರಗಡೆಯಿಂದ, ಅಂದರೆ ಕೇಂದ್ರ ಸರ್ಕಾರದ ನೌಕರರನ್ನು ತರಬೇಕು ಎನ್ನತಕ್ಕಂಥಾದ್ದನ್ನು ತೋರಿಸಿದ್ದೀರಿ. ಅದು ಅಷ್ಟು ಉಚಿತವಾಗಿ ಕಾಣುವುದಿಲ್ಲ. ಇಲ್ಲಿಯೇ ಸಮರ್ಥರಾಗಿರ ತಕ್ಕಂಥ

ವರು, ಅರ್ಹರಾಗಿತಕ್ಕಂಥವರು ಇದ್ದಾಗ್ಯೂ ಕೂಡ ಕೇಂದ್ರ ಸರ್ಕಾರ ನೌಕರರನ್ನು ಏತಕ್ಕೆ ತೆಗೆದು ಕೊಳ್ಳಬೇಕು ? ಇದರಿಂದ ನಮ್ಮಲ್ಲಿ ದಕ್ಷರೂ, ಯೋಗ್ಯರೂ, ಅರ್ಹರಾಗಿಲ್ಲರು ಇಲ್ಲವೆಂದು ಹೇಳಿ ಕೊಳ್ಳುವಂಥ ಭಾಗ ನಿಮ್ಮ ಭಾಗಕ್ಕೇ ಸೇರಿದ ಹಾಗಾಗುತ್ತದೆ. ಆದ್ದರಿಂದ ಇಲ್ಲಿಯೇ ಕೆಲಸ ಮಾಡತಕ್ಕಂಥವರು ಯಾರಿದ್ದಾರೆ ಅವರ ರಕ್ಷಣೆಗೆ ಯಾವುದೇ ವಿಧವಾದಂಥದಕ್ಕೆ, ಬರದ ಹಾಗೆ ಅವರ ಸರ್ವಿಸ್ ಕಂಡೀಷನ್ ಬಗ್ಗೆ ಒಂದು ಕ್ಲಾಜ್ ಹಾಕತಕ್ಕುಂಥದ್ದು ವಿಹಿತವಾದುದೆಂದು ಹೇಳುತ್ತೇನೆ. ಇನ್ನೊಂದು ಕ್ಲಾಜ್‌ನ್ನು ಇನ್‌ಸರ್ಟ್ ಮಾಡಬೇಕಾಗಿದೆ. ಅವರ ಸರ್ವಿಸ್ ಕಂಡೀಷನ್‌ಗೆ ಎಫೆಕ್ಟ್ ಆಗದ ರೀತಿಯಲ್ಲಿ ಬೇರೆ ನೌಕರರನ್ನು ನೇಮಕ ಮಾಡಿಕೊಳ್ಳು ವುದಕ್ಕೆ ಅವಕಾಶವಿದ್ದರೂ ಅವರ ಸರ್ವಿಸ್ ಕಂಡೀಷನ್‌ಗೆ effect ಆಗದ ಹಾಗೆ ನೇಮಕ ಮಾಡ ಬೇಕೆಂದು ಹೇಳುತ್ತೇನೆ. Not only in the interest of the persons concerned but also in the interest of the institution and also equity and justice this has got to be done.

ಆದ್ದರಿಂದ ಮಾನ್ಯ ಅಧ್ಯಕ್ಷರೇ, ಸರ್ವ ವ್ಯಾಪಿಯಾದಂಥ ಈ ಒಂದು ಅಧಿಕಾರದ ಜಾಲ ವಿಶ್ವವಿದ್ಯಾನಿಲಯದ ಮೇಲೆ ಹರಡಿ ಅದನ್ನು ನಿಶ್ಚೇತನಗೊಳಿಸತಕ್ಕಂಥ ಒಂದು ಪ್ರಯತ್ನ ಏನಿದೆಯೋ ಅದನ್ನು ಮಾತ್ರ ನಾನು ಖಂಡಿಸಿ, ಮತ್ತೆ ಸರ್ಕಾರ ಯಾವ ಒಂದು ಒಳ್ಳೆಯ ಉದ್ದೇಶದಿಂದ ಈ ಮಸೂದೆಯನ್ನು ತಂದಿದೆಯೋ ಆ ಒಂದು ಉದ್ದೇಶಕ್ಕಾಗಿ ಸ್ವಾಗತಿಸಿ, ಈಗಿರ ತಕ್ಕಂಥ ಲೋಪದೋಷಗಳನ್ನು ನಾನೇನು ಸೂಚಿಸಿದ್ದೇನೆ ಅವುಗಳನ್ನು ನಿವಾರಣೆ ಮಾಡಿಕೊಂಡು ಒಂದು ಸರ್ವಾಂಗೀಣ ಸುಂದರವಾದ, ಪರಿಪೂರ್ಣವಾದಂಥ ಒಂದು ಮಸೂದೆಯನ್ನು ಅವರು ತರಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ(ವೇಮಗಲ್).— ಮಾನ್ಯ ಉಪಾಧ್ಯಕ್ಷರೇ, ಈ ದಿನ ಮಾನ್ಯ ವಿದ್ಯಾ ಸಚಿವರು ನಮ್ಮ ರಾಜ್ಯದಲ್ಲಿರತಕ್ಕಂಥ 3 ವಿಶ್ವವಿದ್ಯಾನಿಲಯಗಳಿಗೆ ಏಕರೂಪವಾದಂಥ ಕಾಯಿದೆ ಯನ್ನು ತರುವ ಇಚ್ಛೆಯಿಂದ ಈ ಸಭೆಯ ಮುಂದೆ ಮಸೂದೆಯನ್ನು ಒಪ್ಪಿಗೆಗಾಗಿ ಇಟ್ಟಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡದೇ ಇದ್ದರೂ ಕೂಡ ಸ್ವಲ್ಪ ಮಟ್ಟಿಗೆ ಕೆಲವು ವಿಭಾಗಗಳ ಬಗ್ಗೆ ಸ್ವಾಗತ ಮಾಡುತ್ತೇನೆ. ವಿದ್ಯಾಭ್ಯಾಸ ಎಂಥಾದ್ದು ಇರಬೇಕು ? ಹೇಗೆ ಇರಬೇಕು ? ಎನ್ನುವುದನ್ನು ಕೂಡ ಹಿಂದೆ ಮಾತನಾಡಿದ ಮಾನ್ಯ ಮಿತ್ರರು ಹೇಳಿದ್ದಾರೆ. ಅದನ್ನು ನಾನು ಪುನರುಚ್ಚಾರ ಮಾಡಿದರೆ ಅದು ವೇಳೆಯ ಅಪವ್ಯಯ ಮಾಡಿದ ಹಾಗಾಗುತ್ತದೆ. ಆದುದರಿಂದ ಆ ವಿಷಯಕ್ಕೆ ನಾನು ಹೆಚ್ಚಾಗಿ ಹೋಗುವುದಿಲ್ಲ. ಈ ವಿಶ್ವವಿದ್ಯಾನಿಲಯ ಕೆಲವು ಅಂಗಸಂಸ್ಥೆಗಳೇ ನಿವೆ, ಮುಖ್ಯವಾಗಿ ಸಿಂಡಿಕೇಟ್, ಈ ಸಿಂಡಿಕೇಟಿನಲ್ಲಿ ಸುಮಾರು 70-80ರವರೆಗೆ ಜನ ಇದ್ದಾರೆ, ಈ ಪಟ್ಟಿಯನ್ನು ನೋಡಿದರೆ, ನಮ್ಮ ಸರ್ಕಾರದಲ್ಲಿ ಎಂಥೆಂಥವರು ಇದ್ದಾರೆ ಎನ್ನುವುದನ್ನು ನೋಡಬೇಕಾಗಿದ್ದರೆ ಈ ಪಟ್ಟಿಯನ್ನು ನೋಡಿದರೆ ಎಲ್ಲರಿಗೂ ಮಾಹಿತಿ ಸಿಕ್ಕಂತೆ ಆಗುತ್ತದೆಂದು ಅನ್ನಿಸುತ್ತದೆ. ಅದು ಸುಮಾರು ಒಂದೂವರೆ ಪೇಜಿನಷ್ಟು ಇದೆ. ಇದರಲ್ಲಿ ಸರ್ಕಾರದ ಕೃಪ ಕಟಾಕ್ಷ ಇರತಕ್ಕಂಥವರು 40ಕ್ಕೂ ಮೇಲ್ಪಟ್ಟಿರುತ್ತಾರೆ. ಸರ್ಕಾರದ ನೇರ ಕೃಪಾಕಟಾಕ್ಷದಲ್ಲಿ ರುವವರು, ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥವರು ಇವತ್ತಿನ ದಿವಸ ವಿಶ್ವವಿದ್ಯಾನಿಲಯದಲ್ಲಿ ಇರಬೇಕೇ ?

MR DEPUTY SPEAKER —The Hon. Member may continue his speech tomorrow. Now the House will stand adjourned to meet tomorrow at 1-00 p.m.

The House adjourned at Six of the clock to meet again at One of the Clock on Friday the 20th February 1976.